ಕರ್ಮವೀರ

ಸಂಪುಟ [illegible]] [ಸಂಚಿಕೆ [illegible]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ

★

ರಾಜಗುಣ

★

(ಸಾಂಗತ್ಯ)


ಹಗೆಯಾದರು ಸಂತ-
ನಾತಗೆ ಸಮ್ಮತ
ರೋಗಿಗೆ ಔಷಧದಂದದಲಿ
ಗೆಳೆಯನಾದರು ದುಷ್ಟ-
ನನು ಬಿಟ್ಟು ಕಳೆಯುವ
ಹಾವು ಕಚ್ಚಿದ ಬೆರಳಂದದಲಿ

ಲೋಕದ ಕ್ಷೇಮಕೆ
ದೋಷಿಯು ದಂಡನೆ
ಸಂತಾನಕೆ ಹೆಣ್ಣು ಪರಿಣಾಹ
ಧೀರ ದಿಲೀಪನ
ಅರ್ಥದ ಕಾಮದ
ವ್ಯಾಪ್ತಿಯೆಲ್ಲವು ಧರ್ಮೈಕರೂಪ

ಸಲಹಿದ ಕಾರಣ
ಹೊರೆದ ಕಾರಣ ಮತ್ತೆ
ನಿಲಿಸಿದ ಕಾರಣ ನೀತಿಯೊಳು
ಪ್ರಜೆಗಳ ಪಿತನಾ-
ತನೆ ನಿಜಪಿತರೆಲ್ಲ
ಕೇವಲ ಜನ್ಮಕೆ ಹೇತುಗಳು

—ರಘುವಂಶದಿಂದ

★



ತಾಜಮಹಲು

-★-

ಜಗತ್ತಿನ ಏಳು ಆಶ್ಚರ್ಯಕರ
ವಸ್ತುಗಳಲ್ಲಿ ಇದೊಂದು ಎನಿಸಿದೆ.
ಈ ಅಮರ ಶಿಲ್ಪಕಲೆಯ ಸೃಷ್ಟಿಗೆ
ಮುಮತಾಜಳ ನೆನಪಿಗಾಗಿ
ಶಹಜಹಾನ ಕಾರಣನಾದುದು
ಇತಿಹಾಸ ಪ್ರಸಿದ್ಧವಿದೆ.

KARMAVEER - KANNADA ILLUSTRATED WEEKLY, HUBLI

ಚಿತ್ರ ಕತೆ

ಇಂದ್ರಜಾಲ*

★
ಬಿ. ಸುಬ್ರಾಯ ಅಡಿಗ;
'ಕನ್ನಡ ಜಾಣ' 'ವಿಶಾರದ'
★

ಖಾನ್ ಸಾಹೇಬರು ತಮ್ಮ ಕಾರ್ಯಾಲಯದ ಕೋಣೆಯೊಂದರಲ್ಲಿ ಕುಳಿತು ಏನನ್ನೋ ನೋಡುತ್ತಿದ್ದರು. ಇಷ್ಟರಲ್ಲೇ ಬಾಗಿಲ ಬಳಿ.. "ಜಾಬು ಒಳಬರಲೇ" ಎಂಬ ಮಂಜುಲ ಧ್ವನಿಯೊಂದು ಕೇಳಬಂತು. ಪ್ರಶ್ನೆ ಬಂಗಾಳೀ ಭಾಷೆಯಲ್ಲಿತ್ತು. ಖಾನ್ ಸಾಹೇಬರು ಬೆರಗಾಗಿ ಅತ್ತ ನೋಡಿದರು. ಹುಡುಗಿಯೊಬ್ಬಳನ್ನು ಕಾಣುತ್ತಲೇ ಅವರ ಮುಖ ಅರಳಿತು. "ಬನ್ನಿರಿ"— ಬಂಗಾಳಿಯಲ್ಲೇ ಉತ್ತರವಿತ್ತರು.

ಹುಡುಗಿಯು ಖಾನ್ ಸಾಹೇಬರ ಹತ್ತಿರವೇ ಇದ್ದ ಕುರ್ಚಿಯೊಂದರಲ್ಲಿ ಕುಳಿತು "ನನ್ನ ಹೆಸರು ಸಂಯುಕ್ತೆ" ಎಂದಳು.

"ತಮ್ಮ ಪರಿಚಯದಿಂದ ಬಹಳ ಸಂತೋಷವಾಯಿತು"— ಅವಳನ್ನು ಹೊಗಳುವ ಕುತೂಹಲವನ್ನಡಗಿಸಿಕೊಂಡು ಇಷ್ಟೇ ಹೇಳಿದರು. ಸಂಯುಕ್ತೆ ಮುಂದುವರಿಸಿದಳು. "ತಮ್ಮ ದೊಡ್ಡ ಹೆಸರನ್ನು ಕೇಳಿದ್ದೆ. ಬಡವರು, ಸ್ತ್ರೀಯರು ಮೊದಲಾದವರಿಗೆ ಸಹಾಯ ಮಾಡುವವರು ತಾವೊಬ್ಬರೇ ಎಂದು ಜನರೆನ್ನುತ್ತಾರೆ" ನಮ್ಮ ಸ್ಥಿತಿ ಬಹಳ ಕೆಟ್ಟಿದೆ. ಈಗಂತೂ ಹುಟ್ಟಿಯು ಕಾಲ! ಅದಕ್ಕಾಗಿ ತಮ್ಮ ಬಳಿಗೆ ಸಹಾಯಕ್ಕಾಗಿ ಬಂದೆ"

ಖಾನ್ ಸಾಹೇಬರಿಗೆ ಬೇಕಾದುದೂ ಇದೆ. ಅವರಿಗೆ ಮದುವೆಯಾಗಿರಲಿಲ್ಲ. ಯಾರನ್ನಾದರೂ ವರಿಸಬೇಕೆಂದು ಹೊಂಚುಹಾಕುತ್ತಿದ್ದರು. ಆದರೆ ಅವರ ಕಪ್ಪು ಬಣ್ಣವನ್ನೂ ಭೀಕರ ಮುಖವನ್ನು ಕಂಡು ಎಲ್ಲರೂ ಓಡಿ ಹೋಗುವವರೆ. ಹೀಗಾಗಿ ನಿರುಪಾಯರಾಗಿದ್ದರು.

ಅವರ ಹುಟ್ಟೂರು ಪಂಜಾಬು. ತಂದೆ ಸಣ್ಣ ಅಂಗಡಿಯ ವ್ಯಾಪಾರಿಗಳು. ಇವರು ಅಲ್ಲಿಂದ ಕಲಕತ್ತೆಗೆ ಬಂದು ದೊಡ್ಡ ವ್ಯಾಪಾರಕ್ಕೆ ತೊಡಗಿದರು. ದೇವರ ಕೃಪೆಯಿಂದ ಇಲ್ಲಿ ಲಕ್ಷಗಟ್ಟಲೆ ಸಂಪಾದಿಸಿಯೂ ಬಿಟ್ಟರು.

ಇಷ್ಟಾದರೂ ಅವರು ಕಡುಲೋಭಿಗಳು. ಒಂದು ಪೈ ಕೊಡಬೇಕಾಗಿ ಬಂದರೂ ತಾವು ದಿವಾಳಿಯಾಗುವೆನೆಂಬ ಭಯ ಅವರ ಮುಖದಿಂದ ಹೊರಸೂಸುತ್ತಿತ್ತು. ಆದರೆ ಸೌಂದರ್ಯಕ್ಕೆ ಬೆಲೆಗಟ್ಟುವುದರಲ್ಲಿ ಮಾತ್ರ ಅವರ ಮನಸ್ಸು ಉದಾರವಾಗುತ್ತಿತ್ತು.

ಸಂಯುಕ್ತೆಯ ಪರಿಸ್ಥಿತಿಯ ಅರಿವು ಅವರಿಗಾಯಿತು, ಅವಳ ಸೌಂದರ್ಯವನ್ನು ಕಂಡು ಮುಗ್ಧರಾದರು. ಇಂತಹ ಸುಸಂದರ್ಭವನ್ನು ಬಿಟ್ಟುಕೊಡುವುದು ಮೂರ್ಖತನವೆಂದು ಬಗೆದು— "ನೋಡಿ! ಇದು ಕಾರ್ಯಾಲಯ! ತಾವು ಈ ಸಂದರ್ಭವಾಗಿ ನನ್ನ ಮನೆಯಲ್ಲೇ ಮಾತಾಡಿದರೆ ಉತ್ತಮವಲ್ಲವೆ?" ಎಂದರು.

ಹೌದು! ಇಂತಹ ಕಾರ್ಯಗಳಿಗೆ ಮನೆಯೇ ಉತ್ತಮವೆಂದು ಯಾರಿಗೆ ಗೊತ್ತಿಲ್ಲ? "ಸರಿ! ತಾವೀಗಲೇ ಮನೆಗೆ ಹೋಗುವಿರಲ್ಲವೆ? ಈಗಂತೂ ಮಧ್ಯಾಹ್ನದ ಬಿಡುವಿನ ವೇಳೆಯಾಯಿತಷ್ಟೆ?"— ಹುಡುಗಿ ಅವರಿಗಿಂತಲೂ ಹೆಚ್ಚು ಅವಸರದಲ್ಲಿದ್ದಳು. "ಹೌದು! ಹೌದು" ಗಡಿಯಾರ ನೋಡುತ್ತಾ ಸಾಹೇಬರು ಎದ್ದು ನಿಂತರು. ಸಂಯುಕ್ತೆ ಅವರೊಡನೆಯೇ ಹೊರಬಂದಳು.

ಮೋಟರನ್ನೇರಿ ಖಾನ್ ಸಾಹೇಬರು ಸ್ನೇಹದಿಂದ "ಕುಳಿತುಕೊಳ್ಳಿ" ಎಂದರು. ಮುಗುಳು ನಗುತ್ತಾ— "ತಾವು ಹೋಗಿ! ನಾನೀಗಲೇ ಬಂದೆ!" ಎಂದಳು ಸಂಯುಕ್ತೆ. ಇದರಿಂದ ಸಾಹೇಬರು ತುಸು ನಿರಾಶರಾದರು.

"ತಮಗೆ ನನ್ನ ಮನೆ ಗೊತ್ತಿದೆಯೋ"

"ಹೌದು".

"ನಿರುಪಾಯರಾಗಿ ಅವರು ಮನೆಯ ಕಡೆಗೆ ಹೋದರು. ಮನಸ್ಸಿನಲ್ಲೇ— "ಇಂದಲ್ಲದಿದ್ದರೆ ನಾಳೆಯಾದರೂ ಬಂದಾಳು. ರೂಪ್ಯಾ ಬೇಕಾದ ಮೇಲೆ ನನ್ನ ಕೈಯಿಂದ ಹೇಗೆ ಪಾರಿಹೋಗುವಳು" ಎಂದು ಯೋಚಿಸಿದರು.

ಮೋಟಾರಿನಿಂದಿಳಿದು ಮನೆಯೊಳಗೆ ಕಾಲಿಟ್ಟದ್ದರಷ್ಟೆ. ಚಕಿತರಾಗಿ ಹಾಗೆಯೇ ನಿಂತರು. ಎದುರು ಕೋಣೆಯಲ್ಲಿ ಸಂಯುಕ್ತೆ ಖಾನ್ ಸಾಹೇಬರ ಪ್ರತೀಕ್ಷೆಯಲ್ಲೇ ಕುಳಿತಿದ್ದಳು! ಅವರಿಗೆ ರೋಮಾಂಚವಾಯಿತು. ಈಗ ತಾನೆ ಕಾರ್ಯಾಲಯದ ದಾರಿಗೆ ಬಿಟ್ಟು ಬಂದ ಹುಡುಗಿ ಇಷ್ಟು ಬೇಗನೆ ಇಲ್ಲಿಗೆಂತು ಬಂದಳು? ಮೋಟಾರಿಗಿಂತಲೂ ವೇಗವಾಗಿ ಯಾರಾದರೂ ಹೇಗೆ ಬಂದಾರು?

ಥಟ್ಟನೆ ಅವರಿಗೆ ತಂದೆಯ ಮಾತು ನೆನಪಾಯಿತು. "ಬಂಗಾಲದ ಜನ ಮಾಯಾ ಮಂತ್ರಗಳನ್ನರಿತವರು! ಅಲ್ಲಿಯ ಸ್ತ್ರೀಯರು ಜನರನ್ನು ಗಿಳಿಕುರಿಗಳನ್ನಾಗಿ ಮಾಡುತ್ತಾರೆ. ಮಗನೆ! ಜಾಗ್ರತೆಯಾಗಿರು!!" ಎಂದು ಆಗಾಗ ತಂದೆಯವರು ಎಚ್ಚರವೀಯುತ್ತಿದ್ದರು.

ಬಾಲ್ಯದಿಂದಲೂ ಭೂತ ಪ್ರೇತಗಳ ಭಯ ಅವರ ರಕ್ತಗತವಾಗಿತ್ತು. ಅದಕ್ಕಾಗಿ ಎಷ್ಟೋ ಯಂತ್ರಗಳನ್ನು ಕಟ್ಟಿಕೊಂಡಿದ್ದರು

ಈಗ ತಂದೆ ತೀರಿದ್ದರೂ ಅವರ ಮಾತು ಖಾನ್ ಸಾಹೇಬರ ಅನುಭವಕ್ಕೆ ಬರತೊಡಗಿತು. "ನಿಶ್ಚಯವಾಗಿಯೂ ಈ ಹುಡುಗಿ ಮಾಯೆಯನ್ನರಿತವಳು" ಎಂದು ಅವರೆಣಿಸಿದರು. ಎದೆ ಢವಢವ ಬಡಿಯತೊಡಗಿತು.

ಸಂಯುಕ್ತೆ ನಗುತ್ತಾ— "ತಾವು ಬಂದು ಬಿಟ್ಟಿರಾ!" ಎಂದು ಪ್ರಶ್ನಿಸಿದಳು.

"ಒಂದು ನಿಮಿಷ ನಿಲ್ಲಿರಿ; ನಾನೀಗಲೇ ಬಂದೆ". ಎಂದು ತಡವರಿಸುತ್ತಾ ಹೇಳಿ ಅವರು ಅಡಿಗೆ ಮನೆಗೆ ಧಾವಿಸಿದರು. "ಈ ಹುಡುಗಿ ಯಾವಾಗ ಬಂದಳು?" ಎಂದು ಅಡಿಗೆಯವನಿಗೆ ಕೇಳಿದರು.

ಯಜಮಾನರ ಮುಖವೇಕೆ ಹೀಗೆ ಇನ್ನಷ್ಟು ಕಪ್ಪೇರಿದೆ ಎಂದು ಅಡಿಗೆಯವನರಿಯದಾದ. "ಈಗ ತಾನೆ! ತಾವು ಬರುವುದಕ್ಕಿಂತ ಅರೇಳು ಮಿನಿಟು ಮೊದಲಿರಬಹುದು."

"ಏನು? ಸರಿಯಾಗಿ ಬೊಗಳು"— ಅವರು ಗರ್ಜಿಸಿದರು.

"ನಾನು ನಿಜವನ್ನೇ ಹೇಳುತ್ತಿದ್ದೇನೆ ಸ್ವಾಮಿ! ಅವಳು ಬಂದ ಮೇಲೆ ನಾಲ್ಕು ರೊಟ್ಟಿಗಳನ್ನು ಸುಟ್ಟು ಮುಗಿಸಿದೆ"

ಇದಕ್ಕೇನರ್ಥ? ನಾನು ಕಾರ್ಯಾಲಯದಿಂದ ಹೊರಟಾಗಲೇ ಇಲ್ಲಿಗೆ ಬಂದಳೆಂದರೆ..? ಗಾಳಿಯಲ್ಲಿ ಹಾರಿಬಂದಳೆ?

ಈಗ ಅವರ ಅಳಿದುಳಿದ ಧೈರ್ಯವೂ ಮಾಯವಾಯಿತು. "ರೊಟ್ಟಿಯೆಲ್ಲಾ ಸುಟ್ಟು ಹೋದರೂ ಹೋಗಲಿ. ನನ್ನ ಜೊತೆ ಮಾತ್ರ ಬಿಡಬೇಡ" ಎಂದು ಅಡಿಗೆಯವನಿಗೆ ಎಚ್ಚರಿಸಿ ಮನಸ್ಸಿನಲ್ಲೇ ಕುರಾನಿನ ವಾಕ್ಯಗಳನ್ನುಚ್ಚರಿಸಲಾರಂಭಿಸಿದರು. ಅವರು ಭೂತಪ್ರೇತಗಳನ್ನೋಡಿಸುವ ಮಂತ್ರಗಳನ್ನು ತಂದೆಯಿಂದ ಕಲಿತಿದ್ದರು. ಅವುಗಳಲ್ಲಿ ಹಲವನ್ನು ಇಂದು ಪರೀಕ್ಷಿಸಿದರು. ಆದರೆ ಯಾವುದೂ ಫಲಿಸಲಿಲ್ಲ. ಹುಡುಗಿ ಮಾಯವಾಗಲೂ ಇಲ್ಲ; ಹಾರಿ ಹೋಗಲೂ ಇಲ್ಲ.

ಅಡಿಗೆಯವನನ್ನು ಮುಂದಿಟ್ಟುಕೊಂಡು ಖಾನ್ ಸಾಹೇಬರು ಸಂಯುಕ್ತೆಯಲ್ಲಿಗೆ ಬಂದರು. ತಮ್ಮೆಲ್ಲ ಸಾಹಸವನ್ನೂ ಕೂಡಿಸಿ— "ಸಂಯುಕ್ತಾದೇವಿಯವರೆ! ಕ್ಷಮಿಸಿ! ಈಗ ನನಗೊಂದು ಅಗತ್ಯದ ಕೆಲಸ ಬಂದುಬಿಟ್ಟಿತು. ತಾವು ಮತ್ತೆಂದಾದರೂ ಬನ್ನಿ." ಎಂದರು. ಒಳ್ಳೇದು ನಮಸ್ಕಾರ! ನಮಸ್ಕಾರ!! ಎಂದು ಮುಗುಳು ನಗುತ್ತಾ ಸಂಯುಕ್ತೆಯು ಹೊರಟು ಹೋದಳು. ಈಗ ಅವರಿಗೆ ಹೋದ ಪ್ರಾಣ ಮರಳಿ ಬಂದಂತಾಯಿತು. ಆದರೆ ಮರುದಿನವೇ ಕಚೇರಿಯಲ್ಲಿ ಪುನಃ ಸಂಯುಕ್ತೆ ಕಾಣಿಸಿಕೊಂಡಳು.

ಸಾಹೇಬರು ಹೆದರಿ ಗಂಟೆ ಬಾರಿಸಿದರು. ಎಲ್ಲ ಕೆಲಸಗಾರರೂ ಓಡಿ ಬಂದರು. ಇಂತಹ ಸಂದರ್ಭಗಳಲ್ಲಿ ತಮ್ಮನ್ನೆಲ್ಲ ಓಡಿಸುತ್ತಿದ್ದವರು ಇಂದೇಕೆ ಬರ ಹೇಳಿದರೆಂದು ಎಲ್ಲರಿಗೂ ಆಶ್ಚರ್ಯ.

ಈಗ ಸಾಹೇಬರಿಗೆ ತುಸು ಧೈರ್ಯವಾಯಿತು. "ಓಹೋ! ತಾವು ಸುಮ್ಮನೆ ಕಷ್ಟಪಟ್ಟಿರಿ. ಇಂತಹ ಮಾತುಕತೆಯನ್ನು ಮನೆಯಲ್ಲಿ ನಡೆಸುವುದೇ ಉತ್ತಮವೆಂದು ತಮ್ಮೊಡನೆ ನಿನ್ನೆಯೇ ಹೇಳಿರುವೆನಲ್ಲ ?"

ಸಂಯುಕ್ತೆಗೆ ಬೇಸರವಾಗಲಿಲ್ಲ. ನಗ್ಗುತ್ತಲೇ ಹೊರಡಲುದ್ಯುಕ್ತಳಾದಳು.

ಈಗಂತೂ ತಪ್ಪಿತು— ಆದರೆ ಇಂದು ಮನೆಗೆ ಬಂದರೆ ಮತ್ತೆ ಗಂಡಾಂತರ! ಎಂದು ಯೋಚಿಸಿ ಅವಳನ್ನು ತಡೆದು— "ನೋಡಿ! ಇನ್ನು ಐದಾರು ದಿನಗಳ ವರೆಗೂ ನಾನು ತಮಗೆ ಸಿಕ್ಕಲಾರೆ. ನನಗೆ ಬೇರೆಲ್ಲೋ ಹೋಗಲಿದೆ!" ಎಂದರು. ಅವರಿಗೆ ನಿಜವಾಗಿಯೂ ಮೂರು ದಿನಗಳ ಬಳಿಕ ಪ್ರಯಾಣ ಬೆಳೆಸಲೇಬೇಕಿತ್ತು. "ಯಾವೆಂದು ಹೋಗುವಿರಿ" "ಇಂದಿಗೆ ನಾಲ್ಕನೇ ದಿನ." "ಸಂಜೆಯ ಗಾಡಿಯಲ್ಲಿ ಹೋಗುವಿರಾ? "ಅಲ್ಲ! ಬೆಳಗಿನ ಗಾಡಿಯಿಂದ! "ಆದರೆ ನಾನು ಹಿಂತಿರುಗುವ ವರೆಗೂ ತಮ್ಮನ್ನು ಭೆಟ್ಟಿಯಾಗಲಾರೆ." "ಹೋಗುವುದೆಲ್ಲಿಗೆ?" "ಢಾಕಾಕ್ಕೆ" "ಒಳ್ಳೇದು! ನಮಸ್ಕಾರ."

ಅರೇಳು ದಿನಗಳ ವರೆಗಾದರೂ "ಪೀಡೆ" ತೊಲಗಿತಲ್ಲ. ಪುನಃ ಬಂದೇ ಬಿಟ್ಟಿತು.

ಆದರೆ ನಾಲ್ಕನೇ ದಿನ ಸ್ಟೇಶನ್ನಿನಲ್ಲಿ 'ಪೀಡೆ' "ತಮ್ಮನ್ನು ಕಳುಹಿಸಲೆಂದು ಬಂದೆ" ಸಂಯುಕ್ತೆಯೆಂದಳು.

ಖಾನ್ ಸಾಹೇಬರು ಸ್ತಬ್ಧರಾದರು. "ನನ್ನೊಟ್ಟಿಗೆ ಢಾಕಾಕ್ಕೆ ಬರುವಿರೊ ?"

ಅವರ ಗಾಬರಿಯನ್ನು ಕಂಡು ಸಂಯುಕ್ತೆಯು ತುಸು ನಕ್ಕು— "ಇಲ್ಲ! ತಮ್ಮನ್ನು ಬೀಳ್ಕೊಡಲೆಂದು ಮಾತ್ರ ಬಂದೆ. ತಮಗೇನು ಕೆಡುಕೆನಿಸಿತೆ? "

"ಇಲ್ಲ; ಇಲ್ಲ; ಧನ್ಯವಾದ. ತಾವೂ ಎಲ್ಲಿಗೋ ಹೋಗುವಿರೆಂದು ನಾನೆಣಿಸಿದ್ದೆ. ಹಾಗಿದ್ದರೆ ತಮ್ಮೊಡನಿದ್ದಾಗ ದಾರಿ ಸುಲಭವಾಗಿ ಸಾಗುವುದಲ್ಲ! ಎಂದು ಕೇಳಿದೆನಷ್ಟೆ"

"ರೈಲನ್ನೇರಲು ನನ್ನಂಥ ಬಡವಳ ಹತ್ತಿರ ಹಣವೆಲ್ಲಿದೆ ? ತಮ್ಮೊಡನೆ ಬರಬೇಕೆಂಬ ಇಚ್ಛೆಯೇನೋ ಇತ್ತು. ಇರಲಿ! ಸಾಧ್ಯವಾದರೆ ಇನ್ನೊಮ್ಮೆ ಸಿಕ್ಕುವೆ !"

ಹೀಗಿದ್ದರೂ ಇವಳೆಲ್ಲಾದರೂ ತಮ್ಮ ಡಬ್ಬಿಯಲ್ಲೇ ನುಗ್ಗುವಳೋ. ಎಂದು ಅವರಿಗೆ ತುಂಬಾ ಭಯ. ಏರಿದಳೆಂದರೆ ಅಪಾಯದ ಸರಪಣಿಯನ್ನೆಳೆದು ಗಾಡಿಯನ್ನು ನಿಲ್ಲಿಸಿ ಬಿಡುವುದೆಂದೇ ಅವರು ನಿಶ್ಚಯಿಸಿದರು. ಆದರೆ ದೇವರ ದಯೆಯಿಂದ ಸಂಯುಕ್ತೆ ಗಾಡಿಯೇರಲಿಲ್ಲ ಪ್ಲೇಟ್‍ಫೋರ್ಮಿನ ಮೇಲೆ ಕೈಬೀಸುತ್ತಾ ನಿಂತುಕೊಂಡಿದ್ದಳು.

ತನ್ನ ಕಣ್ಣು ತಪ್ಪಿಸಿ ಬೇರೆ ಡಬ್ಬಿಯೇರುತ್ತಾಳೋ ಎಂದು ಸಂದೇಹದಿಂದ ಖಾನ್ ಸಾಹೇಬರು ಸ್ಟೇಶನ್ ಕಣ್ಮರೆಯಾಗುವವರೆಗೂ ಅವಳನ್ನೇ ನೋಡುತ್ತಾ ನಿಂತಿದ್ದರು. ಕಡೆಗೆ ಸಮಾಧಾನದುಸಿರುಬಿಟ್ಟು ಡಬ್ಬಿಯಲ್ಲಿ ಕುಳಿತುಕೊಂಡರು.

ದೈವವಶಾತ್ ಆ ಡಬ್ಬಿಯಲ್ಲಿ ಅವರೊಬ್ಬರೇ ಇರಬೇಕೆ? ಈಗೆಲ್ಲಾದರೂ ಸಂಯುಕ್ತೆಯು ಬಂದರೆ ಸಂಕಟವೇ ಸರಿ ಎಂದೆಣಿಸಿ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚಿಕೊಂಡರು. ಇಷ್ಟಾದರೂ ಅವರ ಭಯ ದೂರವಾಗಲಿಲ್ಲ.

ಅವರು ಯೋಚಿಸತೊಡಗಿದರು— ತನ್ನ ಹತ್ತಿರ ಹಣವಿಲ್ಲವೆಂದು ಅವಳೆಂದಿದ್ದಳು. ಹೀಗಿರಲು ರೈಲು ಕಣ್ಮರೆಯಾಗುವ ವರೆಗೂ ಪ್ಲೇಟ್‍ಫೋರ್ಮಿನಲ್ಲೇ ನಿಂತಿದ್ದು ಒಮ್ಮೆಲೇ ಗಾಳಿಯಲ್ಲಿ ಹಾರಿ ಇಲ್ಲೇಕೆ ಬಂದು ಬಿಡಬಾರದು ?

ದಾರಿಯುದ್ದಕ್ಕೂ ಅವರು ಭೂತೋಚ್ಚಾಟನ ಮಂತ್ರಗಳನ್ನೆಲ್ಲ ಪಠಿಸಹತ್ತಿದರು. ಅಪಾಯದ ಸರಪಣಿಯನ್ನೆಳೆಯಲು ಬಲಗೈಯನ್ನು ಮುಂದು ಮಾಡಿಯೇ ಇಟ್ಟುಕೊಂಡಿದ್ದರು. ಪ್ರಾಯಶಃ ಅವರ ಮಂತ್ರ ಪ್ರಭಾವವಿರಬೇಕು. ಸಂಯುಕ್ತೆಯು ಡಬ್ಬಿಯಲ್ಲೇನೂ ಪ್ರಕಟವಾಗಲಿಲ್ಲ. ಅವರೆಂತೂ ಹಾಗೆಯೇ ನಂಬಿದ್ದರು.

"ಢಾಕಾ" ಬಂತು. ಸಾಹೇಬರು ಒಂದು ಕಿಟಕಿ ತೆರೆದು ಪ್ಲೇಟಫೋರ್ಮಿನತ್ತ ನೋಡತೊಡಗಿದರು. ದೂರದಿಂದಲೇ 'ಸಂಯುಕ್ತೆಯಂತೆಯೇ ಒಬ್ಬಳು ನಿಂತಿದ್ದುದು ತೋರಿಬರುತ್ತಿತ್ತು. ಪ್ಲೇಟ್‍ಫಾರ್ಮು ಸಮೀಪಿಸುತ್ತಿದ್ದಂತೆ ಅವರ ಊಹೆ ನಿಜವಾಗುತ್ತಾ ಬಂತು. ಹೌದು! ಸಂಯುಕ್ತೆಯು ಅವರ ಪ್ರತೀಕ್ಷೆಯಲ್ಲೇ ನಿಂತುಕೊಂಡಿದ್ದಳು.

ಸಾಹೇಬರು ತಣ್ಣಗಾದರು. "ಇವಳನ್ನು ಮುನ್ನೂರು ಮೈಲು ದೂರದ "ಸ್ಯಾಲದಾ" ಸ್ಟೇಶನ್ನಿನಲ್ಲಿ ಬಿಟ್ಟು ಬಂದಿರುವೆ. ಈ ಮಾಟಗಾತಿಯು ನನ್ನನ್ನೇ ಹಿಂಬಾಲಿಸಿ ಬಂದಿದ್ದಾಳೆ. ಈಗ ಒಂದೋ ಗಿಳಿಯಾಗಿ ಇವಳ ಪಂಜರದಲ್ಲಿ ಇರಬೇಕು; ಅಥವಾ ಕುರಿಯಾಗಿ ಗೂಟಕ್ಕೆ ಸಿಕ್ಕಿಕೊಂಡಿರಬೇಕು. ತಂದೆಯವರ ಮಾತು ನಿಜವಾಯಿತು.

ಗಾಡಿ ಪ್ಲಾಟಫೋರ್ಮಿಗೆ ಹೋಗಿ ನಿಂತಿತು. ಸಂಯುಕ್ತೆಯು ಎಲ್ಲಾ ಡಬ್ಬಿಗಳಲ್ಲೂ ಇಣಿಕಿ ಸಾಹೇಬರನ್ನು ಹುಡುಕಿದಳು. ಅವಳ ಮುಖದ ಮೇಲೆ ಮಂದಹಾಸವು ನರ್ತಿಸಿ ನಿರ್ಜೀವವಾಗಿತ್ತು.

ಸಾಮಾನೆಂದರೆ ಒಂದು ಸಣ್ಣ ಪೆಟ್ಟಿಗೆ ಮಾತ್ರ ಇತ್ತು. ಆದರೆ ಸಾಹೇಬರು ಇಬ್ಬರು ಕೂಲಿಗಳನ್ನು ಕರೆದರು.

ಸಂಯುಕ್ತೆಯು ಕೂಲಿಗಳಿಗೆ ಹೋಗಲು ಹೇಳಿ, ತಾನೇ ಅದನ್ನು ಹಿಡಿದುಕೊಂಡಳು.

ಬೇರಾವ ಸಂದರ್ಭವಾಗಿದ್ದರೂ ಅವರಿಗೆ ತುಂಬ ಹರುಷವಾಗುತ್ತಿತ್ತು. ಆದರಿಂದು ಏಕಾಕಿಯಾಗಿ ಅವಳೊಡನೆ ತಿರುಗಲು ಭಯವಾಗುತ್ತಿತ್ತು. ಅದಕ್ಕಾಗಿ —

"ಬೇಡ ! ಬೇಡ ! ತಾವು ಕಷ್ಟಪಡಬೇಡಿ. ಕೂಲಿಗಳೇ ತರಲಿ" ಎಂದರು.

"ಅದೇಕೆ ? ನಾನು ತಮ್ಮೊಟ್ಟಿಗೇ ಇದ್ದು ತಮ್ಮ ಊಟ ವಸತಿಗಳ ವೆಚ್ಚವನ್ನು ಹೆಚ್ಚಿಸುತ್ತೇನೆಂದು ಹೆದರುತ್ತೀರಾ ? ಹಾಗೇನೂ ಗಾಬರಿ ಬೇಡ. ತಮ್ಮನ್ನು ಇಲ್ಲಿಗೇ ತಲುಪಿಸಿ ಹೊರಟು ಹೋಗುತ್ತೇನೆ." ಹೀಗೆಂದು ಅವಳು ಪ್ಲಾಟ್‍ಫಾರ್ಮಿನ ಬಾಗಿಲ ತನಕ ಬಂದು ಹಿಂದಿರುಗಿದಳು. ಖಾನ್ ಸಾಹೇಬರು ಸುಲಭದಲ್ಲಿಯೇ ಬಿಡುಗಡೆ ಹೊಂದಿದರು.

ಕಲಕತ್ತೆಯಿಂದ ಮರಳಿದ ಬಳಿಕ ಅವರು ಎಲ್ಲಕ್ಕಿಂತ ಮೊದಲು ಒಬ್ಬ ಫಕೀರನನ್ನು ಭೆಟ್ಟಿಯಾಗಿ ತಮ್ಮ ಪರಿಸ್ಥಿತಿಯನ್ನು ನಿವೇದಿಸಿಕೊಂಡರು. ಫಕೀರನು ಅವರಿಗೊಂದು ಯಂತ್ರವನ್ನಿತ್ತು—

"ಇದರ ಬಲದಿಂದ ತಮ್ಮ ಮೇಲೆ ಯಾವ ಮಾಟವೂ ನಡೆಯಲಾರದೆಂ"ದು ಧೈರ್ಯ ತುಂಬಿಸಿ ಕಳುಹಿದನು.

ಮರುದಿನವೇ ಮತ್ತೊಬ್ಬ ಫಕೀರನಿಂದ ತಾವು ಗಿಳಿ ಕುರಿಗಳಾಗಿ ಬದಲಾಗದಂತೆ ಮತ್ತೊಂದು ದಾರವನ್ನು ಕಟ್ಟಿಸಿಕೊಂಡು ಬಂದರು. ಹೀಗೆ ನಾಲ್ಕೈದು ರಕ್ಷೆಗಳನ್ನು ಕಟ್ಟಿಕೊಂಡ ಬಳಿಕವೇ ಅವರಿಗೆ ಸಮಾಧಾನವೆನಿಸಿತು.

ಇವೆಲ್ಲವುಗಳಿಂದ ಧೈರ್ಯಹೊಂದಿ ಅವರು ಕೋಣೆಯಲ್ಲಿ ಕುಳಿತಿದ್ದಾಗಲೇ ಸಂಯುಕ್ತೆಯು ಬಂದಳು. ಕತ್ತಲಾಗಿದ್ದುದರಿಂದ ದೀಪ ಉರಿಯುತ್ತಿತ್ತು.

ಇಂದು ಅವಳನ್ನು ನೋಡಿ ಅವರಿಗೆ ಭಯವೆನಿಸಲಿಲ್ಲ. ಮುಗುಳು ನಗುತ್ತಾ ಅವಳ ಸೌಂದರ್ಯವನ್ನು ಪ್ರಶಂಸಾತ್ಮಕ ದೃಷ್ಟಿಯಿಂದ ಪರಿಶೀಲಿಸತೊಡಗಿದರು.

ಸಂಯುಕ್ತೆಯನ್ನು ಪ್ರೇಮದಿಂದ ಕುಳ್ಳಿರಿಸಿ ಅವರು ಒಳ ನಡೆದರು. ಬರುವಾಗ "ಸರಾಯಿ" ಕುಡಿದಿದ್ದರೆಂಬುವಕ್ಕೆ ಅವರ ಕೆಂಪಡರಿದ ಕಣ್ಣುಗಳೇ ಸಾಕ್ಷಿಯಾಗಿದ್ದುವು. ಅವಳ ಮೂಗಿಗೂ ಅದರ ವಾಸನೆ ಬಡಿಯುತ್ತಿತ್ತು.

"ನಿನಗೆ ರೂಪ್ಯಾ ಬೇಕೆ? " — ಸಾಹೇಬರು ವಿಕೃತ ಸ್ವರದಿಂದ ಪ್ರಶ್ನಿಸಿದರು.

"ಹೌದು '

"ನನಗೆ ಪ್ರೇಮ ಬೇಕು!" ಅವರೆಂದರು.

"ಆದರೆ ನೋಡಿ, ನನಗೆ ರೂಪ್ಯಾ ಕಡ ಕೊಟ್ಟರೆ ಸಾಕು; ಮತ್ತೆ ಹಿಂತಿರುಗಿಸುತ್ತೇನೆ."

"ಹೀಗೆಂದಿಗೂ ಆಗಲಾರದು"

ಸಂಯುಕ್ತೆಯು ಆ ವಿಷಯವನ್ನೇ ತಪ್ಪಿಸಿ ಬೇರೆ ಮಾತೆತ್ತಿದಳು. ಹೀಗೆಯೇ ಸುಮಾರು ಕಾಲು ಗಂಟೆ ಕಳೆಯಿತು.

"ಸ್ವಲ್ಪ ಹೊರಗೆ ನೋಡಿ ಬನ್ನಿ. ಬೇರಾರಾದರೂ ನಮ್ಮ ಮಾತನ್ನು ಕೇಳುತ್ತಿರಬಹುದು."

'ಇವಳಿಲ್ಲಿಂದ ಓಡಿ ಹೋಗುವ ಸಂದರ್ಭ ಹುಡುಕುತ್ತಿದ್ದಾಳೆ'ಂದು ಸಾಹೇಬರಿಗೆ ನಿಶ್ಚಯವಾಯಿತು. ಅದಕ್ಕಾಗಿಯೇ ಕೋಣೆಯ ಬಾಗಿಲನ್ನೆಳೆದು ಬೀಗ ಹಾಕಿ ಹೊರಬಂದರು.

ಒಮ್ಮೆ ತಮ್ಮ ದೃಷ್ಟಿಯನ್ನು ಸುತ್ತಲೂ ಹರಿಸಿದಾಗ ರಸ್ತೆಯಲ್ಲಿ ನಿಂತಿದ್ದ ಸಂಯುಕ್ತೆಯು ಇವರನ್ನೇ ನೋಡುತ್ತಿದ್ದಳು. ಇವರು ಕಣ್ಣಿಗೆ ಬೀಳುತ್ತಲೇ ಮುಗುಳು ನಗುತ್ತಾ ರಾತ್ರಿಯ ಕಗ್ಗತ್ತಲೆಯಲ್ಲಿ ಅದೃಶ್ಯಳಾಗಿಬಿಟ್ಟಳು.

ಈಗ ಖಾನ್ ಸಾಹೇಬರ ಅಮಲಿಳಿದು ಹೋಯಿತು. ಹಿಂದಿರುಗುವಾಗ ಕೈಕಾಲುಗಳು ಒಂದೇ ಸಮನೆ ನಡುಗುತ್ತಿದ್ದುವು. ಬೀಗವನ್ನೂ ಬೇಗನೆ ತೆಗೆಯಲಾಗಲಿಲ್ಲ.

ಬಾಗಿಲು ತೆಗೆದಾಗ ಅವರ ಭಯ ಇಮ್ಮಡಿಯಾಯಿತು. ಸಂಯುಕ್ತೆಯು ತಿರುಗಿ ಕೋಣೆಯೊಳಗೇ ಬಂದುಬಿಟ್ಟಿದ್ದಳು.


ಭಯದಿಂದ ಅವರ ರೋಮಗಳು ನೆಟ್ಟಗಾದುವು ! ರಸ್ತೆಯಿಂದ ಹಾರಿ ಬಂದಳೆಂದರೆ . . . !

ಇವಳು ತಮ್ಮನೆಂದೂ ಬಿಡುವುದಿಲ್ಲವೆಂದು ಅವರಿಗೆ ದೃಢವಾಯಿತು. ಕುರಿಯು ಶಿವಿ

[(೧೩ನೆಯ ಪುಟ ನೋಡಿರಿ)]

ವಿಚಿತ್ರ ವಿಶ್ವ

೧೫೩ ವರ್ಷದ ವರ



೧೯೩೭ ರಲ್ಲಿ ಜಾರೋ ಆಗನಿಗೆ ಮದುವೆಯಾಯಿತು. ಆವನಿಗಾಗ ೧೫೩ ವರ್ಷ ವಯಸ್ಸು. ಇದಕ್ಕೆ ಮೊದಲು ಅವನಿಗೆ ೧೦ ಜನ ಹೆಂಡತಿಯರೂ ೩೭ ಮಕ್ಕಳೂ ಇದ್ದರು. ಇವರೆಲ್ಲ ಅಳಿದ ನಂತರ ಅವನು ಈ ೧೧ ನೆಯ ಹೆಂಡತಿಯನ್ನು ಪಡೆದದ್ದು!

ವಿಚಿತ್ರ ಔದಾರ್ಯ!

ಚಾನಲ ದ್ವೀಪಗಳ ಜರ್ಸಿಯ ಜನರಿಗೆ ಶ್ರೀಮತಿ ಆ್ಯನ್ ಆ ಲೀಸ್ ಜ್ಲೀಸನ್ನಳು ೬೬ ಲಕ್ಷ ರೂಪಾಯಿಗಳನ್ನು ಉದಾರವಾಗಿ ದಾನ ಮಾಡಿದಳು. ಅವಳ ವಯಸ್ಸು ೬೯. ಅವಳ ಗಂಡನಿಗೆ ಅವಳು ಉಳಿಸಿದ್ದು ಒಂದೇ ಒಂದು ಬಂಗಲೆ. ಅವನಿಗೆ ಪಾಪ ೭೨ ವರ್ಷ ವಯಸ್ಸು! ಜ್ಲೀಸನ್ನಳು ಮೊದಲು ಲಿವರ್‌ಪೂಲಿನಲ್ಲೊಮ್ಮೆ ಲಾರ್ಡ್ ಮೇಯರನಾಗಿದ್ದ ಶ್ರೀ ಜೆ. ಈ ರೇನರ್ ಎಂಬಾತನನ್ನು ಮದುವೆಯಾಗಿದ್ದಳು. ೨೬೫೦ ರೂಪಾಯಿಗಳ ಹಲವು ವಿದ್ಯಾರ್ಥಿ ವೇತನಗಳನ್ನು ಜರ್ಸಿಯ ವಿಕ್ಟೋರಿಯ ಕಾಲೇಜಿನಲ್ಲಿ ಇಡಿಸಲು, ದಾದಿಯರಿಗೊಂದು ಹೊಟೇಲನ್ನು ಕಟ್ಟಿಸಲು, ಬಡವರ ಆಸ್ಪತ್ರೆಯನ್ನು ಸುಧಾರಿಸಲು ಮತ್ತು ಉದ್ಯೋಗಿಗಳಲ್ಲಿ ಬಡವರಾದವರಿಗೆ ಸಹಾಯ ಮಾಡಲು ಆ ಹಣವನ್ನು ಬಳಸಬೇಕೆಂದು ಅವಳ ಹೇಳಿಕೆ.

ಶ್ವಾನಗೃಹಿಣಿ

ಲ್ಯಾಂಕಾಶೈರಿನ ಫ್ಲೀಟ್‌ವುಡ್ಡಿನಲ್ಲಿ ಒಬ್ಬನ ಹತ್ತಿರ ಒಂದು ನಾಯಿಯಿದೆ. ಅದು ಅವನಿಗೆ ಅತ್ಯಂತ ವಿಧೇಯವಾಗಿ ನಡೆದುಕೊಳ್ಳುತ್ತದೆ. ಯಜಮಾನನಾದರೂ ಅದಕ್ಕೆ ವಿಧೇಯನೆಂಬಂತೆಯೇ ಇದ್ದಾನೆ. ಪ್ರತಿ ರಾತ್ರಿ ಯಜಮಾನನು ಚಹದ ತಪ್ಪಲಿಯಲ್ಲಿ ನೀರು ತುಂಬಿ ವಿದ್ಯುತ್ತಿನ ಒಲೆಯ ಮೇಲೆ ಇಡುತ್ತಾನೆ. ಬೆಳಿಗ್ಗೆ ಏಳುವಷ್ಟರಲ್ಲಿ ನಾಯಿ ಗುಂಡಿಯೊತ್ತಿ ನೀರು ಮರಳುವಂತೆ ಮಾಡಿ ಮರಳಿದ್ದನ್ನು ಕಂಡೊಡನೆ ಯಜಮಾನನನ್ನು ಎಬ್ಬಿಸುತ್ತದೆ. ಅವನು ಚಹಮಾಡಿಕೊಂಡು ಕುಡಿಯುತ್ತಾನೆ. ಗೃಹಿಣಿಯ ಕೆಲಸ ನಾಯಿ ಮಾಡುವುದು ಆಶ್ಚರ್ಯವಲ್ಲವೆ?

ಹೆಣ್ಣು-ಹುಚ್ಚು

ಸೇಡ್‌ಭರ್ಗಿನಲ್ಲಿ ೫೩ ವರ್ಷ ವಯಸ್ಸಿನ ಕುಮಾರಿ ಸೇರಾ ಸೆಗ್‌ವಿಕ್ ಎಂಬ ಮುದುಕಿಯಿದ್ದಳು. ಅವಳನ್ನು ೨೨ ವರ್ಷ ವಯಸ್ಸಿನ ಎಡ್ವರ್ಡ್ ವಿಡ್ಲ್‌ಟನ್ ಎಂಬ ಹುಡುಗನು ಪ್ರೀತಿಸತೊಡಗಿದನಂತೆ!

ಆ "ಕನ್ಯಾಸ್ತ್ರೀ"ಯ ಅಣ್ಣತಮ್ಮಂದಿರು ಅವಳೆಡೆಗೆ ಎಡ್ವರ್ಡನು ಹೋಗದಂತೆ ತಡೆ ಮಾಡಿದರು. ಎಡ್ವರ್ಡನು ಅವರ ಮನೆಗೆ ಕಲ್ಲಿಟ್ಟು ಕಿಟಕಿಯ ಗಾಜುಗಳನ್ನು ಒಡೆದರೆಂದು ಹೇಳಿದ್ದಲ್ಲದೆ ಮೊನ್ನೆ ತಾನೇ ಸೇರಾ ಸೆಗ್‌ವಿಕ್ಕಳೊಡನೆ ಒಂದು "ಸುರಾತ್ರಿ ಚುಂಬನವನ್ನು" ವಿನಿಮಯಿಸಿದ್ದಾಗಿ ನುಡಿದನು. ಅವಳ ಮತ್ತು ಅವನ ಪ್ರೇಮಲೀಲೆಗೆ ನ್ಯಾಯಾಧೀಶರು ಬೆರಗಾದರಂತೆ! ಹೆಣ್ಣು-ಹುಚ್ಚು ಅಂದರೆ ಹೀಗಿರಬೇಕಲ್ಲವೆ ಹುಡುಗನಿಗೆ?

ಅಂಗಿಭಕ್ಷಕ

ಬೆಲ್‌ಫಾಸ್ಟಿನಲ್ಲಿ (ಆಯರ್ಲಂಡ್) ಒಬ್ಬನು ಈಚೆಗೆ ತನ್ನ ಅಂಗಿಯನ್ನು ತಿಂದನೆಂದು ಸುದ್ದಿ ಬಂದಿದೆ. ಕುದುರೆಜೂಜಿನಲ್ಲಿ ಇಂಥ ಕುದುರೆಯೇ ಗೆಲ್ಲುವದು, ಇಲ್ಲವಿದ್ದರೆ ನನ್ನ ಅಂಗಿಯನ್ನು ತಿನ್ನುವೆನೆಂದು ಅವನ ಜಿದ್ದು. ಕುದುರೆ ಸೋತಿತು, ಅವನು ಅಂಗಿಯನ್ನು ತಿಂದ!

ದೇಶಾಂತರಗಳಿಂದ

ಚೀನೀ ಕಮ್ಯುನಿಸ್ಟರ ಚಂಡಪ್ರತಾಪ

ಒಕ್ಕಣ್ಣಿನ ಹುಲಿಯೆನಿಸಿದ ಜನರಲ್ ಲ್ಯೂಪೋ ಚೆನ್ನನ ಸೇನಾಪತಿತ್ವದಲ್ಲಿ ಕಮ್ಯುನಿಸ್ಟರು ನ್ಯಾನ್‌ಕಿಂಗಿಗೆ ೬೫ ಮೈಲಿನಷ್ಟು ಹತ್ತಿರಕ್ಕೆ ಸರಿದಿದ್ದಾರೆಂದು ಇದೀಗ ಸುದ್ದಿ ಬಂದಿದೆ. ಅದರ ಜೊತೆಗೇ ಅವರ ೧೦ ಸಾವಿರದ ಸೈನ್ಯವನ್ನು ಒಮ್ಮೆ ಹಿಮ್ಮೆಟ್ಟಿಸಲಾಯಿತೆಂದೂ ಸರಕಾರೀ ವರದಿ ಬಂದಿದೆ. ನ್ಯಾನ್‌ಕಿಂಗ್ ಮತ್ತು ಸೂಚೋಗಳ ನಡುವಿನ ರೇಲ್ವೆ ಮಾರ್ಗಗಳ ಮೇಲೆ ಕಮ್ಯುನಿಸ್ಟರು ಅದ್ವಿತೀಯ ರೀತಿಯಿಂದ ದಾಳಿ ಮಾಡಿದ್ದಾರೆ. ನ್ಯಾನಕಿಂಗಿನ ಹತ್ತಿರದ ಚಿಂಗ್‌ಪಾಲಿಂಗ್ ಎಂಬ ರೇಲ್ವೆ ಪಟ್ಟಣವನ್ನು ಹಿಡಿಯುವುದೇ ಈ ದಾಳಿಯ ಗುರಿ. ಕಮ್ಯುನಿಸ್ಟರು ೨೦ ಸಾವಿರಕ್ಕೂ ಕಡಿಮೆಯಿರುವ ಒಂದು ರಣರಂಗದಲ್ಲಿ ಸರಕಾರೀ ದಲಗಳು ಈಗ ನುಗ್ಗಿವೆ.

ನ್ಯಾನ್‌ಕಿಂಗಿನ ದಾರಿಯಲ್ಲಿಯ ತಮ್ಮ ಕಡೆಯ ಕೋಟೆಯೆನಿಸಿದ ಪೆಂಗ್‌ಪೂವಿನಲ್ಲೀಗ ಸರಕಾರೀ ಸೈನ್ಯಗಳ ತೋಫುಗಳು ಗರ್ಜಿಸುತ್ತಿವೆ. ಶತ್ರುಗಳ ೩೦ ಲಕ್ಷ ಸೈನಿಕರು ಆ ಕಡೆಗೆ ಧಾವಿಸುತ್ತಿರುವರು. ಶೂಚೋವಿಗೆ ೩೦ ಮೈಲು ದೂರದಲ್ಲಿ ಕಾಳಗದ ಭೀಕರತೆ ಮುಗಿಲು ಮುಟ್ಟಿದೆ. ಸುಹ್‌ಸೀನಿನ ಹತ್ತಿರ ಸರಕಾರೀ ವಿಮಾನಗಳು ಕಮ್ಯುನಿಸ್ಟರ ಮೇಲೆ ಬಾಂಬು ಹಾಕಿವೆ. ಶಾಂಘಾಯಿಗೆ ಅಮೇರಿಕದ ಯುದ್ಧನೌಕೆ ಬಂದು ಮುಟ್ಟಿದೆ. ಅದು ೪೦ ಸಾವಿರ ಟನ್ ಸಾಮಗ್ರಿಯನ್ನೂ, ಬ್ರಿಟಿಶ್ ಯುದ್ಧ ನೌಕೆಯೊಂದು ೧೦ ಸಾವಿರ ಟನ್ ಸಾಮಗ್ರಿಯನ್ನೂ ತಂದಿದೆ.

ಪೀಪಿಂಗಿನ ಹತ್ತಿರ ಸರಕಾರೀ ದಲಗಳು ಕಮ್ಯೂನಿಸ್ಟ ಸೈನ್ಯವೊಂದನ್ನು ಹಿಂದಕ್ಕಟ್ಟಿದವು. ಪೂರ್ವ ಹೋಪೆಯಲ್ಲಿ ಅನವಶ್ಯಕವೆನಿಸಿದ ವ್ಯಾಂಗ್‌ಕಾವೋದಿಂದ ಸರಕಾರೀ ಸೈನ್ಯ ಮತ್ತು ಸಾಮಗ್ರಿಗಳನ್ನು ತೆರವು ಮಾಡಲಾಗುತ್ತಿದೆ. ಕಮ್ಯುನಿಸ್ಟರು ಪಶುವಾಹೈಯ ಮೇಲೆ ಐದು ಬಾರಿ ತೋಫು ಹಾರಿಸಿದ ಸಂಗತಿಯೂ ತಿಳಿದು ಬಂದಿದೆ. ದಶದಿಕ್ಕುಗಳಿಂದ ಎಂಬಂತೆ ಸುತ್ತಲೂ ಸುತ್ತಿ ಬರುತ್ತಿರುವ ಕಮ್ಯೂನಿಸ್ಟರ ಅಭೂತಪೂರ್ವ ಚಂಡಪ್ರತಾಪದ ಪರಿಣಾಮವಾಗಿ ಮೇಡಂ ಚಿಯಾಂಗರು ಜಲಪ್ರವಾಸದ ಮೂಲಕ ಸಹಾಯದ ಯಾಚನೆಗಾಗಿ ಅಮೇರಿಕಕ್ಕೆ ಹೊರಟರು; ಚಿಯಾಂಗರ ಪೂರ್ವಸಮ್ಮತಿಯನ್ನು ಪಡೆಯದೆ ನಿರ್ಣಯ ತೆಗೆದುಕೊಳ್ಳಬಲ್ಲ ಮಂತ್ರಿಗಳಿಂದ ಮುಖ್ಯ ಮಂತ್ರಿ ಡಾ. ಸನ್‌ಫೋ ಹೊಸ ಮಂತ್ರಿಮಂಡಲವನ್ನು ರಚಿಸಿದ್ದಾರೆ. ಯಾಲ್ಟಾ ಒಪ್ಪಂದದಲ್ಲಿ ಮಾಡಿದ ರಾಜತಾಂತ್ರಿಕ ತಪ್ಪುಗಳಿಗಾಗಿ ಅಮೇರಿಕ ಇಂದು ರಶಿಯಕ್ಕೆ ಸಹಾಯವನ್ನು ಸಲ್ಲಿಸಲೇಬೇಕೆಂದು ಚಿಯಾಂಗರು ಸಾರಿದರು. ಆ ತಪ್ಪುಗಳಿಂದಲೇ ಮಂಚೂರಿಯ ಕಮ್ಯುನಿಸ್ಟರ ಪಾಲಾಯಿತೆಂದು ಅವರು ಸಾಧಿಸಿದರು. ಅಂತೂ ಕಮ್ಯೂನಿಸ್ಟರು ವಿಮಾನವಿಲ್ಲದೆ ಸರಕಾರದ ವಿಮಾನದಾಳಿಯನ್ನು ಎದುರಿಸುತ್ತ ಪ್ರಚಂಡ ರಣೋನ್ಮಾದದಿಂದ ಮುಂಬರಿಯುತ್ತಿರುವುದು ಐರೋಪ್ಯರಿಗೆ ಆಶ್ಚರ್ಯವನ್ನುಂಟು ಮಾಡಿದೆ.

ಇತ್ತೀಚಿನ ಸುದ್ದಿಯ ಮೇರೆಗೆ ಚಿಯಾಂಗರು ಶೂಚೋದಲ್ಲಿ ಸಿಕ್ಕಿಬಿದ್ದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು ಗಂಡಾಂತರದಲ್ಲಿ ಸಿಕ್ಕಿದ ಪೆಂಗ್‌ಪೂವಿನ ರಕ್ಷಣೆಗೆ ಕಳಿಸಿದರೆಂದು ತಿಳಿಯುತ್ತದೆ. ಪೆಂಗ್‌ಪೂ ಪತನವಾಯಿತೆಂದೂ ಅಮೇರಿಕನ್ನರು ಶಾಂಘಾಯಿಯ ರೇಲ್ವೆಗಳ ರಕ್ಷಣೆಗಾಗಿ ಹಡಗುಗಳನ್ನು ಕಳಿಸಲಿರುವರೆಂದೂ ಚೀನೀ ಸರಕಾರವು ಕ್ಯಾಂಟನ್ನಿಗೆ ಹೋಗುವದೆಂದೂ ಶಾಂಘಾಯಿಯಲ್ಲಿ ಸುದ್ದಿ ಹಬ್ಬಿದೆ. ಶೂಚೋದಲ್ಲಿ ಸರಕಾರೀ ಸೈನಿಕರು ಅಪಾರ ಶಸ್ತ್ರಾಸ್ತ್ರಗಳನ್ನು ವೈರಿಗಳಿಗೆ ಬಿಟ್ಟುಕೊಡಬೇಕಾಗಿ ಬಂದಿತು.

ಶ್ರೀಮತಿ ಚಿಯಾಂಗರು ಅಧ್ಯಕ್ಷ ಟ್ರೂಮನ್ನರನ್ನು ಒಲಿಸಲು ಹೋದುದು ಸಫಲವಾಗುವ ಸಂಭವ ಕಡಿಮೆ. ಮೊನ್ನಿನ ಚುನಾವಣೆಯಲ್ಲಿ ರಿಪಬ್ಲಿಕನ್ನರಿಗೆ ಜಯ ಸಿಕ್ಕಿದ್ದರೆ ಏನಾದರೂ ಸ್ವಲ್ಪ ಆಸೆಯಿಡಬಹುದಾಗಿತ್ತು. ಆದರೆ ಡೆಮಾಕ್ರಾಟರಿಗೆ ಜಯಸಿಕ್ಕಿದ್ದರಿಂದ ಅವರ ದೃಷ್ಟಿಯಲ್ಲಿ ಚೀನದಲ್ಲಿ ಕಮ್ಯೂನಿಜ್ಮ ಹಬ್ಬುವದನ್ನು ತಡೆಯುವದಕ್ಕಿಂತ ಯುರೋಪಿನಲ್ಲಿ ತಡೆಯಬೇಕಾದುದೇ ಹೆಚ್ಚು ಅಗತ್ಯವೆನಿಸಿದೆ. ಆದ್ದರಿಂದ ಚೀನಕ್ಕೆ ಮಾರ್ಶಲ್ಲರು ಈಗಿಂದೀಗ ಬೃಹತ್ಪ್ರಮಾಣದ ಸಹಾಯ ಕಳಿಸುವ ನಿರ್ಣಯಕ್ಕೆ ಬರದಿದ್ದಲ್ಲಿ ಚಿಯಾಂಗರ ಸೋಲು ನಿಶ್ಚಿತವೇ ಸರಿ.

ಜೆರುಸಲೇಮಿನಲ್ಲಿ ಶಾಂತಿಸ್ಥಾಪನೆ

ಹೈಫಾದಲ್ಲಿ ಇವ ಸಂ. ರಾ. ಸಂಘದ ಸಂಧಾನ ಸಮಿತಿಯ ಮುಖ್ಯ ಕಚೇರಿಯಿಂದ ಜೆರೂಸಲೇಮಿನಲ್ಲಿ ಸಂಪೂರ್ಣ ಶಸ್ತ್ರಸನ್ಯಾಸವಾಗಬೇಕೆಂಬ ಬಗ್ಗೆ ಅರಬ ಪರಿಷತ್ತೊಡನೆ ಸಂಧಾನ ನಡೆಯಿತೆಂದು ಸುದ್ದಿ ಹೊರಟಿದೆ. ಸದ್ಯದಲ್ಲೇ ಇಡೀ ಜೆರೂಸಲೇಂ ಪ್ರದೇಶದಲ್ಲಿ ಸಂಪೂರ್ಣ ಶಾಂತಿ ನೆಲೆಸುವಂತಾಗಬಹುದು ಎಂದು ಸಂ. ರಾ. ಸಂಘದ ಅಧಿಕಾರಿಗಳು ಹೇಳಿದರು. ನೆಗೇವ್, ದಕ್ಷಿಣ ಪ್ಯಾಲಿಸ್ತಾನ ಮುಂತಾದ ತಮಗೆ ಜಯಸಿಕ್ಕಿದ ಪ್ರದೇಶಗಳಲ್ಲಿ ಇಸ್ರೇಲಿಗಳು ಸಂಧಾನ ಸಮಿತಿಯ ಶಸ್ತ್ರಸನ್ಯಾಸದ ಸಲಹೆಗೆ ಸಂಪೂರ್ಣ ಒಪ್ಪಿಗೆ ಕೊಟ್ಟಿರುವರು.

ಪ್ಯಾಲಿಸ್ತಾನದಿಂದ ಈಗಿಂದೀಗ ಅರಬರು ಸೈನ್ಯವನ್ನು ಹಿಂತೆಗೆದುಕೊಳ್ಳಬೇಕೆಂಬ ರಶಿಯದ ಸಲಹೆಯನ್ನು ಸಂ. ರಾ. ಸಂಘದ ರಾಜಕೀಯ ಸಮಿತಿಯಲ್ಲಿ ಮತಕ್ಕಿಡಲು ಇನ್ನೂ ಸಕಾಲ ಒದಗಿಲ್ಲ ಎಂದು ಮುಂದೂಡಲಾಯಿತು.

ಹಿಂದೀ ಕೂಲಿಕಾರರ ಉಚ್ಚಾಟನೆ

ಸಿಂಹಳದ ಡಿಕೋಯದಲ್ಲಿ ನಡೆದ ಸಾರ್ವಜನಿಕ ಕೂಲಿಕಾರ ಪರಿಷತ್ತಿನಲ್ಲಿ ಅಲ್ಲಿಯ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಸ್. ತೊಂಡೆಮನ್ನರು ಸಿಲೋನಿನ ಹಿಂದೀ ಕಾಂಗ್ರೆಸ್ ಮಜೂರ ಸಂಘವೆಂದೂ ತೋಟದೊಡೆಯರ ಸ್ವೈರ ವೃತ್ತಿಯನ್ನು ಸಹಿಸದು ಎಂದು, ಸಿಂಹಳದ ಕೆಲ ತೋಟಿಗರು ಇತ್ತೀಚೆಗೆ ಹಿಂದೀ ಕೂಲಿಕಾರರನ್ನು ಮನೆಗೆ ಕಳಿಸಿದ್ದನ್ನು ತೀವ್ರವಾಗಿ ಖಂಡಿಸಿದರು. ಈ ತೋಟಗಾರರಲ್ಲಿ ಕೊಲಂಬೋವಿಗೆ ೧೧೦ ಮೈಲಿನಲ್ಲಿರುವ ಡಿಕೋಯದ ಏನ್‌ಫೀಲ್ಡ್ ತೋಟಗಾರರೇ ಪ್ರಮುಖರು. ಪಾರ್ಲಿಮೆಂಟಿನ ಮತ್ತೊಬ್ಬ ಸದಸ್ಯರಾದ ಶ್ರೀ ಕೆ. ಎಂ. ರಾಜಲಿಂಗಂ ಆ ತೋಟದ ವ್ಯವಸ್ಥಾಪಕ ಸಮಿತಿ ವಿವೇಕ ತಾಳಬೇಕೆಂದೂ ಕೂಲಿಕಾರರು ತಮ್ಮ ಮೂಲಭೂತ ಮಾನವೀಯ ಹಕ್ಕುಗಳನ್ನು ಪಡೆಯಲು ಒಕ್ಕಟ್ಟಾಗಿ ನಿಲ್ಲಬೇಕೆಂದೂ ವಿನ್ನವಿಸಿಕೊಂಡರು. ಪಾರ್ಲಿಮೆಂಟಿನ ಇನ್ನೊಬ್ಬ ಸದಸ್ಯರೂ ಆ ಮಜೂರ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ ಸಿ. ವಿ. ವೇಲು ಪಿಳ್ಳೆ ತೋಟದೊಡೆಯರು ವಿವೇಕ ತಾಳದಿದ್ದರೆ ಸಮಿತಿಯ ವಿರುದ್ಧ ಯಾವ ಕ್ರಮ ಕೊಳ್ಳಬೇಕಾದರೂ ಕೂಲಿಕಾರರು ಸಿದ್ಧರಾಗಿರಬೇಕೆಂದರು. ಉಚ್ಚಾಟನೆ ಹೊಂದಿದವರನ್ನು ಪುನಃ ಕೆಲಸದಲ್ಲಿ ನಿಯಮಿಸಿಕೊಳ್ಳಬೇಕೆಂಬ ಠರಾವನ್ನು ಪರಿಷತ್ತು ಸ್ವೀಕರಿಸಿತು.

ದೂರಪ್ರಾಚ್ಯದ ಪುನಾರಚನೆ

ಸಿಡ್ನಿಯ ಹತ್ತಿರದ ವ್ಯಾಸ್ಸಿಟೋಸಿನಲ್ಲಿ ಸಂ. ರಾ. ಸಂಘದ ಏಶಿಯ ಸಂಬಂಧಿಯಾದ ಆರ್ಥಿಕ ಸಮಿತಿ ಸಭೆಸೇರಿತು. ಅಧ್ಯಕ್ಷ ಡಾ. ಪಿ. ಎಸ್. ಲೋಕನಾಥನ್ನರು ಏಶಿಯದ ಸಾರ್ವತ್ರಿಕ ಅವಶ್ಯಕತೆಗಳ ಪೂರೈಕೆಗೆ ೧೪೦೦ ಕೋಟಿ ಡಾಲರುಗಳು ಬೇಕೆಂದೂ ಅದರಲ್ಲಿ ಅರ್ಧಾಂಶ ಹೊರಗಿನಿಂದ ಪಡೆಯಬೇಕಾಗುವುದೆಂದೂ ಹೇಳಿದರು. ತರಿಸಬೇಕಾದ ಸಾಮಗ್ರಿಗಳಲ್ಲಿ ಧಾನ್ಯ, ಮಿಷಿನ್ನು, ಬಟ್ಟೆ, ಕಲ್ಲಿದ್ದಲು ಮತ್ತು ಖನಿಜಗಳು ಬಹು ಮುಖ್ಯವಾದವು. ಇದಕ್ಕೆ ಕೈತುಂಬ ಹಣ ತೆರಬೇಕಾಗುವದು.

ಆಸ್ಟ್ರೇಲಿಯದ ಗವರ್ನರ ಜನರಲ್ ಮ್ಯಾಕ್‌ಕೆಲ್ಲರು ಏಶಿಯವನ್ನು ಪುನಃ ಯುದ್ಧಪೂರ್ವ ಪರಿಸ್ಥಿತಿಗಿಳಿಯಗೊಡಬಾರದೆಂದರು; ಅಲ್ಲಿಯ [illegible] ಎಂ. ಕೆ. ವಿ. [illegible] ಹೋಗಿದ್ದಾರೆ.

ಗ್ರೀಸಿನ ಆ ಕಾಳಗ

ಗ್ರೀಕ ಸರಕಾರದ ವಿರುದ್ಧ ಕದನವನ್ನು ಆರಂಭಿಸಿದ ಜನರಲ್ ಮಾರ್ಕೋಸನಿಗೆ ನೆರವಾದ [illegible] ರಾಷ್ಟ್ರಗಳ [illegible] ಸಂ. ರಾ. ಸಂಘದ ಸಭೆ [illegible] ಖಂಡಿಸಿ, ಅವರಿಗೆ ಹಾಗೆ ಮಾಡಬಾರದೆಂದು ವಿಧಿಸಿತು. ಆ ಬಗ್ಗೆ ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. ಸೋವಿಯೆಟ್ ಕಡೆ ಗ್ರೀಸ್, ಯುಗೋಸ್ಲೇವಿಯ, ಅಲ್ಬೇನಿಯ, ಬಲ್ಗೇರಿಯಗಳು [illegible] ರಾಜತಾಂತ್ರಿಕ ಸಂಬಂಧವನ್ನು [illegible] ಸಂಧಾನಕ್ಕೆ ಬಂದು ಅರುತಿಂಗಳಲ್ಲಿ ಸಭೆಗೆ ವರದಿ ಮಾಡಬೇಕೆಂಬ ಗೊತ್ತುವಳಿ ಅನಂತರ ಸ್ವೀಕೃತವಾಯಿತು. ಯಥಾಪೂರ್ವ ಸೋವಿಯಟ್ ಪ್ರತಿನಿಧಿ ವಿಶಿನ್ಸ್ಕಿ ಗ್ರೀಸಿನಲ್ಲಿ ಇಂಗ್ಲಿಷ್ ಅಮೇರಿಕನರು ಅನವಶ್ಯಕವಾಗಿ ತಲೆಹಾಕುತ್ತಿರುವರೆಂದು ಆರೋಪಿಸುವುದೂ ಬ್ರಿಟಿಶ್ ಪ್ರತಿನಿಧಿ ಅದನ್ನು ಅಲ್ಲಗಳೆಯುವುದೂ ನಡೆದವು. ಗ್ರೀಸಿನ ಮೂದವಿ ಶಕ್ತಿ ನಿಲ್ಲುವಂತೆ ತೋರುವುದಿಲ್ಲ. ಅದು ನಿಲ್ಲಬೇಕಾದರೆ ಐರೋಪ್ಯರ ಪೂರ್ವ ಪಶ್ಚಿಮ ಪಂಗಡಗಳಲ್ಲಿ ಒಮ್ಮತವಾಗಬೇಕು; ಅದರ ಲಕ್ಷಣ ಈಗಿಲ್ಲ.

ಘಟನಾ ಸಮಿತಿಯ ಚಟುವಟಿಕೆಗಳು

ಅಸ್ಪೃಶ್ಯತೆಯು ಅಪರಾಧ

ರಾಜ್ಯ ಧೋರಣ ನಿರ್ದೇಶಕ ತತ್ವಗಳಲ್ಲಿ ತಾ. ೨೪ ರಂದು ಘಟನಾ ಸಮಿತಿಯು ಮದ್ಯಪಾನ ನಿರೋಧಕ್ಕೂ ಗೋವಧೆಯ ಪ್ರತಿಬಂಧಕ್ಕೂ ಸಂಬಂಧಿಸಿದ ಕಲಮುಗಳನ್ನು ಒಪ್ಪಿ ಸ್ವೀಕರಿಸಿತು.

ವೈದ್ಯಕೀಯ ಕಾರಣಗಳಿಗಾಗಿ ಮಾದಕ ದ್ರವ್ಯ ಉಪಯೋಗಿಸಲು ನಿರ್ಬಂಧವಿರಬಾರದು ಎಂಬುದಾಗಿ ಬಂದ ಒಂದು ತಿದ್ದುಪಡಿಗೆ ಒಪ್ಪಿಗೆ ದೊರೆಯಿತು. ಶ್ರೀ ಸಿಕ್ವಾನಾರು ಈ ತಮ್ಮ ತಿದ್ದುಪಡಿಯನ್ನು ಮಂಡಿಸುತ್ತ, ೧೯೪೦ ರಲ್ಲಿ ಹಿಂದುಸ್ತಾನದ ಅಬಕಾರಿ ಉತ್ಪನ್ನವು ೧೩ ಕೋಟಿ ರೂ. ಇದ್ದಿತೆಂದೂ ಈಗ ಅದು ದ್ವಿಗುಣಿತವಾಗಿದೆಯೆಂದೂ ಮಾದಕ ದ್ರವ್ಯ ನಿರೋಧದಿಂದ ೨೫ ಕೋಟಿ ರೂ. ಗಳ ಉತ್ಪನ್ನಕ್ಕೆ ಎರವಾಗ ಬೇಕಾಗುವದಾದರೂ ಆ ಹಣವೆಲ್ಲ ಜನರಬಳಿಗೇ ಉಳಿವುದಾದ್ದರಿಂದ ಚಿಂತಿಸಬೇಕಾಗಿಲ್ಲವೆಂದೂ ನಿವೇದಿಸಿದರು. ಮುಂಬಯಿ ಮುಖ್ಯಮಂತ್ರಿ ಶ್ರೀ ಖೇರರು ಈ ತಿದ್ದುಪಡಿಯನ್ನು ಸಮರ್ಥಿಸಿ ಮಾತನಾಡಿದರು. ಕೊನೆಗೆ ತಿದ್ದುಪಡಿಯು ಅಂಗೀಕರಿಸಲ್ಪಟ್ಟಿತು.

ಆಧುನಿಕ ಹಾಗೂ ಶಾಸ್ತ್ರೀಯ ಪದ್ಧತಿಯಿಂದ ಒಕ್ಕಲುತನದ ಅಭಿವೃದ್ಧಿಯಾಗಬೇಕಲ್ಲದೆ ದನಗಳ ತಳಿಗಳನ್ನು ಸುಧಾರಿಸಬೇಕು. ಆಕಳು ಮತ್ತು ಇತರ ಉಪಯುಕ್ತ ದನಗಳ ವಧೆಯನ್ನು ತಡೆಯಬೇಕು ಎಂಬ ಹೊಸದೊಂದು ಕಲಮನ್ನು ರಾಜ್ಯಘಟನೆಯಲ್ಲಿ ಸೇರಿಸಬೇಕೆಂದು ಪಂ. ಠಾಕೂರದಾಸ ಭಾರ್ಗವರು ಮಂಡಿಸಿದ ಸೂಚನೆಯನ್ನು ಘಟನಾ ಸಮಿತಿಯು ಅಂಗೀಕರಿಸಿತು.

ನವಂಬರ ತಾ. ೨೫ ರಂದು ಪ್ರಾಂತಿಕ ಹಾಗೂ ಸಂಸ್ಥಾನ ಸರಕಾರಗಳು ಕಾರ್ಯನಿರ್ವಾಹಕ ಶಾಖೆಯಿಂದ ನ್ಯಾಯದಾನ ಶಾಖೆಯನ್ನು ಬೇರ್ಪಡಿಸತಕ್ಕದ್ದೆಂಬ ಹೊಸ ಅಂಶವು ರಾಷ್ಟ್ರಧೋರಣ ನಿರ್ದೇಶಕ ತತ್ವಗಳಲ್ಲಿ ಸೇರಿಸಲ್ಪಟ್ಟಿತು. ಇದು ಕಾರ್ಯಕಾರಿಯಾಗಲು ೩ ವರ್ಷಗಳ ಅವಕಾಶವಿರತಕ್ಕದ್ದೆಂದು ಡಾ. ಅಂಬೇಡಕರರು ಮೊದಲು ಮಂಡಿಸಿದ ಕಲಮಿನಲ್ಲಿತ್ತು. ಆದರೆ ಅದಕ್ಕೆ ಶಾವೇ ಒಂದು ತಿದ್ದುಪಡಿ ತಂದು ಈ ಮೂರು ವರ್ಷಗಳ ಕಾಲ ನಿರ್ದೇಶದ ಅವಶ್ಯಕತೆಯಿಲ್ಲವೆಂದೂ ಕಾಲಹರಣ ಮಾಡುವದು ಯೋಗ್ಯವಲ್ಲದೆಂದೂ ಅನಿಸಿದ ಪ್ರಾಂತಗಳಿಗೆ ಕೂಡಲೇ ಈ ಅಂಶವನ್ನು ಕೃತಿಗಿಳಿಸಲು ಇದರಿಂದ ಅನುಕೂಲ ಕಲ್ಪಿಸಿಕೊಟ್ಟಂತಾಗುವದೆಂದೂ ನಿವೇದಿಸಿದರು. ಈ ಬಗ್ಗೆ ಸಾಕಷ್ಟು ಚರ್ಚೆ ನಡೆದು ಪಂ. ಜವಾಹರಲಾಲರ ಸ್ಪಷ್ಟೀಕರಣದ ನಂತರ ಡಾ. ಅಂಬೇಡಕರರ ಹೊಸ ಸೂಚನೆಯು ಅಂಗೀಕೃತವಾಯಿತು.

ನವೆಂಬರ ತಾ. ೨೬ ರಂದು ಹಿಂದುಸ್ತಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಆಯರ್ಲಂಡದ ವಿಷಯಕ್ಕೆ ಮಾತನಾಡುತ್ತ, ಆಯರ್ಲಂಡ ಹಿಂದುಸ್ತಾನಗಳಲ್ಲಿ ಸ್ನೇಹ ಸೌಹಾರ್ದ ಮೊದಲಿಂದಲೂ ಇದ್ದು ಇನ್ನು ಮುಂದೆಯೂ ಅದೇ ಬಗೆಯಾಗಿ ಉಳಿವ ನಂಬಿಗೆಯಿದೆಯೆಂದೂ ಆಯರ್ಲಂಡವು ಹಿಂದುಸ್ತಾನದ ನಾಗರಿಕರಿಗೆ ತನ್ನ ದೇಶದಲ್ಲಿ ನಾಗರಿಕ ಹಕ್ಕುಗಳನ್ನು ಕೊಟ್ಟರೆ ಹಿಂದುಸ್ತಾನವೂ ಆಯರ್ಲಂಡಕ್ಕೆ ಅದೇ ಬಗೆಯ ನಾಗರಿಕ ಹಕ್ಕುಗಳನ್ನು ಕೊಡಲು ಸಿದ್ಧವಿದೆಯೆಂದೂ ಹೇಳಿಕೆ ಕೊಟ್ಟರು.

ಆಯರದ ಬಗ್ಗೆ ಪಂ. ಜವಾಹರಲಾಲರ ಹೇಳಿಕೆಯ ನಂತರ ಈ ದಿನ ಶ್ರೀಮತಿ ದುರ್ಗಾಬಾಯಿಯವರು, ಘಟನಾಸಮಿತಿಯ ಅಧ್ಯಕ್ಷರಿಗೆ ಅಥವಾ ಉಪಾಧ್ಯಕ್ಷರಿಗೆ ಘಟನೆಯ ಕರಡಿನ ಕಲಮುಗಳ ವ್ಯಾಕರಣ, ಶಬ್ದ, ವಾಕ್ಯ ರಚನೆ ಮೊದಲಾದ ಔಪಚಾರಿಕ ತಿದ್ದುಪಡಿಗಳನ್ನು ಕೈಕೊಳ್ಳಲು ಹಾಗು ಕೇವಲ ಮಹತ್ವಪೂರ್ಣವೆಂದೆನಿಸಿದ ತಿದ್ದುಪಡಿಗಳ ಮೇಲೆ ಚರ್ಚೆ ನಡೆಸಲು ಅವಕಾಶ ಕೊಡಲು ಅಧಿಕಾರವಿರಬೇಕೆಂಬ ಬಗೆ ಗೊತ್ತುವಳಿಯನ್ನು ಮಂಡಿಸಿದರು. ಈ ಗೊತ್ತುವಳಿಯ ಮೇಲೆ ಚರ್ಚೆ ನಡೆದು ಅದು ಸ್ವೀಕೃತವಾಯಿತು. ಈ ಗೊತ್ತುವಳಿಗೆ ೧೮ ತಿದ್ದುಪಡಿಗಳು ಬಂದಿದ್ದವು. ಅವೆಲ್ಲ ನಿರಾಕೃತವಾಗಿ ಮೂಲ ಗೊತ್ತುವಳಿಯೇ ಅಂಗೀಕರಿಸಲ್ಪಟ್ಟಿತು.

ಎರಡು ದಿನಗಳ ತರುವಾಯ ನವೆಂಬರ ತಾ. ೨೯ ರಂದು ಮತ್ತೆ ಸಭೆ ಸೇರಿ ಅಸ್ಪೃಶ್ಯತೆಯ ನಿರ್ಮೂಲನೆಯ ಮತ್ತು ಸಮಾನತೆಯ ಕಲಮುಗಳು ಅಂಗೀಕರಿಸಲ್ಪಟ್ಟವು. ಅಸ್ಪೃಶ್ಯತೆಯನ್ನು ಯಾವ ಬಗೆಯ ರೂಪದಲ್ಲಿ ಆಚರಿಸಿದರೂ ಇನ್ನು ಮೇಲೆ ಅದು ಅಪರಾಧವೆನಿಸುವದು. ಡಾ. ಮೋಹನವಾಸರು ಈ ಕಲಮನ್ನು ಪ್ರಶಂಸಿಸುತ್ತ ಅಸ್ಪೃಶ್ಯತೆಯ ಸಮಾಧಿಯನ್ನು ಅಸ್ಪೃಶ್ಯರಾದ ಡಾ. ಅಂಬೇಡಕರರೇ ಕಟ್ಟುವ ಪ್ರಸಂಗ ಬಂದುದು ಒಂದು ಯೋಗಾಯೋಗವೇ ಎಂದು ಉದ್ಗಾರ ತೆಗೆದರು. 'ಮಹಾತ್ಮಾ ಗಾಂಧೀಕೀ ಜಯ' ಎಂಬ ಜಯಘೋಷದಲ್ಲಿ ಈ ಅಸ್ಪೃಶ್ಯತೆಯ ಕಲಮು ಸ್ವೀಕೃತವಾಯಿತು.

ಸಮಾನತೆಯ ಕಲಮು ಕೆಲ ತಿದ್ದುಪಡಿಗಳೊಂದಿಗೆ ಅಂಗೀಕೃತವಾಯಿತು. ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ಈ ಕಾರಣಗಳಿಂದ ಸರಕಾರವು ಪ್ರಜೆಗಳಲ್ಲಿ ಭೇದವೆಣಿಸಕೂಡದೆಂದು ಈ ಕಲಮಿನ ಅಭಿಪ್ರಾಯವಿದೆ.

ನವೆಂಬರ ತಾ. ೩೦ ರಂದು ಮೂಲಭೂತ ಹಕ್ಕುಗಳ ಚರ್ಚೆ ಮುಂದೆ ಸಾಗಿ ಮರಣದಂಡನೆಯನ್ನು ನಿರ್ಮೂಲಗೊಳಿಸಬೇಕೆಂಬ ತಿದ್ದುಪಡಿಯು ನಿರಾಕೃತವಾಯಿತು.

ಈ ದಿನವೇ ಸರಕಾರದ ನೌಕರಿಗಳನ್ನು ಪಡೆಯುವಲ್ಲಿ ಸಕಲರಿಗೂ ಸಮಾನ ಅವಕಾಶವಿರಬೇಕೆಂಬ ಕಲಮಿನ ಚರ್ಚೆ ನಡೆಯಿತು. ಈ ಬಗ್ಗೆ ಶ್ರೀ ಮುನಶಿ, ಶ್ರೀ ಅಲ್ಲಾದಿ ಮತ್ತು ಶ್ರೀ ಅನಂತಶಯನಂ ಅಯ್ಯಂಗಾರರ ತಿದ್ದುಪಡಿಗಳನ್ನು ಡಾ. ಅಂಬೇಡಕರರು ಸ್ವೀಕರಿಸಿದರು. ತಿದ್ದುಪಡಿಹೊಂದಿದ ಈ ಕಲಮು ಈ ರೀತಿಯಿದೆ.

“ಸರಕಾರದ ನೌಕರಿಗಳನ್ನು ಪಡೆಯಲು ಸಕಲ ನಾಗರಿಕರಿಗೂ ಸಮಾನ ಅವಕಾಶವಿರುತ್ತದೆ. ಧರ್ಮ, ಜನಾಂಗ, ಜಾತಿ, ಲಿಂಗ ವಂಶ, ಜನ್ಮಸ್ಥಳ, ವಾಸವೊದಲಾದ ಕಾರಣಗಳಿಗಾಗಿ ಯಾವ ನಾಗರಿಕನೂ ಅಪಾತ್ರನಾಗಲಾರನು. ಆದರೆ ಈ ಬಗ್ಗೆ ನಿಯಮಗಳನ್ನು ಮಾಡಲು ಮತ್ತು ಹಿಂದುಳಿದ ವರ್ಗದವರಿಗಾಗಿ ಸ್ಥಳ ಕಾದಿಡಲು ಸರಕಾರಕ್ಕೆ ಅಧಿಕಾರವಿರುತ್ತದೆ....” ಎಂದು ನೊದಲಾಗಿ ಇದೆ.

ಅ. ಭಾ. ವಿಶ್ವ ವಿದ್ಯಾಲಯಗಳ ಶಿಕ್ಷಕರ ಸಮ್ಮೇಲನವು ದಿಲ್ಲಿಯಲ್ಲಿ ಡಿಸೆಂಬರ ೪ ಮತ್ತು ೫ ಕ್ಕೆ ಲಖನೌ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಆಚಾರ್ಯ ನರೇಂದ್ರ ದೇವರ ಅಧ್ಯಕ್ಷತೆಯಲ್ಲಿ ಸೇರುವದು. ದಿಲ್ಲಿ ವಿಶ್ವ ವಿದ್ಯಾಲಯದ ಆರ್ಟ್ಸ ವಿಭಾಗದ ಮುಖ್ಯಸ್ಥರಾದ ಡಾ. ವ್ಹಿ. ಕೆ. ಆರ್. ವ್ಹಿ. ರಾವ ಇವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ರೇಲ್ವೆ ಜನರು ಸಂಪೆನ್ನಬಾರದು

ಹಿಂದೀ ರಾಷ್ಟ್ರೀಯ ರೇಲ್ವೆ ಕೆಲಸಗಾರರ ಮಹಾಮಂಡಲದ ಅಧ್ಯಕ್ಷರಾದ ಡಾ. ಸುರೇಶ ಚಂದ್ರ ಬ್ಯಾನರ್ಜಿಯವರು ತಾ. ೨೯ ರಂದು ಮುಂಬಯಿಯಲ್ಲಿ ನೆರೆದ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತ, ರೇಲ್ವೆ ಜನರು ಸಂಪು ಹೂಡುವ ವಿಚಾರ ಮಾಡಕೂಡದೆಂದೂ ರೇಲ್ವೆ ಸಾರಿಗೆಯ ಅಡ್ಡಿ ಆತಂಕಗಳನ್ನು ತೊಲಗಿಸಿ ಅದನ್ನು ಇನ್ನಷ್ಟು ರಾಷ್ಟ್ರೋಪಯೋಗಿ ಮಾಡತಕ್ಕದ್ದೆಂದೂ ಹೇಳಿದರು. ಅವರು ಇನ್ನೂ ಹೇಳಿದ್ದು ಹೀಗೆ- ಕಾಳಿನ ಅಂಗಡಿಯ ಸೌಕರ್ಯವನ್ನು ಕಡಮೆ ಮಾಡಿದ್ದಕ್ಕಾಗಿ ಜಾನೇವರಿ ೧ ಕ್ಕೆ ಪ್ರತಿಭಟನಾ ದಿನವನ್ನು ಆಚರಿಸಬೇಕೆಂದು ನಾಗಪುರದಲ್ಲಿ ಸೇರಿದ್ದ ರೇಲ್ವೆ ಕೆಲಸಗಾರರ ಮಹಾಮಂಡಲವು ನಿರ್ಧರಿಸಿದ್ದು ಉಚಿತವಲ್ಲ. ಹಿಂದುಸ್ತಾನದ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಿ ನಾವು ಮಾಡುವದನ್ನು ಮಾಡಬೇಕು. ಹೈದರಾಬಾದದ ಸಮಸ್ಯೆ ಮುಗಿದಿದ್ದರೂ ಕಾಶ್ಮೀರದ ಯುದ್ಧ ಇನ್ನೂ ಸಾಗಿದೆ. ಪಾಕಿಸ್ತಾನ ಹೂಂಕರಿಸುತ್ತದೆ. ಪೂರ್ವ ಪಾಕಿಸ್ತಾನದಿಂದ ಲಕ್ಷಾವಧಿ ಹಿಂದು ನಿರಾಶ್ರಿತರು ಪಶ್ಚಿಮ ಬಂಗಾಲಕ್ಕೆ ಬರುತ್ತಿದ್ದು ಅವರೆಲ್ಲರ ಯೋಗಕ್ಷೇಮದ ಭಾರವನ್ನು ನಮ್ಮ ಸರಕಾರ ಹೊರಬೇಕಾಗಿದೆ. ಹೀಗೆಲ್ಲ ಇರುವಾಗ ಸಂಪಿನ ಮಾತಾಡುವದು ಅದರಲ್ಲಿಯೂ ಸಾರಿಗೆಯಂತಹ ಮಹತ್ವದ ಕೆಲಸದಲ್ಲಿ ತೊಡಗಿದವರು ಸಂಪೆನ್ನುವದು ರಾಷ್ಟ್ರವಿಘಾತಕವಾಗಿದೆ. ಸರಕಾರಕ್ಕೆ ನಮ್ಮ ಬೇಡಿಕೆಗಳನ್ನು ಯಥೋಚಿತವಾಗಿ ನಿವೇದಿಸಿ ಅವನ್ನು ಪರಿಹರಿಸಿಕೊಳ್ಳಬೇಕಲ್ಲದೆ ಸಂಪಿನ ಬೆದರಿಕೆ ಹಾಕಿಯಲ್ಲ.

ಈಗ ರೇಲ್ವೆ ಕೆಲಸಗಾರರ ಮಹಾಮಂಡಳವೊಂದು ಇರುವಾಗ ಈ ಹಿಂದೀ ರಾಷ್ಟ್ರೀಯ ರೇಲ್ವೆ ಕೆಲಸಗಾರರ ಮಹಾಮಂಡಳವನ್ನು ಪ್ರತ್ಯೇಕವಾಗಿ ಏಕೆ ಸ್ಥಾಪಿಸಲಾಯಿತೆಂಬುದಕ್ಕೆ ಅಧ್ಯಕ್ಷರು ಹೀಗೆ ಹೇಳಿದರು.

ಅ. ಭಾ. ಮಜದೂರ ಸಂಘದಲ್ಲಿ ೧೯೪೨ ರಿಂದ ಕಮ್ಯುನಿಸ್ಟರ ಪ್ರಭಾವವೇ ಹೆಚ್ಚಾಗಿ ಕಾಂಗ್ರೆಸ ವಿರೋಧನೇ ಕಂಡು ಬರುತ್ತಿತ್ತು. ೧೯೩೦ ರಿಂದ ರೇಲ್ವೆ ಕೆಲಸಗಾರರ ಮಹಾಮಂಡಲವು ಸರಕಾರದ ವಿಶ್ವಾಸಕ್ಕೆ ಪಾತ್ರವಾಗಿತ್ತು. ಆದರೆ ಈ ಮಹಾಮಂಡಲದಲ್ಲಿ ಅನೇಕ ರಾಜಕೀಯ ಪಕ್ಷಗಳ ವರ್ಚಸ್ಸಿಗೆ ಒಳಗಾದ ಸಂಸ್ಥೆಗಳು ಸೇರಿಕೊಂಡಿದ್ದವು. ಈ ಸಂಸ್ಥೆಗಳು ಕೂಲಿಕಾರರ ಹಿತ ಗಮನಿಸದೆ ತಮ್ಮ ರಾಜಕೀಯ ಸ್ವಾರ್ಥಕ್ಕೆ ದುಡಿಯುತ್ತಿದ್ದವು. ಕಾಂಗ್ರೆಸ ಒಲವಿನ ಕೆಲಸಗಾರರಿಗೆ ಇಲ್ಲಿ ಭಾಗ ವಹಿಸಲು ಅನುವಿರಲಿಲ್ಲ. ಆದ್ದರಿಂದ ಈ ಹಿಂದೀ ರಾಷ್ಟ್ರೀಯ ರೇಲ್ವೆ ಕೆಲಸಗಾರರ ಮಹಾಮಂಡಲ ಸ್ಥಾಪಿಸಬೇಕಾಯಿತು. ನಮ್ಮ ಈ ಮಹಾಮಂಡಲಕ್ಕೆ ಸರಕಾರದ ಮನ್ನಣೆ ಸಿಕ್ಕಿಲ್ಲ. ಈ ವಿಷಯದಲ್ಲಿ ಸರಕಾರದ ಧೋರಣ ತಿಳಿಯದಂತಾಗಿದೆ ಎಂದು ನೊಂದವರಾಗಿ ಹೇಳಿದರು.

ಪಾಕಿಸ್ತಾನವನ್ನು ಹತ್ತಿಕ್ಕಲು ಪೂರ್ವಪಂಜಾಬ ಒಂದೇ ಸಾಕು

ಪಾಕಿಸ್ತಾನದ ವಕ್ತಾರನೊಬ್ಬನು ಕಾಶ್ಮೀರವನ್ನು ಎದುರಿಸಲು ೫೦ ಸಾವಿರ ಪಠಾಣರು ಸಿದ್ಧರಾಗಿದ್ದಾರೆಂದು ಹೇಳಿದನು. ಈ ವಿಷಯವನ್ನೆತ್ತಿ ಭಾರತದ ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವಸಿಂಗರು ನವೆಂಬರ ತಾ. ೨೮ ರಂದು ಹೊಶಿಯಾರಪುರ ಜಿಲ್ಹೆಯ ಮಹಿತಪುರದ ಸೈನ್ಯ ಭರತಿಯ ಮೇಳದಲ್ಲಿ ಮಾತನಾಡುತ್ತ, ಪಾಕಿಸ್ತಾನಿಗಳನ್ನು ಹಿಮ್ಮೆಟ್ಟಿಸಲು ಹಿಂದುಸ್ತಾನದಲ್ಲಿಯ ಗುರುದಾಸಪುರ, ಅಂಬಾಲಾ, ಫಿರೋಜಪೂರ ಈ ಮೂರೇ ಜಿಲ್ಹೆಗಳ ಜನರು ಸಾಕೆಂದೂ ಎಲ್ಲ ಪಾಕಿಸ್ತಾನಿಗಳೂ ಏರಿ ಬಂದರು ಕೂಡ ಅವರನ್ನೆಲ್ಲ ಸದೆಬಡಿಯುವಷ್ಟು ಬಲವು ಪೂರ್ವ ಪಂಜಾಬ ಒಂದರಲ್ಲಿಯೇ ಉಂಟೆಂದು ಘೋಷಿಸಿದರು. ಅವರು ಮುಂದೆ ಸಾಗಿ, ಪಾಕಿಸ್ತಾನದ ಬಗ್ಗೆ ಭಾರತವು ದ್ವೇಷಭಾವ ತಳೆದಿಲ್ಲ. ಆದರೆ ಪಾಕಿಸ್ತಾನವು ಮಾತ್ರ ಭಾರತದ ಬಗ್ಗೆ ವಿಷಪೂರಿತ ಧೋರಣೆ ವಹಿಸುತ್ತ ಸಾಗಿದೆ. ಹೀಗಾದರೆ ಅದು ತೊಂದರೆಗೆ ಈಡಾಗದಿರದು ಮತ್ತು ಅದರ ಅಸ್ತಿತ್ವವೇ ಹೊಯ್ದಾಡಬಹುದು ಎಂದು ಹೇಳಿದರು. ಹೊಶಿಯಾರಪುರ ಜಿಲ್ಹಾ ನಿವಾಸಿಗಳು ಸರದಾರ ಬಲದೇವಸಿಂಗರಿಗೆ ೧ ಲಕ್ಷ ೨೫ ಸಾವಿರ ರೂಪಾಯಿಗಳ ಹಮ್ಮಿಣಿಯನ್ನು ಅರ್ಪಿಸಿದರು. ಈ ಸಮಾರಂಭದಲ್ಲಿ ಪೂರ್ವ ಪಂಜಾಬದ ಮುಖ್ಯ ಮಂತ್ರಿ ಡಾ. ಗೋಪಿಚಂದ ಭಾರ್ಗವರು, ಇತರ ಮಂತ್ರಿಗಳು, ಲೆ. ಜ. ಕರಿಯಪ್ಪನವರು ಉಪಸ್ಥಿತರಿದ್ದರು.

ಪ್ರಾಚೀನ ಭಾರತದ ರಾಜ್ಯತತ್ವಗಳು

ರಾಜನ ಅಧಿಕಾರ ದೈವಾಯತ್ತವಾದರೂ ಆತನು ಧರ್ಮಾಧೀನ

[ಲೇ : ರಾಜಕಾರಣದ ಅಭ್ಯಾಸಿ]

ಪರದಾಸ್ಯವನ್ನು ಅಸ್ತ್ರಬಲದಿಂದ ಹರಿದೊಗೆದು ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ಭಾರತವು ಈಗ ತನ್ನ ಘಟನೆಯನ್ನು ಸಿದ್ಧಪಡಿಸಿಕೊಳ್ಳಲಣಿಯಾಗಿದೆ. ಇದಕ್ಕಾಗಿ ಘಟನಾ ಸಮಿತಿಯು ನೇಮಕವಾಗಿ ಅದರ ಉಪಸಮಿತಿಯು ಸಿದ್ಧಪಡಿಸಿದ ಘಟನೆಯ ಕರಡಿನ ಚರ್ಚೆ ನಡೆದಿದೆ. ಈ ಬಗ್ಗೆ ಘಟನಾ ಶಾಸ್ತ್ರಜ್ಞರನೇಕರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಸಮಯದಲ್ಲಿ ಭಾರತದ ಪ್ರಾಚೀನ ಪರಂಪರೆ ಯೇನಿದೆ, ಅಂದಿನ ಭಾರತೀಯರು, ರಾಜ, ಪ್ರಜೆಗಳು ಮುಂತಾದ್ದರ ಸಂಬಂಧದಲ್ಲಿ ಯಾವ ಬಗೆಯ ಅಭಿಪ್ರಾಯವನ್ನು ತಾಳಿದ್ದರು, ಅವರ ಆ ಪರಂಪರೆಗೆ ಜಗತ್ತಿನ ಇತರ ಪ್ರದೇಶಗಳಲ್ಲಿ ಬೆಂಬಲವಿದ್ದಿತೆ, ಅದನ್ನು ಅವರು ಅನುಸರಿಸುತ್ತಿದ್ದರೊ ಮುಂತಾದ್ದನ್ನು ಸಂಕ್ಷೇಪತಃ ಈ ಬರೆಹದಲ್ಲಿ ಚರ್ಚಿಸಲಾಗುವದು. ಇದರಿಂದ ಭಾರತದಲ್ಲಿ ಹಿಂದೆ ಯಾವ ಬಗೆಯ ರಾಜ್ಯತಂತ್ರ ನಡೆಯುತ್ತಿದ್ದಿತೆಂಬುದರ ರೂಪರೇಷೆ ಗೊತ್ತಾಗಲು ಅನುಕೂಲವಾಗುವದು.

ಹಿಂದುಸ್ಥಾನದ ಪ್ರಾಚೀನ ರಾಜ್ಯತಂತ್ರವು 'ನಾನು ಅದು, ನೀನು ಇದು; ನಾನು ಆಕಾಶ ನೀನು ಭೂಮಿ' ಎಂದು ಆಚಾರ್ಯರಾದ ಪುರೋಹಿತನು ಅರಸನನ್ನುದ್ದೇಶಿಸಿ ಸಂಬೋಧಿಸಿದ ವಿವಾಹಸೂತ್ರಗಳಲ್ಲಿ ಅಡಕವಾಗಿದೆಂದು ಹೇಳಬಹುದಾಗಿದೆ. ಮೈತ್ರಾವರುಣ, ಇಂದ್ರಾಗ್ನೀ ಅಥವಾ ಇಂದ್ರಬೃಹಸ್ಪತೀ ಇವು ಮಿಥುನಗಳು. ಮಿತ್ರ, ಅಗ್ನಿ, ಬೃಹಸ್ಪತಿ, ಬ್ರಹ್ಮ ಇವರು ಆಧ್ಯಾತ್ಮಿಕ ಶಕ್ತಿಯ ಅಧಿಕಾರಿಗಳಾಗಿದ್ದರೆ. ವರುಣ, ಇಂದ್ರಾದಿಗಳು ಕ್ಷಾತ್ರ ತೇಜಸ್ಸಿನ ಪ್ರತೀಕರಾಗಿರುವರು. ಈ ಬಗೆಗೆ ಋಗ್ವೇದ ಮೊದಲಾದವುಗಳಲ್ಲಿ ಬೇಕಾದಷ್ಟು ಉಲ್ಲೇಖಗಳಿರುವವು. ಗ್ರೀಕ ಪರಂಪರೆಯಲ್ಲಿಯೂ ಇದೇ ಬಗೆಯ ಉಲ್ಲೇಖವಿದೆ. ರಾಜ್ಯತಂತ್ರದ ಮೂರು ಭಾಗಗಳು ಬ್ರಹ್ಮ, ಕ್ಷತ್ರ, ವೈಶ್ಯ ಎಂಬ ವೇದದಲ್ಲಿಯ ಪರಂಪರೆಗೆ ಅನುಸಾರವಾಗಿದ್ದು ಕ್ಷಾತ್ರಶಕ್ತಿಗಿಂತ ಬ್ರಾಹ್ಮೀ ಶಕ್ತಿಗೆ ಹೆಚ್ಚು ಮಹತ್ವ ಕೊಡಲಾಗಿತ್ತೆಂಬುದು ನಿರ್ವಿವಾದವಾಗಿದೆ.

ರಾಜನು ಧರ್ಮಾಧೀನ

ಪ್ರಾಚೀನ ಭಾರತೀಯ ಸಮಾಜದಲ್ಲಿ ಆಧ್ಯಾತ್ಮಿಕ ಅಧಿಕಾರ ಚಲಾವಣೆಯಲ್ಲಿ ಅರಸನು ಪೃಥ್ವಿಯಲ್ಲಿ ದೇವಸನ್ನಿಭನೇ ಆಗಿದ್ದನು. ಪುರೋಹಿತನು ಆಧ್ಯಾತ್ಮ ಶಕ್ತಿಯ ಅಭಿಗಂತೃವಾಗಿದ್ದು ಅರಸನು ಕೇವಲ ಕರ್ತೃವಾಗಿದ್ದನು. ಅಂತೆಯೇ ಪುರೋಹಿತ ಮತ್ತು ಅರಸನು ಒಕ್ಕೊರಲಿನಿಂದಲೇ ಮಾತಾಡುತ್ತಿದ್ದರು. ಅರ್ಥಾತ್ ಪುರೋಹಿತ ಆಡಿದ್ದನ್ನು ಅರಸನು ಕೃತಿಯಲ್ಲಿ ಇಳಿಸುತ್ತಿದ್ದನು. ಇದರಿಂದ ಅರಸನು ಸರ್ವತಂತ್ರ ಸ್ವತಂತ್ರನಿದ್ದನೆಂದು ಹೇಳಲಿಕ್ಕಾಗದು. ತನ್ನ ಮನಸ್ಸಿಗೆ ಬಂದಂತೆ ಅರಸನು ಆದೇಶ ಕೊಡುತ್ತಿರಲಿಲ್ಲ, ಆದರೆ ಸಾಧುವಾದುದನ್ನೆ ಆದೇಶಿಸುತ್ತಿದ್ದನು. ಅಂದರೆ ಅರಸನು ಕೇವಲ ಸಾಧಕನಂತಿದ್ದು ಅವನ ರಾಜನೀತಿ ಇಲ್ಲವೆ ನೀತಿಶಾಸ್ತ್ರದ ಪ್ರಣೇತೃವು ಪುರೋಹಿತನೇ ಅರ್ಥಾತ್ ಧರ್ಮಜ್ಞನೇ ಆಗಿದ್ದನೆಂದು ಗೊತ್ತಾಗುವದು. ಅಂತೆಯೇ ಅರಸನು ತನ್ನ ಮನಸ್ಸಿಗೆ ಬಂದಂತೆ ಮಾತನಾಡಲು, ಅಪ್ಪಣೆ ಕೊಡಲು ಅಧಿಕೃತನಿರಲಿಲ್ಲ. ತನ್ನ ಈ ಕರ್ತವ್ಯದಿಂದ ಚ್ಯುತನಾಗದ ಅರಸನೇ ನಿಜವಾದ ಅರಸನು. ಸಾಧುವಾಗಿ ನಡೆಯುತ್ತಿದ್ದ ಅರಸನು ವ್ರಜನನೆಂದು(ವತ್ರ) ಕರೆಯಿಸಿಕೊಳ್ಳಲ್ಪಡುತ್ತಿದ್ದನು.

ಪ್ರಾಚ್ಯ ಪರಂಪರೆಯಲ್ಲಿಯ ಅರಸನು ಆನುವಂಶಿಕವಾಗಿ ದೈವಾಯತ್ತವಾದ ಅರಸೊತ್ತಿಗೆಯನ್ನು ಅನುಭೋಗಿಸುತ್ತಿದ್ದನೇನೊ ನಿಜ. ಅವನೇನು ಘಟನಾತ್ಮಕ ಅಧಿಪತಿಯಾಗಿರಲಿಲ್ಲ. ಬಹುಸಂಖ್ಯ ಪ್ರಜೆಗಳ ಮತ್ತು ಮಂತ್ರಿಮಂಡಳದ ಇಚ್ಛೆಗನುಸಾರವಾಗಿ ನಡೆಯುವ ಸಾಮಾಜಿಕ ನಿರ್ಬಂಧಗಳಿದ್ದ ಅರಸನೂ ಆಗಿರಲಿಲ್ಲ. ಹೀಗಿದ್ದರೂ ಅವನು ಸ್ವಚ್ಛಂದ ಸ್ವತಂತ್ರನಾಗಿದ್ದನೆಂದು ಮಾತ್ರ ಹೇಳಲಿಕ್ಕಾಗದು. ತದ್ವಿರುದ್ಧವಾಗಿ ಅವನು ಮತ್ತೊಬ್ಬ ರಾಜರಾಜನಿಗೆ ಅಧಿರಾಜನಿಗೆ ಅಧೀನನಾಗಿದ್ದನು. ಅಂದರೆ ಧರ್ಮವೇ ಅರಸೊತ್ತಿಗೆಯ ಮೂಲತತ್ವವಾಗಿದ್ದು ಆ ಧರ್ಮ ಬಂಧನದಿಂದಲೆ ಅವನು ಆಳಬೇಕಾಗಿದ್ದಿತು. ಘಟನಾತ್ಮಕ ಅರಸನು ತನಗೆ ಸಮಾನರಾದವರ ಹಲಸಲ ತನಗಿಂತ ಕಡಿಮೆ ತರಗತಿಯವರ ನಿಯಂತ್ರಣಕ್ಕೊಳಗಾಗಬೇಕಾಗುವದು. ಆದರೆ ದೈವಾಯತ್ತ ಅರಸೊತ್ತಿಗೆಯನ್ನು ನಡೆಸುವವರು ತಮಗಿಂತ ಶ್ರೇಷ್ಠರಾದವರ ನಿಯಂತ್ರಣದಲ್ಲಿ ಇರುತ್ತಿದ್ದರು. ಧರ್ಮವೊಂದಕ್ಕೇ ಅವರು ವಿಧೇಯರು. ಧರ್ಮಾರ್ಥಧರ್ಮಜ್ಞರಾದ ಬ್ರಾಹ್ಮಣರ ಹೊರತು ಉಳಿದವರೆಲ್ಲ ಅವನ ಅಧೀನರೆಂದು ಹೇಳಲಾಗಿತ್ತು. ಈ ಪರಿಸ್ಥಿತಿಯಲ್ಲಿ ಯಾರ ಆಡಳಿತ ಹೆಚ್ಚು ಸುಖಕರವೆಂಬುವನ್ನು ವಿವರಿಸುವ ಅವಶ್ಯಕತೆಯಿಲ್ಲ.

ಪುರೋಹಿತನ ಲಕ್ಷಣಗಳು

ಈ ಪುರೋಹಿತನು ತ್ರಯೀ ವಿದ್ಯೆಯನ್ನು ಅರಿತವನಾಗಿದ್ದನು. ಅಂದರೆ ಮೂರು ಲೋಕಗಳ ಮತ್ತು ಅವುಗಳ ಅರಸರ ಜ್ಞಾನವು ಅವನಿಗಿರುತ್ತಿದ್ದಿತು. ಭೂರ್ಭುವಸ್ಸ್ವರ್ಲೋಕಗಳ ಅಧಿಪತಿಗಳ ಅರಿವು ಇರುವದರಿಂದಲೆ ಪುರೋಹಿತನು ತನ್ನ ಆ ಸ್ಥಾನಕ್ಕೆ ಯೋಗ್ಯವಾಗಿದ್ದನೆಂಬುದು ಅಂದಿನವರ ಅಭಿಪ್ರಾಯ. ವಶಿಷ್ಠ ಮೊದಲಾದವರು ಸುಪ್ರವಾನರೆಂದು ಖ್ಯಾತಿ ಪಡೆದಿರುವರು. ಈ ತ್ರಯೀವಿದ್ಯೆಯನ್ನು ಅಭ್ಯಸಿಸಿದವರಿಗೆ ಇಡೀ ರಾಜ್ಯತಂತ್ರದ ಗುಟ್ಟೆಲ್ಲ ಗೊತ್ತಾಗುತ್ತಿದ್ದಿತು. ಇಂಥ ಪುರೋಹಿತನ ನೇತೃತ್ವದಲ್ಲಿ ಅರಸೊತ್ತಿಗೆಯನ್ನು ನಡೆಸುವ ಅರಸನು ಬಹಳ ವೃದ್ಧನಾಗುವ ವರೆಗೆ ಆಳುತ್ತಿದ್ದನು. 'ನ ಪುನರ್ವಾರ್ಧ್ಯತೆ' ಎಂಬುದಾಗಿ ಇಂಥ ರಾಜನಿಗೆ ಉಲ್ಲೇಖಿಸಲಾಗಿದೆ. ಆಕಾಶ ಮತ್ತು ಭೂಮಿಯ ಪ್ರತಿನಿಧಿಗಳಾದ ಪುರೋಹಿತ ಮತ್ತು ರಾಜನ ಈ ದೈವೀ 'ವಿವಾಹದ' ಮುಖ್ಯ ಉದ್ದೇಶವು ರಾಜ್ಯದಲ್ಲಿ ಸುಭಿಕ್ಷವಾಗಬೇಕು ಅಕಾಲಮೃತ್ಯು ಮುಂತಾದವು ಬರಬಾರದೆಂಬುದಾಗಿದೆ. ಈ ದೈವೀ ವಿವಾಹವು ಮತ್ತು ಯಜ್ಞವು ಅಕಾಲಮೃತ್ಯು ಮತ್ತು ಕ್ಷಾಮಬಾಧೆಯಿಂದ ಸಂರಕ್ಷಿತವಾಗಲು ಇನ್ನುರನ್ನದಂತಿದ್ದಿತೆಂದು ಹೇಳಲಾಗಿದೆ. ಈ ರೀತಿ ಆಕಾಶ ಮತ್ತು ಪೃಥ್ವಿಯ ದೈವೀ ವಿವಾಹವಾಗುವ ಮೊದಲು ಮಳೆಯಿರಲಿಲ್ಲ, ಬಿಸಿಲಿರಲಿಲ್ಲ ಪಂಚಮಹಾಭೂತಗಳು ಒಂದಕ್ಕೊಂದು ಸಂಬದ್ಧವಾಗಿರಲಿಲ್ಲ. ದೇವತೆಗಳೆಲ್ಲ ಶೋಕವಿಹ್ವಲರಾಗಿ ಅಶ್ವಿನಿ ದೇವತೆಗಳನ್ನು ಮೊರೆಹೋದರು. ಆಗ ಆಕಾಶ ಮತ್ತು ಪೃಥ್ವಿಯ ದೈವೀ ವಿವಾಹವಾಯಿತೆಂಬ ಉಲ್ಲೇಖವುಂಟು.

ಮೇಲಿನದನ್ನೆಲ್ಲ ಅವಲೋಕಿಸಿದ್ದರೆ ಇಡೀ ರಾಷ್ಟ್ರದ ಜೀವನ ಮತ್ತು ಸುಖಸಮಾಧಾನ ರಾಜನನ್ನು ಅವಲಂಬಿಸಿತ್ತೆಂದು ಗೊತ್ತಾಗುವದು. ಯಜಮಾನನೆಂದು ರಾಜನು ತನ್ನ ಈ ಪ್ರಾಥಮಿಕ ಕರ್ತವ್ಯವನ್ನು ಮಾಡದಿದ್ದರೆ ಮಳೆಬೆಳೆಗಳೆಲ್ಲ ಮಾಯವಾಗುವವು. ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ। ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ಎಂದು ಭಗವದ್ಗೀತೆಯಲ್ಲಿ ಹೇಳಿದ್ದು ಯಥಾರ್ಥವಾಗಿದೆ. ಜಗತ್ತಿನ ಸುಖಸಂಪತ್ತಿಗೆ ಯಜ್ಞವೆ ತಳಹದಿಯಾಗಿದೆ ಭೀಮನು ಓರ್ವ ಅರಸನನ್ನು ಕುರಿತು ನಿನ್ನ ಕೈಯು ಬಂಗಾರದ ಮಳೆಯನ್ನು ಸುರಿಸಬಹುದು, ಉಗಮವು ಅಕ್ಷಯ್ಯವಾಗಿದೆ, ಪ್ರವಾಹವು ಬತ್ತಿಲ್ಲ, ಯಜ್ಞದಿಂದ ಮತ್ತೆ ಅದು ಹರಿಯತೊಡಗುವದು ಎಂದು ಹೇಳಿದ್ದು ಮಹಾಭಾರತದ ವನಪರ್ವದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಅಹಂಕಾರಿ ಅರಸನು ನಾಶಹೊಂದುವನು

ಅರಸನು ಪುರೋಹಿತನೊಡನೆ ಸಹಕರಿಸಿ ಅವನ ಆದೇಶದಂತೆಯೇ ನಡೆದರೆ ಇದೆಲ್ಲ ಸಾಧ್ಯವಾಗುವದು. ಇಂಥ ಅರಸನು ಪ್ರಜಾಪಿತನೆಂದು ಕರೆಯಿಸಿಕೊಳ್ಳುವನು. ಆದರೆ ತದ್ವಿರುದ್ಧವಾಗಿ ಅರಸನು ತನ್ನ ಮನಬಂದಂತೆ ನಡೆದರೆ, ಆಡಳಿತೆಯಲ್ಲಿಯ ಅರ್ಥಭಾಗವು ಸ್ವತಂತ್ರವಾದರೆ, ನ್ಯಾಯವನ್ನು ಬದಿಗಿಟ್ಟು ಶಕ್ತಿಯೇ ಅಧಿಕಾರಸೂತ್ರವನ್ನು ವಹಿಸಿದರೆ ಅರಸನೂ ಅರಸೊತ್ತಿಗೆಯೂ ಕುಟುಂಬ ಮತ್ತು ಮನೆಯೂ ಎಲ್ಲ ನಾಶವಾಗಿ ಎಲ್ಲೆಲ್ಲಿಯೂ ಅನೃತವು ಪ್ರಸ್ಥಾಪಿತವಾಗುವದು. ಈ ಬಗೆಯ ಅರಸರ ಅಹಂಕಾರದಿಂದ ಅರಸೊತ್ತಿಗೆಯೇ ಕುಸಿದು ಬಿದ್ದ ಅರಸನು ಅಧೋಗತಿಗಿಳಿದ ಉದಾಹರಣೆಗಳು ಬೇಕಾದಷ್ಟಿರುವವು. ಬೃಹಸ್ಪತಿಯನ್ನು ಧಿಕ್ಕರಿಸಿದ ಸೋಮ, ತನ್ನ ಅಹಂಕಾರದಿಂದ ಇಂದ್ರನನ್ನೆ ಪದಚ್ಯುತ ಮಾಡಿದ ನಹುಷ, ಸ್ವಾತಂತ್ರ್ಯ ಮತ್ತು ಸಮಾನಾಧಿಕಾರವನ್ನು ಪಡೆಯುವ ಅಗ್ರಹಕ್ಕಾಗಿ ಸ್ವರ್ಗದಿಂದ ಕೆಳಗೆ ಬಿದ್ದ ಸೈತಾನನಾದ ಲುಸಿಫರ, ಇವರ ಕಥೆಗಳು ಸರ್ವಶ್ರುತ. [illegible]ದಿಂದ ಅರಸನ ಸ್ವೇಚ್ಛಾವರ್ತನೆಯು ಯಾವಾಗಲೂ ನಾಶಕ್ಕೆ ಕಾರಣವೆಂಬುದು ಸ್ಪಷ್ಟವಿದೆ.

ಪರಂಪರಾಗತ ಸಮಾಜದಲ್ಲಿ ಪಟ್ಟಾಳಿಕೆ ನಡೆಸುವವನು ತೊರಗಟ್ಟಲ್ಪಡುವನು ಬಹಿಷ್ಕೃತನಾಗುವನು. ಇಂದ್ರನ ಉದಾಹರಣೆಯಲ್ಲಿ ಇದನ್ನು ಕಾಣಬರುವಲ್ಲದೆ, ಇಸ್ಲಾಮದಲ್ಲಿ ಇಬ್ಲಿಸನ ಸಂಬಂಧದಲ್ಲಿಯೂ ಈ ಮಾತನ್ನು ಹೇಳಲಾಗಿದೆ. ಪ್ರಜಾಪೀಡಕನಾದ ಇಂಥ ರಾಜನನ್ನು ತಳ್ಳಿ ಪ್ರಜಾರಂಜಕನಾದ ಅರಸನನ್ನು ಅಭಿಷಿಕ್ತ ಮಾಡುವದು ಪ್ರಾಚೀನ ಪರಂಪರೆ ಈ ಪರಂಪರೆಯಿಲ್ಲದ ಸಮಾಜದಲ್ಲಿ ಪ್ರಜಾಪೀಡಕ ಅರಸನನ್ನು ಪ್ರಜಾಕ್ರಾಂತಿಯಿಂದ ಕಿತ್ತೊಗೆದ ಬಳಿಕ, ತಮ್ಮ ಹಿತ ಸಂಬಂಧ ರಕ್ಷಣೆಗಾಗಿ ಯಾರು ಛಲಿಸಲ್ಪಟ್ಟಿದ್ದರೊ ಅವರೇ ಅಧಿಕಾರವನ್ನು ಆಕ್ರಮಿಸಿ ತಾವು ಪ್ರಜಾಪೀಡಕರೇ ಆಗುವರು. ಬಹುಸಂಖ್ಯ ಪಕ್ಷದವರು ಅಲ್ಪಸಂಖ್ಯರನ್ನು ಛಲಿಸಹತ್ತುವರು. ಪರಸ್ಪರ ತಾಳಮೇಳವಿಲ್ಲದ ಈ ಪ್ರಜಾಪ್ರಭುತ್ವವು ಲಂಚಗುಳಿಯಾಗಿ ಕಾರ್ಯಕ್ರಮ ಆಡಳಿತವನ್ನು ಸಾಗಿಸಲಾರದೆ ಹೋಗುವದರಿಂದ ಒಬ್ಬನೇ ಅಧಿಕಾರವನ್ನು ಆಕ್ರಮಿಸುವದಕ್ಕೆ ಅವಕಾಶವುಂಟಾಗುವದು ಅವನೇ ಸರ್ವಾಧಿಕಾರಿಯಾಗಿ ರಾಜ್ಯ ನಡೆಸಹತ್ತುವನು. ಅವನು ಮತ್ತಷ್ಟು ಪ್ರಜಾಪೀಡಕನೇ ಆಗುವನು. ಅವನು ತನ್ನಂತ್ಯತ ಶ್ರೇಷ್ಠ ಶಕ್ತಿಗೆ ಯಾವದೇ ಬಗೆಯ ಸಾತ್ವಿಕ ವಿಧೇಯತೆಯನ್ನು ಕೂಡ ವ್ಯಕ್ತ ಮಾಡಲಾರ. ಸದ್ಭಾವನೆಗಳು ಅವನಲ್ಲಿದ್ದರೂ ತತ್ವನಿಷ್ಠೆಯೇ ಅವನಲ್ಲಿ ಉಳಿಯದು. ಇಂಥ ಅರಸೊತ್ತಿಗೆಯ ಪರಿಣಾಮದಿಂದ ದೇಶದಲ್ಲೆಲ್ಲ ಅನೃತವು ಅವ್ಯವಸ್ಥೆಯೂ ಹಬ್ಬುವದು. ನಮ್ಮ ಕಾಲದಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ. ನಾವು ಯಾವದನ್ನು ನಾಗರಿಕತೆಯೆನ್ನುವೆವೋ ಅದು ಮಾರಕಯಂತ್ರದಂತಿದೆ. ಅದಕ್ಕೆ ಸದ್ಭಾವನೆಯಿಲ್ಲ. ಗೊತ್ತುಗುರಿಗಳಿಲ್ಲ ಎಂದು ಜೆ ಲಾಪಿಯಾನಾ ಇವರು ಅಭಿಪ್ರಾಯಪಟ್ಟಿರುವರು. ದೈವೀ ಶಕ್ತಿಯನ್ನು ಬಿಟ್ಟು ನ್ಯಾಯ್ಯವನ್ನು ಬಿಟ್ಟುಕೊಟ್ಟು ಬಲಕ್ಕೇ ಹೆಚ್ಚು ಮಹತ್ವ ಕೊಟ್ಟರೆ ಈ ಬಗೆಯ ಪರಿಸ್ಥಿತಿಯುಂಟಾಗುವದು. "ಸೃಷ್ಟಿ ನಿಯಮಗಳನ್ನುಲ್ಲಂಘಿಸಿ ಆಧ್ಯಾತ್ಮಿಕಶಕ್ತಿಗಳನ್ನ ಲಕ್ಷಿಸಿ ನಡೆಯುತ್ತಿರುವ ಎಲ್ಲ ರಾಜ್ಯತಂತ್ರಗಳು ಅಲ್ಪಾಯುಷಿಗಳಾಗುವವೆಂದು ಜಾರ್ಜ ಅಮೇರಿಯವರು ಅಭಿಪ್ರಾಯಪಟ್ಟಿದ್ದುಂಟು "ಚರ್ಚ ಮತ್ತು ಲೋ" ಇವುಗಳಲ್ಲಿ ವಿಭಜನೆಯಾದರೆ ಸರಕಾರವು ಚರ್ಚನ್ನು ಗುಲಾಮಗಿರಿಯಲ್ಲಿ ನೂಕಿದರೆ ರಾಜ್ಯದಲ್ಲಿ ಅನೃತದ ಪ್ರಸ್ಥಾಪನೆಯಾಗುವದು. ಇದರಿಂದ ಬಗೆಬಗೆಯ ಅನರ್ಥಗಳಾಗುವವು.

ಈ ವರೆಗೆ ಅಧಿದೈವತ ಮತ್ತು ಅಧಿರಾಜ್ಯದ ದೃಷ್ಟಿಯಿಂದ ರಾಜ್ಯಶಾಸ್ತ್ರದ ವಿವೇಚನೆಯನ್ನು ಮಾಡಿದ್ದಾಯಿತು. ಇದರಲ್ಲಿ ವ್ಯಕ್ತಿಯನ್ನು ಪ್ರಜೆಯಾಗಿ ಪರಿಗಣಿಸಲಾಗಿದ್ದಿತು. ಆದರೆ ಈ ತತ್ವಕ್ಕೆ ಇನ್ನೊಂದು ಅಂಗವಿದೆ ಅಂದರೆ ಆಧ್ಯಾತ್ಮ ದೃಷ್ಟಿ. ಈ ಪ್ರಶ್ನೆಯು ಕೇವಲ ಸಾರ್ವತ್ರಿಕ ಮತ್ತು ರಾಷ್ಟ್ರೀಯ ಅಥವಾ ನಾಗರಿಕ ವ್ಯವಸ್ಥೆಯದಾಗಿರದೆ ಅಂತರಿಕ ಅರ್ಥಪದ್ಧತಿಯದೂ ಆಗಿದೆ. ಈ ವರೆಗಿನ ವಿವೇಚನೆಯಲ್ಲಿ ಮಾನವ ಪರಮಾತ್ಮನ ಭಾಗ ಆಗಿದ್ದನು [illegible] ಸಂಪ್ರದಾಯವನ್ನನುಸರಿಸಬಿದ್ದರೆ ಈ ನಗರವು ಎಂದಿಗೂ ಸುಖ ಸಮೃದ್ಧವಾಗದು. ಇಲ್ಲಿಯೂ ಉಚ್ಚ ತತ್ವಗಳೇ ಆಡಳಿತೆಯ ಆಧಾರಗಳಾಗಿರಬೇಕು. ಮಾನವನಿಗೆ ಭೌತಿಕ ಮತ್ತು ಆಧ್ಯಾತ್ಮಿಕ ಜೀವನ ಎರಡು ಅಂಗಗಳಿದ್ದು [illegible] ಇಂದ್ರಿಯಗಳಿಗೆ [illegible]

[illegible]

ಅಹಂಕಾರಕ್ಕೆ ಎಡೆಯಿಲ್ಲ

[illegible] ನಾನೇ ಎಲ್ಲವನ್ನು ಮಾಡುವವನು ಎಂಬ ಅಹಂಕಾರವುಂಟಾಗುವದು ವಿಶಾಲ ಮತ್ತು ಅನಾಸಕ್ತ ಭಾವವೂ ಹೆಚ್ಚುವದು ತಾನು ದ್ರಷ್ಟನೆಂಬುದನ್ನೆ ಮಾನವನು ಮರೆತುಬಿಡುವನು. [illegible]ರಸನಾದರೂ ಇದನ್ನು ತಿಳಿದುಕೊಂಡು ತನ್ನ ಕರ್ತವ್ಯವನ್ನು ಮಾಡತಕ್ಕದ್ದು. ಅಂದರೆ ಮಾತ್ರ ಚಿಂತೆಯಿಂದ ಮುಕ್ತನಾದ [illegible] ಪ್ರಸ್ಥಾಪಿತವಾಗುವದು. ಅರಸನು [illegible]ನಾಗುವನು. '[illegible]' ಎಂಬ ಭಾವನೆಯಿಂದ ಅವನು ಆಳಹತ್ತುವನು. ಇಂಥ ಅರಸನಿಗೆ, 'ಅರಸನೇ ಚಿರಾಯು ಆಗು' ಎಂದು ಎಲ್ಲರೂ ಹರಸುವರು.

ಈ ರೀತಿಯಾಗಿ ಮಾನವ, ರಾಜನಲ್ಲಿಯ ಅಹಂಭಾವವು ಸರ್ವವಿನಾಶಕ್ಕೆ ಕಾರಣವಾಗಿ ವ್ಯಕ್ತಿಯು ಇಲ್ಲವೆ ಸಮಾಜದ ರಾಜಕಾರಣವನ್ನೆ ರಸಾತಳಕ್ಕಿಳಿಸಬಹುದು; ಸ್ವರಾಜ್ಯವು ಆತ್ಮಸಂಯಮವನ್ನೆ ಅವಲಂಬಿಸುವದು ಎಂಬುದೇ ಹಿಂದೀ ರಾಜ್ಯ ಪರಂಪರೆಯ ಮೂಲವು. ಆಧುನಿಕ ಹಿಂದುಸ್ತಾನದಲ್ಲಿಯೂ ಈ ಪ್ರಾಚೀನ ರಾಜ್ಯ ಪರಂಪರೆ ಉಳಿದುಕೊಂಡು ಬಂದಿದೆಂದು ಹೇಳಬಹುದು. ಗಾಂಧೀಜಿಯವರು ಕಂಡ ರಾಜಕೀಯ ವಿಜಯವು ಆತ್ಮಸಂಯಮದಿಂದಲೆ ಸಾಧ್ಯವು.

ಈ ರೀತಿಯಾಗಿ ಅರಸನು ದೈವಾಯತ್ತವಾದ ಅರಸೊತ್ತಿಗೆಯನ್ನು ಅನುಭವಿಸತಕ್ಕವನು. ತನ್ನ ಮನುಷ್ಯಶಕ್ತಿಗಿಂತ ಹೆಚ್ಚಿನ ಶಕ್ತಿಯಿಂದ ಆಳುವವನು. ತದ್ವಿರುದ್ಧವಾಗಿ ತನ್ನ ಶಕ್ತಿಯಿಂದಲೆ ಆಳಹತ್ತಿದರೆ ಅವನು ಸ್ವೇಚ್ಛಾಚಾರಿಯಾಗುವನು, ಅವನನ್ನು ದಾರಿಗೆ ತರಲಿಕ್ಕೆ ಬೇಕು. ಅರಸನಿಗೆ ಅನ್ವಯಿಸುವ ಈ ಮಾತು ಸಾಮಾನ್ಯ ವ್ಯಕ್ತಿಗೂ ಅನ್ವಯಿಸುವದು. ಅವನು ಸ್ವೇಚ್ಛಾಚಾರಿಯಾಗಿ ವರ್ತಿಸದೆ ಅಹಂಕಾರವನ್ನು ಬಿಟ್ಟುಕೊಟ್ಟು ಸದಾಚಾರಿಯಾದರೆ ಮಾತ್ರ ಮನುಷ್ಯನೆನಿಸಲು ಪಾತ್ರನಾಗುವನು. ಆದರೆ ತದ್ವಿರುದ್ಧವಾಗಿ ಅವನು ಅಹಂಕಾರಮತ್ತನಾಗಿ ಸ್ವೇಚ್ಛಾಚಾರಿಯಾದರೆ ಎಲ್ಲ ಬಗೆಯ ಅನಾದರದಿಂದಗೆ ಅವನು ಗುರಿಯಾಗುವನು. ಆತ್ಮಸಂಯಮಿಯೇ ಪ್ರಜೆಯವರನ್ನು ಆಳಬಲ್ಲನು ಅದು ಪರಿಂದ ಹಿಂದೀ ಪರಂಪರೆಯಲ್ಲಿ ಅರಸೊತ್ತಿಗೆಯೆಂದರೆ ಸರ್ವಾಧಿಕಾರ ಎಂಬುದು ಎಂದಿಗೂ ಒಗ್ಗದು. ಎಂಥ ಬಲಿಷ್ಠ ಸಮ್ರಾಟನಾಗಿದ್ದರೂ ಆತ್ಮಸಂಯಮಿಯಾಗಿರದಿದ್ದರೆ ಅವನಲ್ಲಿ [illegible] ಅವನು ಬೇಗನೆ ನಾಶಹೊಂದುವನೆಂದು ಹಿಂದೀ ಪರಂಪರೆ. ಇದು ಸಾಧ್ಯವಾಗಬೇಕಾದರೆ ಪುರೋಹಿತ ಮತ್ತು ಅರಸನ ಸ್ನೇಹ ಸಂಬಂಧ ಬೆಳೆಯಬೇಕು ಪುರೋಹಿತನ ಎಂದರೆ ಧರ್ಮಜ್ಞನ ಆದೇಶದಂತೆ ಅರಸನು ನಡೆಯತಕ್ಕದ್ದು. ಅದರಲ್ಲಿ [illegible]

[illegible]

ಚಹ ಕುಡಿಯದಿರಿ!

ಚಾ ಒಂದು ಮಾದಕ ಅಭಿಸಂವ ಪೇಯವಾಗಿದೆ. ಮಾದಕದ ಶಕ್ತಿಯು ಅಗತ್ಯವಾದ ಹದಿನಾಲ್ಕು ದ್ರವ್ಯಗಳಲ್ಲಿಯ ಒಂದು ದ್ರವ್ಯವು ಇದರಲ್ಲಿ. ಇದು ಸಂಶೋಧನ ವಿಜ್ಞಾನಿಗಳ ಹೇಳುವಾಗಿದೆ, ಅಗಸ್ತ್ಯಸಿದ್ಧ ವಿಶ್ಲೇಷಕರು ಚಾದಲ್ಲಿ ಕೆಳಗಿನ ಪದಾರ್ಥಗಳ ಅಂಶ ಸಹ ಇವೆ ಎಂದು ಹೇಳುತ್ತಾರೆ.

(೧) ಟೆನಿನ್ (Tannin) ೧೩.೪೦% ರಿಂದ ಸೇಕಡಾ ೨೭.೧೪ ರ ವರೆಗೆ (೨) ಥಾಯಿನ್ (Thine) ಸೇಕಡಾ ೨.೨೪ ರಿಂದ ಸೇಕಡಾ ೩.೦೨ ರ ವರೆಗೆ (೩) ಸುಗಂಧಿತ ಎಣ್ಣೆ (Essential oil) ೦.೭೯ ರಿಂದ ಸೇಕಡಾ ೨.೩ ರ ವರೆಗೆ.

ಒಂದನೇ ಮತ್ತು ಎರಡನೆ ಪದಾರ್ಥವು ಒಂದು ಬಗೆಯ ವಿಷ, ಮತ್ತು ತೃತೀಯ ಪದಾರ್ಥವು ಒಂದು ಬಗೆಯ ಸುಗಂಧಿತ ತೈಲವಿದ್ದು ನಿದ್ರೆಯನ್ನು ಕೊಲಗಿಸುವ ಕಾರ್ಯವನ್ನು ಅದು ಮಾಡುತ್ತದೆಂದು ತಿಳಿದುಬರುತ್ತದೆ.

"ಚಾ ಕುಡಿಯುವುದರಲ್ಲೂ ಪ್ರತ್ಯಕ್ಷ ವಿಷ ಕುಡಿಯುವುದರಲ್ಲೂ ಏನೂ ಭೇದವಿಲ್ಲ" ವೆಂದು ಅನೇಕ ಪ್ರಸಿದ್ಧ ಡಾಕ್ಟರರು ಅಂದಿದ್ದಾರೆ. ಹಾಗಿದ್ದು ನಾವು ಪ್ರತಿ ದಿನ ಕುಡಿಯುತ್ತ ಸ್ವಯಂ ತಮ್ಮ ಸ್ವಾಸ್ಥ್ಯ ಮತ್ತು ಅಮೂಲ್ಯ ಜೀವನವನ್ನು ನಷ್ಟಪಡಿಸುತ್ತಿದ್ದೇವೆ. ಶಾರೀರಿಕ ವಿಚಾರದಿಂದ ತಂಬಾಕು ಮತ್ತು ಚಾ ಒಂದೇ ಜೀಲದ ಎರಡು ಮಗ್ಗಲುಗಳು. ಅಂತರ ವಿಷ್ಟೆ- ಒಂದು ಸುಟ್ಟಿಯಾದ್ದು. ಇನ್ನೊಂದು ಅಗ್ಗವಾದದ್ದು. ತಂಬಾಕು ಮದವೇರಿಸಿ, ಸ್ವಲ್ಪ ಸಮಯದ ವರೆಗೆ ದುಃಖವನ್ನು ಅಪಹರಿಸುತ್ತದೆ. ಆದರೆ ಚಾ ನಿದ್ರೆಯನ್ನು ನಾಶ ಮಾಡುತ್ತದೆ. ಅಮೂಲ್ಯ ಜೀವನ ಮತ್ತು ಶರೀರವನ್ನು ನಷ್ಟ ಮಾಡುವುದರಲ್ಲಿ ಇದು ತಂಬಾಕಿಗಿಂತ ಅಧಿಕ ಭಯಂಕರವಾದುದಾಗಿದೆ. ಯಾಕಂದರೆ ಇದು ಅದಕ್ಕಿಂತ ಅಗ್ಗವಾಗಿದೆ; ಇದರ ಪ್ರಚಾರವು ಎಲ್ಲೆಡೆ ಇದೆ.

ಪ್ರಾಯಶಃ ಯಾವ ಮಹಾಶಯರು ಚಾ ಪಾನದ ಅಭ್ಯಾಸಿಗಳೋ ಅವರ ಹಸಿವೆಯು ನಷ್ಟವಾಗುತ್ತದೆ. ಚಾದ ವಿನಾ ಮತ್ತಾವ ವಸ್ತುವಿನ ಇಚ್ಛೆ ಇರುವುದಿಲ್ಲ. ಚಾ ಕುಡಿಯುವುದರಿಂದ ಅವರ ಇಂದ್ರಿಯಗಳು ಚಾದವಿಷಕ್ಕೆ ವಶೀಭೂತವಾಗಿ ಹೃದಯದ ಗತಿಯು ನಿರ್ಬಲವಾಗುವುದು ಮತ್ತು ಮನಸ್ಸು ಖಿನ್ನವಾಗಿಯೂ ಸಿಡುಕುಳ್ಳದ್ದಾಗಿಯೂ ಮೆದುಳು ಕಾರ್ಯರಹಿತವಾಗಿಯೂ ಆಗುವದು. ಇದರ ಅಮಲು ಸಾಧಾರಣ ತಂಬಾಕಿನಂತೆಯೇ ಇದೆ. ಯಾಕೆಂದರೆ ಚಾದ ಪ್ರಭಾವವು ಶರೀರದಲ್ಲಿಲ್ಲವಾದರೆ ಪುನಃ ಚಾ ಕುಡಿಯುವ ಇಚ್ಛೆಯು ಆಗುತ್ತದೆ. ಹಾಗೆಯೇ ಚಾದ ವಿಷವು ಇಂದ್ರಿಯಗಳ ಮೇಲೆ ಅಸ್ವಾಭಾವಿಕ ಪ್ರಭಾವ ಹಾಕಿ, ಸ್ಫೂರ್ತಿಯನ್ನುಂಟು ಮಾಡುತ್ತದೆ. ಪರಿಣಾಮವಾಗಿ ಶರೀರದ ಇಂದ್ರಿಯಗಳು ಸಮಯದ ಮೊದಲೇ ನಷ್ಟವಾಗುತ್ತವೆ. ಮೀರತ್ತಿನ ಪ್ರಸಿದ್ಧ ಡಾಕ್ಟರ ಗೋಪಾಲ ಭಾಸ್ಕರ ಗಡಬೋಲರು "ಕರ್ಣೇಂದ್ರಿಯ ಮತ್ತು ಅನ್ಯ ಜ್ಞಾನೇಂದ್ರಿಯಗಳ ಮೇಲೆ ಇದರ ಪ್ರಭಾವವು ಬಹಳ ಕೆಟ್ಟದಾಗಿ, ಕೆಲವೇ ದಿನಗಳಲ್ಲಿ ಪಕ್ಷಾಘಾತ, ಕಿವುಡುತನ, ಮುಂತಾದ ರೋಗಗಳಾಗುವುದು ಕಂಡು ಬಂದಿದೆ ಮತ್ತು ಇದರ ಪ್ರಮಾಣಗಳೂ ಇವೆ" ಎಂದಿರುವರು. ಫ್ರಾನ್ಸಿನ ಪ್ರಸಿದ್ಧ ಚಿಕಿತ್ಸಕನು "ಯಾವ ವ್ಯಕ್ತಿಗಳು ಚಾ ಕುಡಿಯುತ್ತಾರೋ ಅವರ ಮೆದುಳಿನ ನರಗಳು ನಿರ್ಬಲವಾಗುತ್ತವೆ; ಮತ್ತು ಕರ್ಣಗಳಲ್ಲಿ "ಸ್ಯಾಂ" ಎಂಬ ಧ್ವನಿಯು ಕೇಳಿ ಬರುತ್ತದೆ. ಪುರುಷರಿಗಿಂತ ಹೆಚ್ಚು ಸ್ತ್ರೀಯರು ನಿರ್ಬಲರಾಗುತ್ತಾರೆ; ಅವರು ಚಾದ ಅಭ್ಯಾಸಿಗಳಾಗಿ ಇಂತಹ ರೋಗಗಳಿಂದ ಅಧಿಕವಾಗಿ ಗ್ರಸ್ತರಾಗುತ್ತಾರೆ" ಎಂದಿರುವನು.

ಮೊದಲು ಮೆದುಳಿನಲ್ಲಿ ಒಂದು ಪ್ರಕಾರದ ವೇಗ ಉಂಟಾಗುತ್ತದೆ; ಪರ್ಗಸ್ಸಿನ ಒಬ್ಬ ವೈ... ಮುಖವು—ಹಳದಿಯಾಗುತ್ತಾ ಹೋಗುತ್ತದೆ; ಆದರೂ ಚಾಪಾನಿಗಳು ಅದರ ಯೋಚನೆ ಮಾಡುವದಿಲ್ಲ. ಸ್ವಲ್ಪ ಸಮಯದ ನಂತರ ಆಂತರಿಕ ಮತ್ತು ಬಾಹ್ಯ ಕಷ್ಟಗಳು ಪ್ರಕಟವಾಗತೊಡಗುತ್ತವೆ. ಚರ್ಮವು ಶುಷ್ಕ ಮತ್ತು ಮುಖಾಕೃತಿಯು ಅಧಿಕ ಹಳದಿಯಾಗುತ್ತದೆ. ಸ್ವಾಭಾವಿಕ ಶಿಥಿಲತೆಯು ಪ್ರಕಟವಾಗತೊಡಗುವಂತಹ, ಒಂದು ತರದ ಕಠಿಣ ಮೂರ್ಛೆ, ಆಂತರಿಕ ಇಂದ್ರಿಯಗಳ ಕಾರ್ಯದಲ್ಲಿ ಶಿಥಿಲತೆ; ಕೈಯಲ್ಲಿ ಕಂಪ, ಪಚನಾಂಗಗಳಲ್ಲಿ ಪೀಡೆ ಉಂಟಾಗುವಂತಹ

ವಿವಿಧ ಪ್ರಪಂಚ

"ಚಾಳ ವರ್". ಎನ್ನುವ ಒಂದು ಅನ್ಯ ರೋಗವು ಉಂಟಾಗುತ್ತದೆ ಎಂದು ಡಾಕ್ಟರರ ಅನುಭವವಿದೆ. ಚಾದ ವಿಷವು ಮೂತ್ರಾಶಯದ ಮೇಲೆ ಅಸಹಜ ಪ್ರಭಾವ ಹಾಕಿ, ಅದರ ಮೂತ್ರ ತಡೆಹಿಡಿಯುವ ಶಕ್ತಿಯನ್ನು ಕಡಮೆ ಮಾಡುತ್ತದೆ. ಇದರ ಪರಿಣಾಮವಾಗಿ ಅವನಿಗೆ ಹೆಚ್ಚು ಕೆಲಸ ಮಾಡುತ್ತ ಆಗಾಗ ಮೂತ್ರವಿಸರ್ಜನೆ ಮಾಡಬೇಕಾಗುತ್ತದೆ. ಮುಂದೆ ಮೂತ್ರದಲ್ಲಿ ಮೂತ್ರಾಮ್ಲ (Uric-Acid) ಕೆಲ್ಸಿಯಮ್, ಆಕ್ಸ್‌ಲೇಟ್ ಮತ್ತು ಅಂಡಾರುಣ ಮುಂತಾದವು ಹೋಗತೊಡಗುತ್ತವೆ. ಇದರಲ್ಲಿ ಅನೇಕ ಮೂತ್ರಸಂಬಂಧೀ ಪೀಡೆಗಳು ಉತ್ಪನ್ನವಾಗುತ್ತವೆ.

ಮದ್ಯಪಾನಿಗಳಂತೆಯೇ ಚಾಪಾನಿಗಳೂ ತಮ್ಮ ಕಷ್ಟದ ಚಿಕಿತ್ಸೆಯು ಚಾಪಾನವೆಂದೇ ತಿಳಿಯುತ್ತಾರೆ. ಪರಿಣಾಮವಾಗಿ ರೋಗವು ವರ್ಧಿಸುತ್ತ ಹೋಗುತ್ತದೆ. ಡಾ. ಬೆಗ್ರಾರ್ಡನು ಬಹಳ ರೋಗಿಗಳನ್ನು ಪರೀಕ್ಷೆಮಾಡಿ, ಚಾದ ವಿಷವು ಶರೀರದಲ್ಲಿ ಒಟ್ಟಾಗುತ್ತ ಇರುತ್ತದೆ; ಮತ್ತು ದುರ್ಬಲ ಶರೀರದವರಲ್ಲಿ ಇದರಿಂದ ಬಹಳ ಹಾನಿಕರ ಪರಿಣಾಮವಾಗುತ್ತದೆಂಬುದನ್ನು ಸಿದ್ಧಮಾಡಿ ತೋರಿಸಿದ್ದಾನೆ. ಇದರ ಸೇವನೆಯಿಂದ, ಇದರ ವಿಷಯುಕ್ತತೆಯ ಪ್ರಭಾವದ ಅನೇಕ ಲಕ್ಷಣಗಳು—ಹಸಿವೆಯು ನಷ್ಟವಾಗುವುದು, ಪಚನವಿಕಾರ, ಕೋಷ್ಠಬದ್ಧತೆ, ಹೃದಯದ ಅಧಿಕ ಬಡಿತ, ಹೃದಯಸ್ಥಾನದಲ್ಲಿ ಪೀಡೆ; ಉಬ್ಬೆಳಿಸುವಿಕೆ, ವಮನ, ಮೂರ್ಛೆ, ನೋವು, ಸಂಧಿವಾತ, ವಾಯು-ಮುಂತಾದ ರೋಗಗಳುಂಟಾಗುತ್ತವೆ.

ಚೀನದಲ್ಲಿ ಹೇಗೆ ಅಫೀಮಿನ ಪ್ರಚಾರವು ಮಾಡಲ್ಪಟ್ಟಿತ್ತೋ ಹಾಗೆಯೇ ಭಾರತದಲ್ಲಿ ಚಾದ ಪ್ರಚಾರವಾಗುತ್ತಿದೆ. ಸ್ವಾಸ್ಥ್ಯದ ಮಹತ್ವ ತಿಳಿದಿರುವ ಪ್ರತಿಯೊಬ್ಬ ವ್ಯಕ್ತಿಯೂ ವಿಚಾರಶೀಲನಾಗಿ ಚಾ ಹತ್ತಿರ ಸುಳಿಯದಂತೆ ಜಾಗ್ರತೆಯುಂದಿರಬೇಕು. ಯಾರಿಗೆ ಅಭ್ಯಾಸವಾಗಿದೆಯೋ ಮತ್ತು ಯಾರು ಬಿಡಲಾರರೋ ಅಂಥವರು ತುಳಸಿ, ಬ್ರಾಹ್ಮೀ, ಶುಂಠಿ, ದೊಡ್ಡದ್ವೀಪ ದ್ರಾಕ್ಷಿ (ಮುನಕ್ಕಾ) ಆದಿ ಲಾಭದಾಯಕ ಔಷಧಿಗಳನ್ನು ನೀರಿನಲ್ಲಿ ಬೇಯಿಸಿ, ಚಾದ ಬದಲಾಗಿ ಸೇವಿಸಬಹುದು.

(ಡಾ. ವೀರಭದ್ರಸಿಂಹ ಶರ್ಮರ ಲೇಖನದ ಅನುವಾದ ಬ. ಅ. ಶಿಲ್ಲಿಯವರಿಂದ)

ಆಧುನಿಕ ಕಲೆ

ಕಲಾವಿದ ವಿಲಿಯಂ ರೂಕನ್ಸ್ ಐರೋಪ್ಯ ಶಿಲ್ಪದ ಮೇಲೆ ಬರೆವಾಗ ಆಧುನಿಕ ಕಲೆಯ ಬಗ್ಗೆ ನಾಲ್ಕು ಮಾತುಗಳನ್ನು ಬರೆದಿರುವುದು ಮನನೀಯವಾಗಿದೆ. ಅವುಗಳ ಸಾರ ಹೀಗಿದೆ:

ಕೇವಲ ಉಪಯುಕ್ತತೆಯ ದೃಷ್ಟಿಯಿಂದ ರಚಿಸಿದ ವಸ್ತುಗಳಂತೆ ಕೇವಲ ಸೌಂದರ್ಯ ದೃಷ್ಟಿಯಿಂದ ರಚಿತವಾದ ವಸ್ತುಗಳೂ ಜೀವನದಲ್ಲಿ ಆನಂದವನ್ನು ಕೊಡಲಾರವು. ಅತಿ ಸರಳ ರೀತಿಯಂತೆ ಅತಿ ಜಟಿಲ ಕಲ್ಪನೆಗಳೂ ಕಲೆಯನ್ನು ಹಾಳುಗೆಡಿಸುವುವು. ದರ್ಶನವಿಲ್ಲದ ಕಲೆಗಾರ ಜನರನ್ನು ಅನೀತಿ, ಅಧರ್ಮಗಳಿಗೊಯ್ಯುತ್ತಾನೆ. ಜೀವನದ ಹೊಲಸುಗಳನ್ನು ಅನುಕರಣೀಯವೆಂದು ತೋರುವಂತೆ ರಚಿಸುವ ಕಲೆಗಾರಿಕೆಗೆ ಸಿನೆಮವೊಂದು ದೊಡ್ಡ ನಿದರ್ಶನ. ಶಾಂತಿ ಸಂತೋಷಗಳನ್ನು ಕೊಡದ ಈ ಕೃತಕ ಕಲೆ ಇಂದು ಆವೇಶವೆಬ್ಬಿಸಿ ಬಾಲಕ ಬಾಲಿಕೆಯರನ್ನು ಜೀವನಕ್ಕೆ ಅಸ್ವಾಭಾವಿಕವಾದ ಹಾದಿಯಲ್ಲಿ ಕರೆದೊಯ್ಯುತ್ತಿದೆ. ಕಾಮವೇ ಪ್ರೇಮವೆಂದು, ಹುಡುಗನನ್ನು ಮೋಹಿಸಲು ಹುಡುಗಿಯು ಅರ್ಧನಗ್ನಳಾಗಿ ಪ್ರದರ್ಶಿಸುವುದೇ ಅವಳ ಜೀವನದ ಅತ್ಯುನ್ನತ ಧ್ಯೇಯವೆಂದು ತೋರಿಸುವ ಸಿನೆಮದ ದುರಾದರ್ಶದಿಂದಲೇ ಕೊಲೆ, ಕಳವು, ಅತ್ಯಾಚಾರ, ಗೃಹಕಲಹ, ವೈವಾಹಿಕ ಜೀವನದಲ್ಲಿ ಅಪ್ರಾಮಾಣಿಕ ವ್ಯವಹಾರ, ಸೋಲತನ ಮುಂತಾದ ನೀಚ ಗುಣಗಳು ಬಾಲಬಾಲಿಕೆಯರಲ್ಲಿ ರೂಢವಾಗುತ್ತಿವೆ. ಈ ಅಶ್ಲೀಲ ವ್ಯವಹಾರವನ್ನು ಕಲೆಯೆಂದು ಹೆಂಗಸೂ ಗಂಡಸೂ ನೋಡಿ ಮೆಚ್ಚುವಂತಾದುದು ಜಗತ್ತಿನಲ್ಲೆಲ್ಲ ಅತ್ಯುತ್ಕೃಷ್ಟವೆನಿಸಿದ ಆದರ್ಶ ನಾಗರಿಕರೆನಿಸಿದ್ದ ಹಿಂದೀಯರಿಗೆ ಲಾಂಛನಾಸ್ಪದ.

ಆಯುಷ್ಯಶಾಲಿಗಳ ಊರು

ಚೀನಾ ದೇಶದ ಕ್ವೊಚ ಪ್ರಾಂತ್ಯದಲ್ಲಿ ಹಿರಿಂಗ ಜಿಲ್ಲೆಯಲ್ಲಿ ಒಂದು ಊರಿದೆ. ಈ ಊರಿನಲ್ಲಿ ಹೆಚ್ಚು ಜನರ ಪ್ರಾಯವು ೧೦೦ ವರ್ಷಕ್ಕೂ ಮಿಕ್ಕಿದೆ. ಈ ಊರಿನಲ್ಲಿ ಹೆಚ್ಚು ಕಡಿಮೆ ೧೦೦ ಮನೆಗಳಿವೆ. ಈಗ ಈ ಊರಿನಲ್ಲಿ ಜೀವಿಸಿ ಎವವರಲ್ಲಿ ಕೆಲವು ವ್ಯಕ್ತಿಗಳನ್ನು ಬಿಟ್ಟು ಉಳಿದೆಲ್ಲರ ಪ್ರಾಯವು ೧೦೦ ರ ಹತ್ತಿರವಿದೆ. ಒಬ್ಬ ವ್ಯಕ್ತಿಯ ಪ್ರಾಯವು ೧೯೬ ವರ್ಷವಾಗಿದೆ. ಈ ಪ್ರಾಯದಲ್ಲೂ ಇವನು ನಮ್ಮಲ್ಲಿಯ ಯೌವನಸ್ಥರಿಗಿಂತ ಹೆಚ್ಚಿನ ಶಕ್ತಿಶಾಲಿಯಾಗಿದ್ದಾನೆ. ಇವನು ಪ್ರತಿನಿತ್ಯವೂ ಬೆಳಿಗ್ಗೆ ಎದ್ದು ಕಾಡಿಗೆ ಹೋಗಿ, ಕಟ್ಟಿಗೆ ಕಡಿದು ಅದನ್ನು ತಲೆಯ ಮೇಲೆ ಹೊತ್ತು ಊರಿಗೆ ತಂದು ಮಾರಿ ಅದರಿಂದ ತನ್ನ ಜೀವನವನ್ನು ಮಾಡಿಕೊಂಡಿರುವನು ಕಳೆದ ೧೯೦ ವರ್ಷದಿಂದ ಇವನು ಪ್ರತಿನಿತ್ಯವು ಸೂರ್ಯನು ಮುಳುಗಿದ ಕೂಡಲೇ ಮಲಗಿ ಸೂರ್ಯನು ಉದಯಿಸುವ ಮೊದಲು ಏಳುವ ಒಂದು ನಿಯಮದಿಂದ ಇದ್ದು ಉತ್ತಮ ತರದ ನಿದ್ರೆಯನ್ನು ತೆಗೆಯುತ್ತಿದ್ದಾನೆ.

ಅವನ ಈ ಉತ್ತಮ ಆರೋಗ್ಯ ಮತ್ತು ಹೆಚ್ಚಿನ ಆಯುಷ್ಯದ ಬಗ್ಗೆ, ಅವನ ಹೇಳಿಕೆಯೇನಂದರೆ, ತಾನು ಪ್ರತಿನಿತ್ಯವೂ ಉತ್ತಮ ನಿದ್ರೆಯನ್ನು ತೆಗೆಯುತ್ತಿದ್ದೇನೆ. ಎಂತಹ ಕಠಿನ ಪ್ರಸಂಗದಲ್ಲೂ ಮರೆತಾದರೂ ತಾನು ರಾತ್ರಿ ಜಾಗರಣ ಮಾಡುವದಿಲ್ಲ ಹಾಗೂ ಹಗಲೂ ನಿದ್ರೆಯನ್ನು ಮಾಡುವದೂ ಇಲ್ಲ. ಹಗಲಿಡಿ ಮರ ಕಡಿಯುವುದು ಕಟ್ಟಿಗೆ ತಂದು ಮಾರುವದೇ ಮೊದಲಾದ ಕಠಿಣ ಕಾಯಕಷ್ಟವನ್ನು ಮಾಡುತ್ತಿದ್ದೇನೆ. ವಿಶೇಷತಃ ತನ್ನ ಹಗಲಿನ ಹೆಚ್ಚಿನ ಸಮಯವು ಕಾಡಿನ ಉತ್ತಮ ಹವೆಯಲ್ಲಿ ಕಳೆಯುವ ಕಾರಣ ತನ್ನ ಅಂಗಾಂಗಗಳಲ್ಲಿ ಈಗಲೂ ಉತ್ತಮ ಸ್ಫೂರ್ತಿ ಇದೆ. ಹಗಲಿಡಿ ತುಂಬ ಕಾಯಕಷ್ಟ ಮಾಡುವದರಿಂದ ಸಾಯಂಕಾಲವಾಗುವಾಗ ದೇಹಕ್ಕೆ ತುಂಬ ದಣಿವಾಗುವುದು. ನಂತರ ಸ್ವಲ್ಪ ವಿಶ್ರಾಂತಿ ಪಡೆದು ಸಾದಾತರದ ಭೋಜನ ಮಾಡಿ ಒಂದು ಗಂಟೆ ವಿಶ್ರಾಂತಿ ಪಡೆದು ನಂತರ ನಿರ್ವಿಘ್ನ ನಿಶ್ಚಿಂತನಾಗಿ ಮಲಗಿಬಿಡುವೆನು. ತನಗೆ ನಿದ್ರೆಯಲ್ಲಿ ಒಂದೇ ಒಂದು ದುಃಸ್ವಪ್ನವೂ ಬೀಳುವುದಿಲ್ಲ ಮಲಗಿಬಿಟ್ಟನಂತರ ತಾನು ಇರುವೆನೋ ಇಲ್ಲವೋ ಎಂಬ ಪರಿವೆಯು ಸಹ ತನಗಿರುವುದಿಲ್ಲ. ಬೆಳಿಗ್ಗೆ ಯಾವಾಗ ಎಚ್ಚರಿಯಾಗುವುದೊ ಆ ಸಮಯ ತನ್ನ ಇಡೀ ದೇಹದಲ್ಲಿ ನವಚೈತನ್ಯ ಹಾಗೂ ಹೊಸ ಸ್ಫೂರ್ತಿ ಬಂದ ಹಾಗೆ ಹಾಗೂ ಅವಯವಗಳೆಲ್ಲ ಹೊಸದಾಗಿ ತಯಾರಾದ ಹಾಗೆ ಅನುಭವವಾಗುವುದು ಉತ್ತಮ ನಿದ್ರೆಯೇ ಮನುಷ್ಯನ ಆರೋಗ್ಯದ ಮುಖ್ಯ ಗುಟ್ಟೆಂದು ತನ್ನ 'ತಿಳಿವಳಿಕೆಯಾಗಿದೆ' ಎಂಬುದಾಗಿ ಅವನು ತನ್ನ ಅನುಭವವನ್ನು ಹೇಳುವನು.

ನಿಜವಾಗಿಯೂ ಮನುಷ್ಯನು ಉತ್ತಮ ಆರೋಗ್ಯಶಾಲಿಯೂ ಹೆಚ್ಚಿನ ಆಯುಷ್ಯಶಾಲಿಯಾಗಿಯೂ ಆಗಿರಬೇಕಾದರೆ ಅವನಿಗೆ ಒಳ್ಳೆಯ ನಿದ್ರೆಯು ಅತಿ ಅವಶ್ಯಕವಾಗಿದೆ. ಇಂದು ನಿಜವಾಗಿಯೂ ಅನೇಕ ಜನರು ಒಳ್ಳೆಯ ನಿದ್ರೆಯ ಅಭಾವದಿಂದ ರೋಗಗ್ರಸ್ತರಾಗಿ, ಚೈತನ್ಯಹೀನ ಆಲಸಿಗಳಾಗಿ, ಕೋಪಿಷ್ಠರಾಗಿ, ಅಲ್ಪಾಯುಷ್ಯದಲ್ಲಿಯೆ ತಮ್ಮ ಜೀವನ ಲೀಲೆಯನ್ನು ಮುಗಿಸಿಬಿಡುವರು. ನಿದ್ರೆಯ ಸಂಗಡ ಈ ಅತ್ಯಾಚಾರವೇಕೆ? (ಗಾಯತ್ರಿತನಯ)

ಜನಮತ

ಮೈಸೂರ ಸರಕಾರ ಮತ್ತು ಪ್ರಚಾರ ಪುಸ್ತಕ ಮಾಲೆ

೧೯೩೩ ರಲ್ಲಿ "ಪ್ರಚಾರ ಪುಸ್ತಕ ಮಾಲೆ" ಯನ್ನು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಲು ಪ್ರಾರಂಭಿಸಿತು ೧೯೪೬ ರ ವರೆಗೆ ಸುಮಾರು ೫೬ ಚಿಕ್ಕ ಚಿಕ್ಕ ಹೊತ್ತಿಗೆಗಳನ್ನು ಹೊರಡಿಸಿತು. ಪ್ರಕಟನೆಯನ್ನು ೧೯೪೬ ರಿಂದ ತಡೆಹಿಡಿದಿರುವರು. ಇದರಿಂದ "ಪ್ರಚಾರ ಪುಸ್ತಕ ಮಾಲೆ"ಯ ಉದ್ದೇಶಕ್ಕೆ ಕುಂದು ಬಂದಿದೆಯೆಂದು ಹೇಳಬಹುದು. ಜನರ ಮೆಚ್ಚಿಗೆ ಪಡೆದ ಕೆಲವು ಪುಸ್ತಕಗಳು ಮೂರನೇ ಮುದ್ರಣವನ್ನು ಕಂಡಿವೆ. ಇನ್ನೂ ಬೇಡಿಕೆ ಹೆಚ್ಚಾಗಿದೆ.

ಪ್ರಚಾರ ಪುಸ್ತಕಮಾಲೆಯನ್ನು ತಡೆಹಿಡಿದುರುವದರಿಂದ, ವಿವಿಧವಾಗಿ ಹರಿದು ಬರುತ್ತಿರುವ ಕನ್ನಡ ಸಾಹಿತ್ಯಕ್ಕೆ ಅಪಾರ ಹಾನಿ ಆಗುತ್ತಲಿದೆ ಎಂದು ನನ್ನ ನಂಬಿಗೆ.

ಮೈಸೂರಲ್ಲಿ ಜನತಾ ಸರಕಾರವು ಬಂದು ಒಂದು ವರ್ಷ ಕಳೆಯಿತು. ಜನತೆಗೆ ಉಪಯೋಗವಿದ್ದ ಮತ್ತು ಹಿರಿ ಗುರಿಯನ್ನು ಇಟ್ಟುಕೊಂಡು ಪ್ರಾರಂಭಿಸಿದ 'ಪ್ರಚಾರ ಪುಸ್ತಕಮಾಲೆ'ಯನ್ನು ತಡೆಹಿಡಿದಿರುವ ಕಾರಣವನ್ನು ವಿಚಾರಿಸಲು ಕನ್ನಡಿಗರ ಪರವಾಗಿ ಜನತಾ ಸರಕಾರಕ್ಕೆ ಬಿನ್ನವಿಸಿಕೊಳ್ಳುವೆ. ಎಂದಿನಂತೆ ಪ್ರಕಟನೆಯನ್ನು ಪ್ರಾರಂಭಿಸಲು ಮೈಸೂರ ಜನತಾ ಸರಕಾರಕ್ಕೆ ಕನ್ನಡಿಗರ ಪರವಾಗಿ ವಿನಂತಿಸುತ್ತೇನೆ.

— "ಓರ್ವ ಕನ್ನಡಿಗ"

ವ್ಯಾಪಾರ ಪ್ರಪಂಚ

ತಾ. ೨

ಮುಂಬಯಿ ಶೇರ ಪೇಟೆ

ಕಳೆದ ವಾರದ ಬಿರುಗಾಳಿಯ ಕಾರಣ ಸ್ಥಗಿತವಾಗಿದ್ದ ವ್ಯಾಪಾರ ಈ ವಾರದಲ್ಲಿ ಸ್ವಲ್ಪ ಸುಧಾರಿಸಿ ಬೆಲೆಗಳು ಏರುತ್ತ ಹೋದವು. ಉದಾಹರಣೆಗಾಗಿ ಟಾಟಾ ಸ್ಟೀಲ ಡೆಫರ್ಡ್ ೩೦ ರೂಪಾಯಿಗಿಂತಲೂ ಹೆಚ್ಚು ಮತ್ತು ಮುಂಬಯಿ ಡಾಯಿಂಗ್ ೧೦ ರೂಪಾಯಿಗಿಂತಲೂ ಹೆಚ್ಚಿಗೆ ಏರಿದವು ಇಂದಿನ ಬೆಲೆಗಳು ಈ ಬಗೆಯಾಗಿ ಕೊನೆಗೊಂಡವು :

ಕೋಹಿನುರು	೨೮೪-೦-೦
ಮುಂಬಯಿ ಡಾಯಿಂಗ್	೧೦೨೪-೧೨-೦
ಗೋಕಾಕ	೨೬೯-೦-೦
ಸೆಂಚುರಿ	೧೫೬-೪-೦
ಸಿಂಪ್ಲೆಕ್ಸ	೧೮೫-೦-೦
ಬೇಲಾಪುರ ಸಕ್ಕರೆ	೨೪೦-೦-೦
ಸಿಂಧ್ಯ ಸ್ಟೀಮ	೨೦-೯-೦
ಅಸೊ. ಸಿಮೆಂಟ್ಸ	೧೫೪-೮-೦
ಟಾಟಾ ಸ್ಟೀಲ ಡೆಫರ್ಡ	೧೫೬೬-೮-೦
ಸೆಂಟ್ರಲ ಬ್ಯಾಂಕ್	೮೬-೧೨-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೧೬೪೦-೦-೦
ಮುಂಬಯಿ ಬರ್ಮಾ	೩೪೩-೧೨-೦
ಸೆಂಟ್ರಲ ಇಂಡಿಯಾ	೨೫೬-೦-೦
ಬ್ಯಾಂಕ ಅಫ್ ಇಂಡಿಯಾ	೧೮೬.೮.೦

ಚಿನ್ನ--ಬೆಳ್ಳಿ

ಚಿನವಾರ ಕಟ್ಟೆಯಲ್ಲಿ ಬೆಳ್ಳಿಯ ಬೆಲೆಯಲ್ಲಿ ಅಷ್ಟೇನೂ ಬದಲಾವಣೆಯಾಗದಿದ್ದರೂ ಚಿನ್ನ ದ್ದು ಮಾತ್ರ ಒಂದು ರೂಪಾಯಿಯಷ್ಟು ಏರಿತು. ಇಂದಿನ ಬೆಲೆಗಳು ಹೀಗೆ:

ತಯಾರಿ ಚಿನ್ನ	೧೧೩-೧೨-೦
ವಾಯದಾ "	೧೧೩-೨-೦
ಸಾವರಿನ	೬೫-೪-೦
ತಯಾರಿ ಬೆಳ್ಳಿ	೧೬೮-೧೧-೦
ವಾಯದಾ ,,	೧೬೮-೧೧-೦
ಚುಂಬರ	೧೬೬-೧೫-೦

ಅರಳೆ

ಅರಳೆ ಪೇಟೆಯಲ್ಲಿ ಯಾವ ಸ್ಥಿತ್ಯಂತರವೂ ಇಲ್ಲ. ಇಂದಿನ ಕೊನೆಯ ದರಗಳು ಹೀಗೆ:

ಫೆಬ್ರುವರಿ	೫೯೯-೧೨-೦
ಮೇ	೫೯೩-೧೨-೦
ಜುಲೈ	೫೯೮-೮-೦

ಎಣ್ಣೆಕಾಳು

ಶೇಂಗಾ	೧೬೬-೪-೦
ಅಗಸಿ	೨೬-೯-೦
,, ಹೊಸ	೨೬-೯-೦
ಅಗಸಿ ಎಣ್ಣೆ	೧೬-೧೨-೦

ಶಿವಮೊಗ್ಗೆ ಅಡಿಕೆ

ತಾ. ೨೫

ದೇಶಾವರ ನಂ. ೧ ಮಣ ೧ ಕ್ಕೆ	೩೦-೩೪
,, ,, ೨	೨೬-೩೦
,, ,, ೩	೨೫-೨೬
ರಾಜಾ ಅಲವು	೨೬-೩೦
ಕೊರಸಾಲು	೨೩-೨೮
ಬೆಟ್ಟೆವಂತಿ	೧೮-೧೯
ಬೆಟ್ಟೆ	೧೬-೧೯

ಅಡಿಕೆ ಬೇಡಿಕೆ ಹೆಚ್ಚಿದೆ.

ಹುಬ್ಬಳ್ಳಿ

ತಾ. ೨

ಜ. ಹತ್ತಿ ನಗಕ್ಕೆ	೪೩೫-೪೫೧
,, ಅರಳೆ ,,	೨೬೫ ೨೮೫
ಹತ್ತಿಕಾಳು ರೂ. ಗೆ	೬॥ ಪೌಂಡ
ಜೋಳ (ಚೀಲಕ್ಕೆ)	೩೮-೪೦
ಕೆಂಪು ಗೋದಿ ಚೀಲಕ್ಕೆ	೧೦೦-೧೨೨
ಬಿಳಿ ಗೋದಿ ಚೀಲ	೮೮-೧೦೦
ಕುಸುಬಿ ,,	೩೧-೩೩
ಅಗಸಿ	೩೯-೪೧
ಹೆಸರು	೪೯ ೫೧
ಕರಿ ಎಳ್ಳು	೫೨-೫೪
ಬಿಳಿ ಎಳ್ಳು	೬೦-೬೪
ಕಡಲೆ	೬೪-೬೮
ತೊಗರಿ	೩೬-೬೮
ಪುರಳಿ	೪೨-೪೨॥
ಶೇಂಗಾ (ಹೇರು)	೪೬-೪೭

ಮಹಾತ್ಮಾ ಗಾಂಧಿ ಕೊಲೆಯ ಖಟ್ಲೆ

ಸರಕಾರೀ ವಕೀಲರ ಪಕ್ಷಪ್ರತಿಪಾದನೆ

ಮಹಾತ್ಮಾ ಗಾಂಧಿಯವರ ಕೊಲೆಯ ಖಟ್ಲೆಯಲ್ಲಿ ಸರಕಾರೀ ವಕೀಲರಾದ ಶ್ರೀ ಸಿ. ಕೆ. ದಫ್ತರಿಯವರು ಒಂದನೆಯ ತಾರೀಕಿನಿಂದ ತಮ್ಮ ಪಕ್ಷಪ್ರತಿಪಾದನೆಯನ್ನು ಪ್ರಾರಂಭಿಸಿರುವರು.

ಮುಂಬಯಿ ಸಾರ್ವಜನಿಕ ಸುರಕ್ಷಿತತೆಯ ಶಾಸನೆಯು ದಿಲ್ಲಿಗೆ ಅನ್ವಯಿಸಿದೆ; ವಿಶೇಷ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರವು ಪ್ರಾಂತೀಯ ಸರಕಾರಕ್ಕಿರುವದರಿಂದ ಈ ಖಟ್ಲೆಯನ್ನು ವಿಚಾರಿಸಲು ಈ ನ್ಯಾಯಾಲಯಕ್ಕೆ ಅಧಿಕಾರವಿದೆಯೆಂದು ಪ್ರಾರಂಭದಲ್ಲಿ ಹೇಳಿ ಆರೋಪಿಗಳಿಗೆ ಕ್ಷಮಾದಾನ ಮಾಡಲು ಬರುವದೆಂದೂ ಹೇಳಿದರು — ಬಡಗೆ ಮೊದಲ್ಗೊಂಡು ಎಲ್ಲ ಆರೋಪಿಗಳು ಗಾಂಧೀಜಿಯ ಕೊಲೆ ಮಾಡಲು ಒಳಸಂಚು ನಡೆಸಿದ್ದರು ಮತ್ತು ಅದನ್ನು ಸಾಧಿಸಲು ಲೈಸೆನ್ಸ ಇಲ್ಲದೆ ಶಸ್ತ್ರಾಸ್ತ್ರವನ್ನು, ಮದ್ದು ಗುಂಡುಗಳನ್ನು ಸಾಗಿಸಿದ್ದರು. ಗಾಂಧಿಯವರ ಕೊಲೆಯಾದುದು ಸುಳ್ಳೆಂದು ಯಾವ ಆರೋಪಿಯೂ ಹೇಳಿಲ್ಲ. ಆದರೆ ನಥುರಾಮ ಗೋಡಸೆ ಮತ್ತು ಇತರರಲ್ಲಿ ಗಾಂಧೀಜಿಯ ಕೊಲೆಗಾಗಿ ಒಳಸಂಚು ನಡೆದಿತ್ತೆಂಬುದನ್ನು ಅವರು ಒಪ್ಪುತ್ತಿಲ್ಲ. ಆರೋಪಿಗಳ ಮೇಲೆ ಎರಡು ಬಗೆಯ ಆರೋಪಗಳಿವೆ. ಒಳಸಂಚು ಮತ್ತು ಕೊಲೆಗೆ ಪ್ರೋತ್ಸಾಹ; ಗಾಂಧಿಯವರನ್ನು ಕೊಂದ ಆರೋಪ ನಥುರಾಮನ ಮೇಲೆ ಇದೆ. ಈ ಕೆಲಸವು ನಥುರಾಮನ ಸ್ವಂತ ಕೆಲಸವಲ್ಲ ಅವರು ಉಳಿದ ಆರೋಪಿಗಳೊಡನೆ ಒಳಸಂಚು ನಡೆಸಿ ಈ ಅಪರಾಧಗೈದನು ಆದುದರಿಂದ ಆರೋಪಿಗಳನ್ನು ಪಿನಲ್ ಕೋಡಿನ ೧೨೦ ಬ (ಒಳಸಂಚು) ಕಲಮಿನನ್ವಯವಾಗಲಿ ಇಲ್ಲವೆ ೧೦೯ (೨) (ಕೊಲೆಗೆ ಪ್ರೋತ್ಸಾಹ) ಕಲಮಿನನ್ವಯವಾಗಲಿ ಶಿಕ್ಷಿಸಬಹುದು. ಶಸ್ತ್ರಾಸ್ತ್ರಗಳ ಕಾಯದೆಯನ್ವಯ ಆರೋಪಿಗಳ ವಿಚಾರಣೆ ನಡೆಸಲು ಸಮ್ಮತಿ ಪಡೆಯಲಾಗಿದೆ.

ಒಳಸಂಚಿನ ಕಥೆ

ಮಾಫಿ ಸಾಕ್ಷಿದಾರನಾದ ದಿಗಂಬರ ಬಡಗೆಯು ೧೯೪೭ ರಲ್ಲಿ ತೀರ್ಥಯಾತ್ರೆಗೆ ಹೊರಟಾಗ ನಾರಾಯಣ ಆಪಟೆ ಅವನನ್ನು ಭೆಟ್ಟಿಯಾಗಿ ಶಸ್ತ್ರಾಸ್ತ್ರ ಬೇಕೆಂದು ಹೇಳಿದ. ಅವನು ಮರಳಿ ಬಂದ ಬಳಿಕ ಆಪಟೇನನ್ನು ಭೆಟ್ಟಿಯಾದಾಗ ಹಿಂದುಗಡೆ 'ವಸ್ತು'ಗಳನ್ನು ತೆಗೆದುಕೊಂಡು ಹೋಗುವದಾಗಿ ಹೇಳಿದನು ೪೭ ಜೂನದಿಂದ ಬಡಗೆ ಕಳ್ಳತನದಿಂದ ಶಸ್ತ್ರಾಸ್ತ್ರ ಮಾರಾಟ ಮಾಡುತ್ತಿದ್ದನೆಂಬುದು ಸಿದ್ಧವಾಗಿದೆ. ಜಾನೇವಾರಿ ೯ ರಾತ್ರಿ ಆಪಟೆಯು ಕರಕರೆ ಮದನಲಾಲ, ಹಿ. ಪ್ರಕಾಶ ಮತ್ತು ಇತರರನ್ನು ಕರಕೊಂಡು ಬಡಗೇನಲ್ಲಿಗೆ ಹೋದರು. ಆಗ ಶಂಕರನು ಪಿಸ್ತೂಲು ಕಾಡತೂಸು ಮೊದಲಾದವುಗಳನ್ನು ತೋರಿಸಿದನು. ಮುಂದೆ ಎಲ್ಲ ಸಾಮಾನುಗಳನ್ನು ಪೂರೈಸುವುದಾಗಿ ಬಡಗೆ ಹೇಳಿದ್ದರಿಂದ ತಮ್ಮ ಒಂದು ಕೆಲಸವಾಯಿತೆಂದು ಆಪಟೆ ನಥುರಾಮನ ಮುಂದೆ ಉದ್ಗಾರ ತೆಗೆದನು. ಜಾನೇವರಿ ೧೪ಕ್ಕೆ ಎಲ್ಲ ವಸ್ತುಗಳು ಮುಂಬಯಿಯ ಹಿಂದುಮಹಾಸಭೆಯ ಕಚೇರಿಗೆ ಮುಟ್ಟಬೇಕೆಂದು ಹೇಳಿದರು; ಜನೆವರಿ ೧೦ ಕ್ಕೆ ಮದನಲಾಲನು ಕರಕರೆಯೊಂದಿಗೆ ಡಾ. ಜೈನರನ್ನು ಭೆಟ್ಟಿಯಾದನು. ಮುಂದೆ ಒಬ್ಬನೆ ಭೆಟ್ಟಿಯಾದನು. ಅಂದಿನ ಸಂಭಾಷಣೆಯಿಂದ ಮಹಾತ್ಮಾ ಗಾಂಧಿ ಕೊಲೆಯ ಬಗ್ಗೆ ಒಳಸಂಚು ನಡೆದಿತ್ತೆಂಬುದು ಸ್ಪಷ್ಟವಾಯಿತು—ಆದರೂ ಮದನಲಾಲನ ಮಾತಿಗೆ ಮಹತ್ವ ಕೊಡಲಿಲ್ಲ. ನಥುರಾಮನ ಹೆಸರಿನಲ್ಲಿ ಇದ್ದ ಎರಡು ಪಾಲಿಸಿಗಳನ್ನು ಆಪಟೆನ ಹೆಂಡತಿ ಮತ್ತು ಗೋಪಾಳ ಗೋಡಸೆಯ ಹೆಂಡತಿಯ ಹೆಸರಿನಲ್ಲಿ ಮಾಡಲಾಯಿತು. ಏಕೆ ಹೀಗೆ ಮಾಡಲಾಯಿತೆಂಬುದಕ್ಕೆ ಕಾರಣ ಸ್ಪಷ್ಟವಾಗಿ ಹೇಳಿಲ್ಲ. ಅಪರಾಧ ಮಾಡಲು ಹೊರಟಿರುವರೆಂಬುದು ಇದರಿಂದ ಮನದಟ್ಟಾಯಿತು. ಮುಂಬಯಿಯಲ್ಲಿ ಬಡಗೆ, ಶಂಕರ, ನಥುರಾಮ ಆಪಟೆ ಸಾವರಕರರ ಕಡೆಗೆ ಹೋಗಿದ್ದರು. ಅಲ್ಲಿಂದ ದೀಕ್ಷಿತ ಮಹಾರಾಜರ ಕಡೆಗೆ ಹೋಗಿ ಆ 'ವಸ್ತು'ಗಳನ್ನು ಅಲ್ಲಿ ಇಟ್ಟರು. ದೀಕ್ಷಿತ ಮಹಾರಾಜರಲ್ಲಿನ ಚೀಲ ತೆಗೆದುಕೊಂಡು ದಿಲ್ಲಿಗೆ ಹೋಗಲು ಕರಕರೆ ಮದನಲಾಲರಿಗೆ ಹೇಳಲಾಯಿತು. ಆ ಮನೆಯಿಂದ ಹೊರಬಿದ್ದ ಕೂಡಲೆ ನೀನು ಬರುವೆಯಾ ಎಂದು ಆಪಟೆ ಬಡಗೆಯನ್ನು ಕೇಳಿದನು. ಗಾಂಧಿ, ನೆಹರು, ಸುಹರಾವರ್ದಿಯವರನ್ನು ಮುಗಿಸಿ ಬಿಡಲು ತಾತ್ಯಾರಾವ ಸಾವರಕರರು ಹೇಳಿ ಆ ಕೆಲಸವನ್ನು ತಮಗೆ ಒಪ್ಪಿಸಿರುವರಾಗಿ ಅವನು ಹೇಳಿದನು. ೧೫ ಕ್ಕೆ ಕರಕರೆ ಮದನಲಾಲರು ದಿಲ್ಲಿಗೆ ಹೊರಟರು.

೧೬ ರಾತ್ರಿ ಗೋಡಸೆ, ಆಪಟೆ, ಸಾವರಕರರ ಕೊನೆಯ ದರ್ಶನಕ್ಕೆ ಹೋದರು. ಗಾಂಧೀಜಿಯ ಕೆಲಸ ಮುಗಿಸಬೇಕೆಂದು ಸಾವರಕರರು ಹೇಳಿದರೆಂದು ಆಪಟೆಯು ಟ್ಯಾಕ್ಸಿಯಲ್ಲಿ ಹೇಳುತ್ತಿದ್ದನು. ೧೭ ರಂದು ಗೋಡಸೆ ಆಪಟೆ ದಿಲ್ಲಿಗೆ ಹೋದರೆಂದು ಸಾಕ್ಷಿಯಲ್ಲಿದೆ. ೧೭ ಕ್ಕೆ ಕರಕರೆ ಮದನಲಾಲರು ದಿಲ್ಲಿಯಲ್ಲಿದ್ದರು. ೧೯ ಕ್ಕೆ ಬಡಗೆ ಶಂಕರ ದಿಲ್ಲಿಗೆ ಬಂದು ಬಿರ್ಲಾ ಭವನ ಪ್ರಾರ್ಥನಾ ಸ್ಥಾನ ನೋಡಿ ಬಂದ ಬಳಿಕ ಶಸ್ತ್ರಾಸ್ತ್ರ ಹಂಚಲಾಯಿತು. ಮದನಲಾಲನು ಸ್ಫೋಟಕದ್ರವ್ಯ ಹಾರಿಸಿದ ಕೂಡಲೆ ಇತರರು ಗಾಂಧೀಜಿಗೆ ಗುಂಡಿಕ್ಕಿ ಕೊಲ್ಲಬೇಕೆಂದು ಗೊತ್ತಾಗಿದ್ದಿತು. ಆದರೆ ಮದನಲಾಲನು ಸ್ಫೋಟದ್ರವ್ಯ ಹಾರಿಸಿದ ಕೂಡಲೆ ಯಾವ ಘಟನೆಯೂ ಸಂಭವಿಸದ್ದರಿಂದ ಮದನಲಾಲನು ಓಡಿ ಹೋಗಲು ಪ್ರಯತ್ನಿಸಿದ. ಆಗ ಅವನನ್ನು ಸೆರೆ ಹಿಡಿಯಲಾಯಿತು. ಅವನ ಕೋಟಿನಲ್ಲಿ ಸ್ಫೋಟಕ ದ್ರವ್ಯ ದೊರೆಯಿತು. ಮುಂದೆ ಜಾನೇವರಿ ೨೮ಕ್ಕೆ ಮತ್ತೆ ಉಳಿದವರೆಲ್ಲ ದಿಲ್ಲಿಗೆ ಬಂದರು. ೩೦ನೆ ತಾರೀಕು ಸಾಯಂಕಾಲ ೫ ಗಂಟೆಗೆ ನಥುರಾಮನು ಗಾಂಧೀಜಿಗೆ ಪಿಸ್ತೂಲಿನಿಂದ ಮೂರು ಸಲ ಹೊಡೆದನು. ಗಾಂಧೀಜಿ ಸತ್ತರು. ಅಲ್ಲಿಯೇ ನಥುರಾಮನ ಬಂಧನವಾಯಿತು ಗಾಂಧೀಜಿಯ ದೇಹದಲ್ಲಿ ಮೂರು ಕಾಡತೂಸುಗಳು ದೊರೆತವು. ಶ್ರೀ ಸಾವರಕರ ಮತ್ತು ಪರಚುರೆಯವರ ನಿಲುವು ಬೇರೆಯಿದ್ದು ಉಳಿದ ಆರೋಪಿಗಳ ಹೇಳಿಕೆಯಿಂದ ಒಬ್ಬರನ್ನೊಬ್ಬರು ಆಗಾಗ ಕೂಡುತ್ತಿದ್ದರೆಂದು ಸಿದ್ಧವಾಗಿದೆ. ಜಾನೇವರಿ ೧೯ ಮತ್ತು ೨೦ ಕ್ಕೆ ಏಳು ಆರೋಪಿಗಳು ದಿಲ್ಲಿಯಲ್ಲಿ ಇದ್ದರೆಂಬ ಸಾಕ್ಷಿಯನ್ನು ನ್ಯಾಯಾಲಯವು ಒಪ್ಪಿದರೆ ಗಾಂಧಿಯನ್ನು ಕೊಲ್ಲಲು ಒಳಸಂಚು ಇತ್ತೆಂಬ ಬಗ್ಗೆ ಯಾವ ಸಂಶಯವೂ ಬರಲಾರದು. ಪ್ರತ್ಯಕ್ಷ ಪುರಾವೆಗಳಿಂದ ಒಳಸಂಚನ್ನು ಸಿದ್ಧಮಾಡುವದು ಸಾಧ್ಯವಿಲ್ಲ. ಪರಿಸ್ಥಿತಿಗನುರೂಪವಾದ ಪುರಾವೆಗಳನ್ನೆ ಅದಕ್ಕೆ ಆಧಾರವೆಂದು ನಾವು ಗ್ರಹಿಸಬೇಕಾಗಿದೆ. ಗೋಡಸೆ ಆಪಟೆಯವರು ಸಾವರಕರ ಸದನದಲ್ಲಿ ಸಾಗಿದ್ದರೆಂದು ಶಾಂತಾ ಮೋಡಕ ಹೇಳಿರುವಳು. ಬಿರ್ಲಾ ಭವನಕ್ಕೆ ೨೦ ರಂದು ಆರೋಪಿಗಳು ಹೋಗುವಾಗ ಎಲ್ಲರೂ ಹೆಸರನ್ನು ಬದಲಿಸಿದ್ದರೆಂದು ಬಡಗೆ ಹೇಳಿರುವನು. ಆಪಟೆಯು ಈ ಒಳಸಂಚಿನ ಸೂತ್ರಧಾರನೆಂದು ಗೊತ್ತಾಗುವದು ಬಡಗೆ ಹಾಗು ಇತರ ಸಾಕ್ಷಿಗಳು ಪೋಲೀಸರ ಚಿತ್ರಹಿಂಸೆಯ ಪರಿಣಾಮವಾಗಿ ಹೇಳಿಕೆ ಕೊಟ್ಟರಬೇಕೆಂದು ಆರೋಪಿಸಲಾಗಿದೆ. ಈ ಅಂಶವನ್ನು ಆರೋಪಿಯ ವಕೀಲರು ಬಡಗೆಯ ಮರುಸವಾಲಿನಲ್ಲಿ ಎತ್ತಿರುವದಿಲ್ಲ. ಬಡಗೆಯು ಈ ಒಳಸಂಚಿನಲ್ಲಿ ಇದ್ದಿಲ್ಲವಾದರೆ ೨೩ ಪುಟಗಳಷ್ಟು ಹೇಳಿಕೆಯನ್ನು ಅವನು ಕೊಡುತ್ತಿರಲಿಲ್ಲ. ಘಟನೆಗಳ ನೆನಪು ಅವನಿಗಿರುತ್ತಿರಲಿಲ್ಲ. ಅವನಿಗೆ ಎಲ್ಲ ಸಂಗತಿಗಳು ಗೊತ್ತಿದ್ದರಿಂದ ಎಲ್ಲಿಯೂ ಸಿಲ್ಲದೆ ಅವನು ತನ್ನ ಹೇಳಿಕೆಯನ್ನು ಕೊಟ್ಟನು. ಮಾಫೀ ಸಾಕ್ಷೀದಾರನ ಹೇಳಿಕೆಗೆ ಪುಷ್ಟಿ ದೊರೆಯದಿದ್ದರೂ ಅದು ನಿಜವಿರುವದೆಂದು ಒಪ್ಪಿಕೊಂಡ ಉದಾಹರಣೆಗಳು ಇವೆ. ಆದರೆ ಈ ಸದ್ಯದ ಪ್ರಕರಣದಲ್ಲಿ ಬಡಗೆಯ ಹೇಳಿಕೆಗೆ ಪುಷ್ಟಿ ದೊರೆತಿದೆ.

ತಾ. ೧ ಮತ್ತು ೨ ಕ್ಕೆ ನಡೆದ ದಫ್ತರಿಯವರ ಪಕ್ಷಪ್ರತಿಪಾದನೆಯ ಸಾರವಿಂತಿದ್ದು ಮುಂದಿನ ಅವರ ಪ್ರತಿಪಾದನೆಯನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು.

ಸಾಂಗಲಿ

ತಾ. ೩೦

ಬೆಲ್ಲ ಹೇರು	೪೫-೬೩
ಶೇಂಗಾ ಖಂಡಿ	೧೭೭-೧೭೯
ಮೆಣಸಿನಕಾಯಿ ಹೇರು	೧೦೦-೧೫೦
ಅರಿಸಿನ ಹೇ ೧	೧೩೬

ಭದ್ರತಾಮಂಡಲದಲ್ಲಿ ಹೈದರಾಬಾದದ ಪ್ರಶ್ನೆ

ಯುನೈಟೆಡ್ ನೇಶನ್ಸದ [illegible] ಭದ್ರತಾಮಂಡಲದಲ್ಲಿ ತಾ. ೨ ರಂದು [illegible] ಹೈದರಾಬಾದದ ಪ್ರಶ್ನೆಯನ್ನು [illegible] ಪ್ರತಿನಿಧಿ [illegible] ಅವರು ಪ್ರಯತ್ನಿಸಿ [illegible]. ಕಳೆದ ಸಭೆಯಲ್ಲಿ ಹೈದರಾಬಾದದ ಪ್ರಶ್ನೆಯನ್ನು [illegible]. [illegible] ಪ್ರಕಾರ ಈ ಸಭೆಯಲ್ಲಿ ಅದನ್ನು [illegible] ತೆಗೆದುಕೊಳ್ಳಬೇಕೆಂದು [illegible]. [illegible] ಅವರು ಅದರಿಗೆ [illegible] ಯಲ್ಲಿ ಭಾಗವಹಿಸಲು [illegible] ಪ್ರತಿನಿಧಿಗಳಿಲ್ಲದ್ದರಿಂದ ಹಾಗೆ ಮಾಡಲು ಬರುವದಿಲ್ಲೆಂದರು.

[illegible] ಅವರು ಅದಕ್ಕೆ ಮರುತ್ತರ ಕೊಡುತ್ತ, ಕಳೆದ ಸಭೆಯಲ್ಲಿ ಸಹ ಅಧಿಕೃತ ಹಿಂದೀ ಪ್ರತಿನಿಧಿಗಳಿಲ್ಲದಿದ್ದರೂ [illegible] ಲಿಲ್ಲವೇ ಎಂದು ಸವಾಲು ಹಾಕಿದರು. ಅಮೇರಿಕೆಯ ಪ್ರತಿನಿಧಿ [illegible] ಈಗಲೂ ಅಧಿಕೃತ ಹಿಂದೀ ಪ್ರತಿನಿಧಿಗಳಿಲ್ಲವೆಂದು ತಿಳಿಯಬೇಕೊ ಎಂದು ಕೇಳಿದ್ದಕ್ಕೆ ಹಾಗೇಯೆಂದು ತಿಳಿಯಬೇಕೆಂದು [illegible] ಉತ್ತರವಿತ್ತರು. ಆಗ [illegible] ಹೈದರಾಬಾದ ಪ್ರಶ್ನೆಯನ್ನು ಇಂದು ಚರ್ಚಿಸುವ ಕಾರಣವಿಲ್ಲೆಂದು [illegible] ಗಂಡಿರುವದಾಗಿ ಹೇಳಿದರು. ಅಧ್ಯಕ್ಷರು ಈ ವಿಷಯವನ್ನು ಅಲ್ಲಿಗೆ ಮುಕ್ತಾಯಗೊಳಿಸಿದರು.

ಗೋಮಾಂತಕರ ಗೋಳು

(ಓರ್ವ ಸುದ್ದಿಗಾರರಿಂದ)

ಗೋವಾ — ಗೋವೆಯಲ್ಲಿ ದಿನೇ ದಿನೇ ಪೋರ್ತುಗೀಜ ಸರಕಾರದ ದಬ್ಬಾಳಿಕೆಯು ಹೆಚ್ಚಾಗಹತ್ತಿದೆ. ವೃತ್ತಪತ್ರಿಕೆಗಳ ಗೋಳನ್ನಂತೂ ಕೇಳತೀರದು. 'ಸರಕಾರ' ಎಂಬ ಶಬ್ದವನ್ನು ಕಂಡ ಕೂಡಲೆ, ಆ ವೃತ್ತಪತ್ರವನ್ನು ಸುದ್ದಿ ನಿಯಂತ್ರಣ ಖಾತೆಯು [illegible] ಎಳೆಯಲಾಗುತ್ತದೆ. ಅದಕ್ಕೆ [illegible] ದುರ್ಲಭ. ಉದಾಹರಣಾರ್ಥ ಅಲ್ಲಿಯ ಪೋರ್ತುಗೀಜ ದಿನಪತ್ರಿಕೆ 'ಹೆರೊಲ್ಡ್' ಸಂಪಾದಕರ ಮೇಲೆ, ಅವರು ಒಂದು ಲೇಖದ ಬಗ್ಗೆ ಆರೋಪ ಹೊರಿಸಿ, ಅವರಿಗೆ ೬೦೦ ರೂ ದಂಡ ಮಾಡಿ ಆ ಪತ್ರಿಕೆಯನ್ನು ಮೂರು ತಿಂಗಳ ವರೆಗೆ ರದ್ದುಗೊಳಿಸಿದರು. ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಸಹ ಪತ್ರಿಕೆಗಳು ಚರ್ಚಿಸ ಕೂಡದೆಂದು ಸರಕಾರದ ಆಜ್ಞೆ ಹೊರಟಿದೆ. ಸಿನೆಮಾ ಕಂಪನಿಯ ಜಾಹಿರಾತನ್ನು ಸಹ ಸರಕಾರದ ಒಪ್ಪಿಗೆ ಇಲ್ಲದೆ ಹಾಕಲು ಬರುವಂತಿಲ್ಲ. ಇದಲ್ಲದೆ ರೇಡಿಯೋದಲ್ಲಿ ಬರುವ ಸುದ್ದಿಗಳನ್ನು ಸಹ ಸರಕಾರವು ಜನರಿಗೆ ಕೇಳಲಿಕ್ಕೆ ಬಿಡುವದಿಲ್ಲ ಇದರಿಂದ ಗೋವೆಯ ಜನರ ಉಸಿರನ್ನೇ ಕಟ್ಟಿದಂತಾಗಿದೆ.

ಹೈದರಾಬಾದ ಸೈನ್ಯವು ಪೋಲೀಸ ಕ್ರಮದ ಸಮಯದಲ್ಲಿ ಒಪ್ಪಿಸಿದ ಮದ್ದು ಗುಂಡುಗಳ ಪೆಟ್ಟಿಗೆಗಳ ಮೇಲೆ ಪಾಕಿಸ್ತಾನದ ಗುರುತು ಇವೆ ಅವು ಇದೇ ವರುಷ ಏಪ್ರಿಲ-ಆಗಸ್ಟ ನಡುವೆ ಪಾಕಿಸ್ತಾನದ ಡ್ರಿಗ್‌ರೋಡ ಹಾಗೂ ಮಾಲೀರ (ಇವೆರಡೂ ಕರಾಚಿ ಸಮೀಪದಲ್ಲಿವೆ) ಡಿಪೋಗಳಿಂದ ಕಳಿಸಲ್ಪಟ್ಟವೆಯೆಂದು ಸುರಕ್ಷಣ ಖಾತೆಯವರು ಪ್ರಕಟಿಸುತ್ತಾರೆ.

ಕರ್ಮವೀರ

ಶ್ರೀಮುಖ್ಯಾಲಯ ವಿಶ್ವರು ವರ್ಷ ೮೭೩
ಮಾರ್ಗಶೀರ್ಷ ಶು|| ೬ ಸೋಮವಾರ

ರೇಲ್ವೆ ಕೆಲಸಗಾರರ ಕರ್ತವ್ಯ

ತಮ್ಮ ಬೇಡಿಕೆಗಳನ್ನು ಸರಕಾರದವರು ಪೂರಯಿಸುವದಿಲ್ಲೆಂದು ರೇಲ್ವೆ ಕೆಲಸಗಾರರು ಸಂಪಿನ ವಿಚಾರವನ್ನು ನಡೆಸಿರುವರು. ಹಿಂದುಸ್ತಾನದ ಸದ್ಯದ ಪರಿಸ್ಥಿತಿಯಲ್ಲಿ ರೇಲ್ವೆ ಕೆಲಸಗಾರರು ಸಂಪು ಹೂಡಬಯಸು ವದು ಎಷ್ಟು ಅಸಮಂಜಸ ಮತ್ತು ಆತ್ಮ ಘಾತಕವಾದುದೆಂಬುದನ್ನು ಬೇರೆ ಹೇಳ ಬೇಕಿಲ್ಲ. ಹಿಂದುಸ್ತಾನವು ಸ್ವಾತಂತ್ರ್ಯ ವನ್ನು ಸಂಪಾದಿಸಿ ಕೇವಲ ಹದಿನೈದು ತಿಂಗಳುಗಳಾಗಿವೆ. ಈ ಅವಧಿಯಲ್ಲಿ ಹಿಂದು ಸ್ತಾನ ಸರಕಾರವು ಬಗೆ ಬಗೆಯ ಗಂಡಾಂತರ ಗಳನ್ನು ಎದುರಿಸಬೇಕಾಯಿತು; ಅನೇಕ ಜಟಿಲ ಸಮಸ್ಯೆಗಳನ್ನ ಬಿಡಿಸಬೇಕಾಯಿತು; ಪ್ರಚಂಡ ಪ್ರಮಾಣದಲ್ಲಿ ಹಣವನ್ನು ಸೂರೆ ಮಾಡಬೇಕಾಯಿತು. ಕಾಶ್ಮೀರ ಸಮಸ್ಯೆ ಯನ್ನು ಬಿಡಿಸಲು ಸರಕಾರವು ಇನ್ನೂ ದಿನವೂ ಲಕ್ಷಾವಧಿ ರೂಪಾಯಿಗಳನ್ನ ವೆಚ್ಚ ಮಾಡಬೇಕಾಗುತ್ತಿದೆ. ಅಲ್ಲದೆ ರಾಷ್ಟ್ರಕ್ಕೆ ಅವಶ್ಯವಾದ ಉತ್ಪಾದನೆಯಲ್ಲಿಯೂ ಹೇರಳ ಹಣವನ್ನು ಸರಕಾರವು ವ್ಯಯಿಸಬೇಕಾಗಿದೆ. ಹೀಗೆ ಒಂದಲ್ಲ ಎರಡಲ್ಲ ಹಲವಾರು ಜಟಿಲ ಸಮಸ್ಯೆಗಳು ದೇಶದ ಮುಂದಿರುವಾಗ ರಾಷ್ಟ್ರದ ಉತ್ಪಾದನೆಯಲ್ಲಿ ಮತ್ತು ಸಾರಿಗೆ ಯಲ್ಲಿ ಪ್ರಮುಖ ಪಾತ್ರವಹಿಸಬೇಕಾದ ರೇಲ್ವೆ ಕೆಲಸಗಾರರು ಸಂಪಿನಂಥ ಘಾತಕ ವಿಚಾರ ಮಾಡುವದು ರಾಷ್ಟ್ರದ್ರೋಹವಾಗುವದು. ಭಾವಿ ಪೀಳಿಗೆಯು ರೇಲ್ವೆ ಕೆಲಸಗಾರರ ಈ ಅನ್ಯಾಯ್ಯ ಮತ್ತು ಅಸಮಂಜಸ ಸಂಪಿನ ಬಗ್ಗೆ ಅವರನ್ನು ತೆಗಳದಿರದು.

ಸರಕಾರದ ಇತರ ನವಕರರ ಮತ್ತು ರೇಲ್ವೆ ಕೆಲಸಗಾರರ ಪರಿಸ್ಥಿತಿಯನ್ನು ಪೂರ್ವ ಗ್ರಹದೂಷಿತರಾಗದೆ,ನಿರ್ವಿಕಾರ ಮನಸ್ಸಿನಿಂದ ವಿಚಾರಿಸಿದ್ದಾದರೆ, ರೇಲ್ವೆ ಕೆಲಸಗಾರರಿಗೆ ಹೆಚ್ಚಿನ ಸವಲತ್ತುಗಳು ದೊರೆಯುತಿವೆ ಯೆಂದು ಗೊತ್ತಾಗದಿರದು. ಇದಲ್ಲದೆ ರೇಲ್ವೆ ಮಂತ್ರಿಗಳಾದ ಮಾನ್ಯ ಸಂತಾನಂರು ಲಖನೌ ದಲ್ಲಿ ಇತ್ತೀಚೆ ರೇಲ್ವೆ ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡುತ್ತ, ಸಂಬಳ ಸಮಿತಿಯ ಪುರಸ್ಕಾರಗಳನ್ನು ಈಗಾಗಲೆ ಕಾರ್ಯ ರೂಪದಲ್ಲಿ ತಂದಿದ್ದು ರಾಜಾಧ್ಯಕ್ಷರ ಸಲಹೆ ಸೂಚನೆಗಳನ್ನೂ ಬೇಗನೆ ಜಾರಿಯಲ್ಲಿ ತಂದು ರೇಲ್ವೆ ಕೆಲಸಗಾರರ ಪರಿಸ್ಥಿತಿಯನ್ನು ಇನ್ನಷ್ಟು ಸುಧಾರಿಸಲಾಗುವದೆಂದು ಹೇಳಿದರು. ಅಲ್ಲದೆ ರೇಲ್ವೆ ಕೆಲಸಗಾರರಿಗಾಗಿ ಹೆಚ್ಚಿನ ವಸತಿಗಳನ್ನು ಕಟ್ಟಿಸುವದು, ರೇಲ್ವೆ ವಸತಿಗಳಲ್ಲಿಯ ಅಸ್ವಚ್ಛ ಸ್ಥಿತಿಯನ್ನು ಹೋಗ ಲಾಡಿಸುವದು ಮತ್ತು ವಿದ್ಯುದ್ದೀಪಗಳನ್ನು ಪೂರೈಸುವದು ಇವೇ ಮೊದಲಾದ ಸೌಕರ್ಯಗಳತ್ತ ಸರಕಾರದವರು ತೀವ್ರ ಗಮನಿಸುವರೆಂದೂ ಆಶ್ವಾಸಿಸಿದ್ದಾರೆ. ಸರಕಾರದವರು ಈ ಬಗ್ಗೆ ತಮ್ಮ ಕೊನೆಯ ನಿರ್ಣಯ ಕೊಡುವ ವರೆಗೆ ರೇಲ್ವೆ ಕೆಲಸಗಾರರು, ತಮ್ಮ ಹೊಣೆಯನ್ನು ಅರಿತುಕೊಂಡು, ಸಂಪಿನಂಥ ಆತ್ಮಘಾತಕ ಧೋರಣವನ್ನ ಸ್ವೀಕರಿಸಲಿಕ್ಕಿಲ್ಲೆಂದು ನಾನು ಆಶಿಸುತ್ತೇನೆ ಎಂದೂ ಮಂತ್ರಿಗಳು ಸಾರ್ವಜನಿಕ ಸಭೆಯಲ್ಲಿ ಹೇಳಿರುವರು. ರೇಲ್ವೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಯ ಪ್ರಕಾಶರೂ 'ರಾಷ್ಟ್ರದ ಆರ್ಥಿಕ ರಚನೆಯನ್ನೇ ಬುಡಮೇಲು ಮಾಡುವ ಯಾವದೇ ದೊಡ್ಡ ಸಂಪುಗಳನ್ನು ಹಿಂದೀ ಕೆಲಸಗಾರರು ಹೂಡ ಬೇಕೆಂದು ನಾನು ಬಯಸುವದಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ. ಸರಕಾರೀ ನವಕರರ ಮತ್ತು ಜನಸಾಮಾನ್ಯರ ಹಿತಸಂಬಂಧಗಳ ನ್ನು ಸುಧಾರಿಸಲು ಸರಕಾರಕ್ಕೆ ಎರಡು ಮೂರು ವರುಷಗಳನ್ನಾದರೂ ಕೊಡುವದು ಅತ್ಯವಶ್ಯ ವಾಗಿದೆ. ದೇಶದಲ್ಲಿ ಇಂಥ ವಿಷಮ ಪರಿಸ್ಥಿತಿ ಯಿರುವಾಗ ಉತ್ಪಾದನೆ ಮತ್ತು ಸಾರಿಗೆಯ ವ್ಯವಹಾರವನ್ನು ನಿಲ್ಲಿಸಿಬಿಡುವಂಥ ಧೋರಣ ವನ್ನು ರೇಲ್ವೆ ಕೆಲಸಗಾರರು ಸ್ವೀಕರಿಸಿ ದ್ದಾದರೆ ಸಾರ್ವಜನಿಕರ ಬೆಂಬಲವು ಅವರಿಗೆ ಸಿಕ್ಕಲಾರದೆಂಬುದನ್ನು ಅವರು ಮರೆಯ ಬಾರದು. ರೇಲ್ವೆ ಕೆಲಸಗಾರರೇನು, ಮೊದಲಿ ನಂತೆ ದೊಡ್ಡ ಬೆಳೆಸುವಂಥ ಯಾವು ದೊಂದು ಕಂಪನಿಯ ನವಕರರಲ್ಲ; ಅವರು ರಾಷ್ಟ್ರದ ಸೇವಕರು; ಸ್ವತಂತ್ರ ಹಿಂದುಸ್ತಾನ ಸರಕಾರದ ಪ್ರಮುಖ ಅಂಗ. ರೇಲ್ವೆ ಆಡ ಳಿತೆಯಲ್ಲಿಯ ಉಳಿತಾಯದ ಹೆಚ್ಚಿನ ಅಂಶ ವನ್ನು ರೇಲ್ವೆ ಕೆಲಸಗಾರರ ಸೌಕರ್ಯಗಳಿ ಗಾಗಿಯೆ ಉಪಯೋಗಿಲಾಗುವದೆಂದು ಮಾನ್ಯ ಮಂತ್ರಿಗಳು ಆಶ್ವಾಸಿಸಿದ್ದಾರೆ. ಇದೆಲ್ಲವನ್ನೂ ಆಳವಾಗಿ ಮತ್ತು ನಿರ್ವಿಕಾರ ಚಿತ್ತದಿಂದ ವಿಚಾರಿಸಿ ರೇಲ್ವೆ ಕೆಲಸಗಾರರು ಸಮಂಜಸ ಧೋರಣವನ್ನು ಸ್ವೀಕರಿಸುವ ರೆಂದು ನಾವು ನಂಬುತ್ತೇವೆ.

ವೈಮಾನಿಕ ನೆಹರು



'ಕಳೆದ ವಾರ ಯುರೋಪಿನಿಂದ ಭಾರತಕ್ಕೆ ಬಂದಾಗ ಹೊಸ ವಿಮಾನಗಳನ್ನು ಪರಿಶೀಲಿಸುತ್ತ ಮುಖ್ಯಮಂತ್ರಿ ನೆಹರು ಅವರು ಒಂದು ವಿಮಾನವನ್ನು ನಡೆಸಲು ಪ್ರಯತ್ನಿಸುತಿರುವದು.

ವಾರದ ಸಿಂಹಾವಲೋಕನ

ಕಾಂಗ್ರೆಸ್ಸಿನಲ್ಲಿಯ ಕೊಳೆ

ಕಾಂಗ್ರೆಸ್ಸಿನ ಹಿರಿಯ ಮುಂದಾಳುಗಳೂ ಹಿಂದುಸ್ತಾನ ಸರಕಾರದ ಉಪಮುಖ್ಯ ಮಂತ್ರಿ ಗಳೂ ಆದ ಸರದಾರ ವಲ್ಲಭಭಾಯಿ ಪಟೇಲರು ಲಖನೌದಲ್ಲಿ ಇತ್ತೀಚೆಗೆ ಭಾಷಣ ಮಾಡುತ್ತ ಕಾಂಗ್ರೆಸ್ಸಿನಲ್ಲಿ ಹೆಚ್ಚುತಿರುವ ಕೊಳೆಯ ಬಗ್ಗೆ ವಿಷಾದ ಪ್ರದರ್ಶಿಸಿರುವರು. ಈ ಕೊಳೆಯ ಮೂಲಕ ಕಾಂಗ್ರೆಸ್ಸಿಗರು ಜನತೆಯ ಪ್ರೀತ್ಯಾದರಗಳಿಗೆ ಕೂಡ ಎರವಾಗುವ ಪ್ರಸಂಗ ಬರ ಬಹುದೆಂದೂ ಅವರು ಎಚ್ಚರಿಸಿದ್ದಾರೆ. ಕಾಂಗ್ರೆಸ್ಸಿಗರಲ್ಲಿ ಇಂದು ಅಧಿಕಾರಲಾಲಸೆ ಅಪ್ರಾಮಾಣಿಕತೆ, ಸ್ವಾರ್ಥಲೋಲುಪತೆ ಹೆಚ್ಚಿ ಸತ್ಯಪ್ರೇಮ ಮತ್ತು ಧ್ಯೇಯನಿಷ್ಠೆ ಮಾಯ ವಾಗಹತ್ತಿದೆ. ಸಕಾಲದಲ್ಲಿಯೇ ಕಾಂಗ್ರೆಸ್ಸಿ ಗರು ಇದನ್ನೆಲ್ಲ ಅರಿತುಕೊಂಡು ತಮ್ಮ ಧೋರಣ ವನ್ನು ತಿದ್ದಿಕೊಳ್ಳದಿದ್ದರೆ ಕಳೆದ ೬೦ ವರುಷ ಗಳಿಂದ ಬಗೆ ಬಗೆಯ ಸ್ವಾರ್ಥತ್ಯಾಗ, ಕಷ್ಟ ಸಹಿಷ್ಣುತೆ ಮತ್ತು ಆತ್ಮ ಬಲಿದಾನದಿಂದ ಕಟ್ಟಿದ ಕಾಂಗ್ರೆಸ್ಸಿನ ಅಧಃಪಾತವಾಗುವದೆಂದೂ ಸರ ದಾರರು ಎಚ್ಚರಿಕೆಯ ಮಾತು ಹೇಳಿದ್ದಾರೆ. ಸರದಾರರು ಬಿಚ್ಚುಮಾತಿನಲ್ಲಿ ಹೇಳಿದ್ದರಲ್ಲಿ ಬಹ್ವಂಶವನ್ನು ಇಂದು ಅನೇಕ ಕಾಂಗ್ರೆಸ್ಸಿಗರಲ್ಲಿ ನಾವು ಕಾಣಬಹುದು. ಮಹಾತ್ಮಾ ಗಾಂಧಿಯ ವರು ಜೀವಂತ ಇದ್ದಾಗಲೆ ಇಂಥ ಸಂಗತಿಗಳು ಗೊತ್ತಾಗಿದ್ದುದರಿಂದ ಅವರು ಹಲವಾರುಸಲ ತಮ್ಮ ಭಾಷಣ, ಬರೆವಣಿಗೆಯ ಮೂಲಕ ಕಾಂಗ್ರೆಸ್ಸಿ ಗರನ್ನು ಈ ಬಗ್ಗೆ ಎಚ್ಚರಿಸಿಯೂ ಇದ್ದರು. ಕಾಂಗ್ರೆಸ್ಸಿನ ಗೌರವಕ್ಕೆ ಕುಂದುಬರುವ ರೀತಿ ಯಲ್ಲಿ ವರ್ತಿಸಿದವರ ಮೇಲೆ ಹಾಗು ಧ್ಯೇಯ ಚ್ಯುತರಾದವರಮೇಲೆ ಶಿಸ್ತಿನಕ್ರಮತಕ್ಕೊಂಡು ಶಿಕ್ಷಿಸುವ ಉಪಕ್ರಮವನ್ನು ಪ್ರಾರಂಭಿಸ ಬೇಕು. ಈ ಬಗೆಯ ಪರಿಣಾಮಕಾರಿಯಾದ ಉಪಾಯಗಳನ್ನು ಬೇಗನೆ ಕಂಡುಹಿಡಿಯ ದಿದ್ದರೆ ಕಾಂಗ್ರೆಸ್ಸಿಗರಲ್ಲಿಯ ಈ ಕೊಳೆ ಜನ ಸಾಮಾನ್ಯದಲ್ಲಿಯೂ ಮನೆಮಾಡಿ ಸಾರ್ವಜನಿಕ ಜೀವನವೇ ಹಾಳಾಗಿ ಹೋಗಬಹುದು. ಆದು ದರಿಂದ ಕಾಂಗ್ರೆಸ ವರಿಷ್ಠರು ಕಾಂಗ್ರೆಸ್ಸಿಗರ ಲ್ಲಿಯ ಈ ಅನೀತಿಯನ್ನು ಹೋಗಲಾಡಿಸಲು ಸಮರ್ಥವಾದ ಉಪಾಯಗಳನ್ನು ಕಂಡು ಹಿಡಿದು ಕಾಂಗ್ರೆಸ್ಸಿನ ವರ್ಚಸ್ಸನ್ನು ಕಾಯ್ದು ಕೊಳ್ಳಬೇಕೆಂದು ಬಿನ್ನವಿಸುತ್ತೇವೆ.

ಆಹಾರ-ವಸ್ತ್ರಗಳ ನಿಯಂತ್ರಣ

ಹಿಂದುಸ್ತಾನ ಸರ್ಕಾರದ ಆದೇಶದಂತೆ ಇದೇ ಡಿಸೆಂಬರ ಒಂದನೆಯ ತಾರೀಖಿನಿಂದ ಬಟ್ಟೆ ಗಳ ಮೇಲಿನ ನಿಯಂತ್ರಣವು ಎಲ್ಲೆಡೆ ಜಾರಿ ಯಲ್ಲಿ ಬಂದಿತು. ಸರಕಾರದಿಂದ ಲಾಯಸೆನ್ಸ ಪಡೆಯದೆ ಯಾವ ಅಂಗಡಿಕಾರನೂ ಗಿರಣಿ ಬಟ್ಟೆಗಳನ್ನು ಮಾರಬಾರದೆಂದು ವಿಧಿಸಲಾಗಿದೆ. ವ್ಯಾಪಾರಸ್ಥರಲ್ಲಿದ್ದ ಗಿರಣಿ ಬಟ್ಟೆಗಳ ಸಂಗ್ರಹ ವನ್ನು ಸರಕಾರಕ್ಕೆ ತಿಳಿಸಬೇಕೆಂದು ಗೊತ್ತಾ ಗಿದೆ. ಇದಕ್ಕಾಗಿ ಡಿಸೆಂಬರ ೧೦ ರ ವರೆಗೆ ಅವ ಧಿಯನ್ನು ಕೊಡಲಾಗಿದೆ. ಆದರೆ ಲಾಯ ಸೆನ್ಸ ಪಡೆದ ಅಂಗಡಿಗಳು ಇನ್ನೂ ಸ್ಥಾಪಿತ ವಾಗದ್ದರಿಂದ ಜನತೆಗೆ ಬಟ್ಟೆಗಳೆ ಸಿಕ್ಕದಂತಾ ಗಿದೆ. ಬರುವ ಆರು ತಿಂಗಳುಗಳಲ್ಲಿ ಬೇಕಾ ದಾಗ ಬಟ್ಟೆಗಳನ್ನು ತೆಗೆದುಕೊಳ್ಳಬಹುದಾ ದರೂ ಈಗಲೇ ಬಟ್ಟೆ ಬೇಕಾದವರಿಗೆ ಲಾಯ ಸೆನ್ಸ ಪಡೆದ ಅಂಗಡಿಗಳಿಲ್ಲದ್ದರಿಂದ ತೊಂದ ರೆಯಾಗಹತ್ತಿದೆ, ವ್ಯಾಪಾರಸ್ಥರಲ್ಲಿಯ ಬಟ್ಟೆ ಗಳ ವ್ಯಾಪಾರವನ್ನು ನಿಲ್ಲಿಸುವಾಗಲೆ ಬೇರೆ ಕಡೆ ಬಟ್ಟೆ ಸಿಕ್ಕುವ ವ್ಯವಸ್ಥೆ ಮಾಡಿದ್ದರೆ ಹೆಚ್ಚು ಒಳಿತಾಗುತಿರಲಿಲ್ಲವೆ? ಆಹಾರ ನಿಯಂತ್ರಣದ ಹಣೆಬರಹವೂ ಹೀಗೆಯೇ ಇದೆ. ಭತ್ತ ಅಕ್ಕಿ ಮಾರಾಟವನ್ನು ನಿಯಂತ್ರಿಸದಿದ್ದರೂ ಎಲ್ಲ ರಿಗೂ ಇನ್ನೂ ಅಕ್ಕಿಯ ರೇಶನ ಕಾರ್ಡು ಸಿಕ್ಕದಿ ದ್ದುದರಿಂದ ಅವರು ಪೇಚಾಡಬೇಕಾಗಿದೆ. ಕಾರ್ಡು ಕೇಳಲಿಕ್ಕೆ ಹೋದರೆ ಉತಾರೆ ತೆಗೆದುಕೊಂಡು ಬನ್ನಿ, ನಿಮ್ಮ ಹೊಲಗಳೆಷ್ಟು, ಇನಸ್ಪೆಕ್ಟರರು ತಪಾಸ ಮಾಡುವರು ಮುಂತಾದ ಒಂದಿ ಲ್ಲೊಂದು ನೆವ ಮುಂದೆ ಬಂದು ಕಾರ್ಡು ದೊರೆ ಯುವದಿಲ್ಲ. ಧಾರಣೆಗಳಾದರೊ ಮಿತಿಮೀರಿ ಏರ ಹತ್ತಿವೆ ಅಕ್ಕಿಯ ಸೀದಾ ಪ್ರಮಾಣವನ್ನೂ ಕಡಿಮೆ ಮಾಡಲಾಗಿದೆ. ಕೊಡತಕ್ಕ ಅಕ್ಕಿಯಾದರೂ ಭತ್ತದಿಂದ ತುಂಬಿರುವದು. ಈ ಬಗೆಯ ಕೆಟ್ಟ ಅಕ್ಕಿಯನ್ನು ಧಾರವಾಡ ಜಿಲ್ಲಾ ಕಲೆಕ್ಟರರಿಗೆ ಪತ್ರಿಕಾ ಪರಿಷತ್ತಿನಲ್ಲಿ ತೋರಿಸಿದಾಗ ಈ ಬಗ್ಗೆ ಕೂಡಲೆ ವಿಚಾರಮಾಡಲಾಗುವದೆಂದು ಅವರು ಆಶ್ವಾಸಿಸಿದರು. ಇಷ್ಟೊಂದು ಇನಸ್ಪೆಕ್ಟರರು, ಅಧಿಕಾರಿಗಳು ಇದ್ದರೂ ಎರಡನೆಯವರು ಲಕ್ಷಕ್ಕೆ ತರುವವರೆಗೆ ಕೆಟ್ಟ ಕಾಳುಗಳ ಸಂಗತಿ ಅವರಿಗೇಕೆ ಗೊತ್ತಾಗುವದಿಲ್ಲವೊ ತಿಳಿಯದಾ ಗಿದೆ! ಅಧಿಕಾರಿಗಳು ವಿಚಾರಣೆಮಾಡುವ ವರೆಗೆ ಜನತೆ ಅಂಥ ಕಾಳುಗಳಿಂದಲೆ ಸಂತುಷ್ಟರಾಗ ಬೇಕೆ ?

ಯಶಸ್ವಿಯಾಗಲಾರವು

'ನಿಯಂತ್ರಣಗಳು ಯಶಸ್ವಿಯಾಗಲಾರವು. ಇದರಿಂದ ಜನತೆಗೆ ಬಗೆಬಗೆಯ ಕಷ್ಟನಷ್ಟ ಗಳನ್ನನುಭವಿಸಬೇಕಾಗುವದು.' ಎಂದು ಮುಂತಾಗಿ ನಾವು ಈ ಮೊದಲು ಅಭಿಪ್ರಾಯ ಪಟ್ಟಿದ್ದೇವೆ. ಕಾಂಗ್ರೆಸ್ಸಿನ ಪ್ರಮುಖರಲ್ಲಿ ಒಬ್ಬರೂ ಹಿರಿಯೋಲಗದ ಅಧ್ಯಕ್ಷರೂ ಆಗಿ ರುವ ಶ್ರೀ ಮಾವಳಣಕರರೂ ಇತ್ತೀಚೆ ಆಹಾರ ಮತ್ತು ವಸ್ತ್ರ ನಿಯಂತ್ರಣದ ವಿರುದ್ಧ ವ್ಯಕ್ತ ಮಾಡಿದ ಅಭಿಪ್ರಾಯಗಳು ಮನನೀಯ ವಾಗಿವೆ. ಅಧಿಕಾರಿಗಳ ಲಂಚಗುಳಿತನ ಮತ್ತು ಜನತೆಯ ನೀತಿಪಾತ ಮೊದಲಾದ ಕಾರಣಗಳ ಮೂಲಕ ನಿಯಂತ್ರಣಗಳು ಯಶಸ್ವಿಯಾಗ ಲಾರವೆಂದು ಅವರು ಖಂಡತುಂಡವಾಗಿ ಹೇಳಿ ದ್ದಾರೆ ಜನಸಾಮಾನ್ಯರು ಇಂದು ಸ್ವಾರ್ಥಿ ಗಳಾಗಿದ್ದಾರೆ; ಅಧಿಕಾರಿಗಳೂ ಇದೇ ವರ್ಗಕ್ಕೆ ಸೇರಿದವರಿದ್ದಾರೆ, ಲಂಚಗುಳಿಗಳಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ನಿಯಂತ್ರಣಗಳನ್ನು ಹೇರಿ ದರೆ ಇವರ ನೈತಿಕ ಮಟ್ಟವು ಮತ್ತಷ್ಟು ಕೆಳ ಗಿಳಿದು ಇವರನ್ನು ಸುಧಾರಿಸುವದೇ ದುಃಸಾಧ್ಯ ವಾಗಬಹುದು ಎಂದು ಶ್ರೀ ಮಾವಳಣಕರರು ಎಚ್ಚರಿಕೆಯ ಮಾತುಗಳನ್ನು ಹೇಳಿರುವರು. ಇಂದು ಜನತಾಸರಕಾರವಿದ್ದರೂ ಜನ ಸಾಮಾನ್ಯರು ಸರಕಾರದ ಬಗ್ಗೆ ಇದ್ದ ತಮ್ಮ ಧೋರಣವನ್ನು ಇನ್ನೂ ಬದಲಿಸಿಲ್ಲ; ಮೊದಲಿನ ವಿದೇಶಿ ಸರಕಾರದಂತೆಯೇ ಇದನ್ನು ನೋಡು ತಿರುವರು. ಈ ಪ್ರವೃತ್ತಿಯು ಹೋಗಿ ಜನರು ತಮ್ಮ ಈ ಸರಕಾರಕ್ಕೆ ಸರ್ವವಿಧಸಹಾಯ ಸಲ್ಲಿ ಸಬೇಕು ಎಂದೂ ಶ್ರೀ ಮಾವಳಣಕರರು ಹೇಳಿ ರುವರು. ಜನಸಾಮಾನ್ಯರ ಕಷ್ಟನಿಷ್ಠುರಗಳು ಕಡಮೆಯಾಗಿಲ್ಲ, ನಿಯಂತ್ರಣ ಮೊದಲಾದವು ಗಳಿಂದ ಅವು ಮತ್ತಷ್ಟು ಹೆಚ್ಚುತಿವೆ ಇಂಥ ಪರಿಸ್ಥಿತಿಯಲ್ಲಿ ಶ್ರೀ ಮಾವಳಣಕರರು ಅಪೇ ಕ್ಷಿಸಿದಂತೆ ಜನತೆಯ ಧೋರಣದಲ್ಲಿ ಬದಲು ಎಂತಾಗಬೇಕು ? ಶ್ರೀ ಮಾವಳಣಕರರು ವ್ಯಕ್ತಪಡಿಸಿದ ವಿಚಾರಗಳ ಬಗೆಗೆ ಸರಕಾರ ದವರು ಆಳವಾಗಿ ವಿಚಾರಿಸಿ ಸೂಕ್ತವಾದ ಕ್ರಮ ಇನ್ನು ಮುಂದಾದರೂ ಕೈಕೊಳ್ಳ ಬೇಕೆಂದು ಸೂಚಿಸುತ್ತೇವೆ.

ಹಿಂದ-ಪಾಕಿಸ್ತಾನ ಮಾತುಕತೆ

ಇಂದು ೬ ನೆಯ ತಾರೀಖಿನಿಂದ ಹಿಂದು ಸ್ತಾನ ಮತ್ತು ಪಾಕಿಸ್ತಾನ ಪ್ರತಿನಿಧಿಗಳಲ್ಲಿ ಮಹತ್ವದ ವಿಷಯಗಳ ಬಗೆಗೆ ಮಾತುಕತೆ ಪ್ರಾರಂಭವಾಗುವವು. ಪೂರ್ವ ಪಾಕಿಸ್ತಾನ ದಲ್ಲಿ ಹಿಂದುಗಳ ಛಳನೆ ವಿಶೇಷ ಆಗಹತ್ತಿದ್ದ ರಿಂದ ಅಲ್ಲಿಂದ ಅನೇಕಾನೇಕ ಹಿಂದುಗಳು ಪಶ್ಚಿಮ ಬಂಗಾಲಕ್ಕೆ ಗುಳೇ ಬರುತಿರುವರು. ಈ ಸಮಸ್ಯೆಗೆ ಹಿಂದೀ ಪ್ರತಿನಿಧಿಗಳು ಹೆಚ್ಚು ಮಹತ್ವ ಕೊಡುತಿರುವರು. ಈ ಸಮಸ್ಯೆ ಯನ್ನು ಸಮಾಧಾನಕರವಾಗಿ ಬಿಡಿಸಲು ಇನ್ನು ಕೆಲ ಸಮಯ ಕೊಡಬೇಕೆಂದು ಪಾಕಿಸ್ತಾನದ ಪ್ರತಿನಿಧಿಗಳು ಕೇಳಿಕೊಳ್ಳಬಹುದೆಂದು ತೋರುತ್ತದೆ. ರಾಜಕೀಯ ಕಾರಣವೇ ಹಿಂದುಗಳು ಗುಳೇ ಬರುವದಕ್ಕೆ ಮುಖ್ಯ ಕಾರಣವೆಂದು ಬಹುಜನರ ಅಭಿಪ್ರಾಯವಿದೆ. ಹಿಂದ ಪಾಕಿಸ್ತಾನ ಸರಕಾರಗಳಲ್ಲಿ ಈ ಮೊದಲು ಕಾಗದದಲ್ಲಿ ಎಷ್ಟೋ ಕರಾರುಗಳು ಆಗಿವೆ. ಆದರೆ ಅದರಂತೆ ನಡೆಯದಿದ್ದರೆ ಮುಂದೇನು ಎಂಬುದನ್ನು ಗೊತ್ತುಪಡಿಸ ದಿದ್ದರೆ ಇವೆಲ್ಲ ಕರಾರುಗಳು ಕಾಗದಗಳಲ್ಲಿಯೇ ಉಳಿಯುವವೆಂಬುದು ಈ ವರೆಗಿನ ಅನುಭವ. ಆದುದರಿಂದ ಇಂಥ ಯಾವದಾದ ರೊಂದು ಯೋಜನೆಯನ್ನು ಗೊತ್ತುಪಡಿಸ ಬೇಕೆಂದು ಸೂಚಿಸಲಾಗಿದೆ. ಪೂರ್ವ ಪಂಜಾಬ ಮತ್ತು ಪಶ್ಚಿಮ ಬಂಗಾಲಗಳಿಗೆ ಪಾಕಿಸ್ತಾನ ಸರಕಾರವು ೪೦ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಸಂಬಂಧದಲ್ಲಿಯೂ ಪಾಕಿಸ್ತಾನ ಸರಕಾರವು ಯಾವ ಧೋರಣ ವಹಿಸುವದೆಂಬುದು ಮಹತ್ವದ್ದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಮಾತುಕತೆಗಳು ಯಶಸ್ವಿ ಯಾಗಲೆಂದೇ ಎಲ್ಲರೂ ಹಾರಯಿಸುವರು.

ವಸ್ತುಸ್ಥಿತಿಯನ್ನು ಎದುರಿಸುವುದು

ನಮ್ಮ ಮುಖ್ಯಪ್ರಧಾನರಾದ ಪಂಡಿತ ಜವಾಹರಲಾಲ ನೆಹರೂ ಅವರು "ವಸ್ತುಸ್ಥಿತಿಯನ್ನು ಎದುರಿಸುವ" ಅವಶ್ಯಕತೆಯನ್ನು ಯಾವಾಗಲೂ ಒತ್ತಿ ಹೇಳುತ್ತಿರುತ್ತಾರೆ. ಇದು ನನಗೂ ಒಪ್ಪಿಗೆಯಾದ ಮಾತು. ಬೇರೆಬೇರೆ ದೃಷ್ಟಿ, ಬೇರೆಬೇರೆ ಗುರಿಗಳನ್ನಿಟ್ಟುಕೊಂಡ ಜನರು ಒಂದು ಉಪಾಯವನ್ನು ಕಂಡು ಹಿಡಿಯುವ ಉತ್ಕಟೇಚ್ಛೆಯಿಂದ ಒಂದೆಡೆ ಕೂಡಿದಾಗ ಅವರೆಲ್ಲರೂ ಸಹಜವಾಗಿಯೇ ವಸ್ತುಸ್ಥಿತಿಯನ್ನು ಎದುರಿಸಲಣಿಯಾಗುವರು. ವಸ್ತುಸ್ಥಿತಿಯಿಂದ ಎದುರಿಸಲ್ಪಟ್ಟಾಗ, ಒಂದು ಮಹತ್ತರವಾದ ಕ್ರಾಂತಿಯೂ ವ್ಯವಹಾರದಲ್ಲಿ ಕೇವಲ ಕೈಬದಲಾವಣೆಯಲ್ಲೇ ಮುಗಿದು ಪರಿಣಾಮದಲ್ಲಿ ಏನನ್ನೂ ಸಾಧಿಸಲಾರದೆ ಹೋಗುವ ದೃಷ್ಟಾಂತಗಳು ಅಪೂರ್ವವಾಗಿಲ್ಲ. ಪ್ರಾರಂಭಾವಸ್ಥೆಯಲ್ಲಿ ಕೆಲ ಅಮೂಲಾಗ್ರ ಬದಲಾವಣೆಗಳಾದಂತೆ ತೋರಿದರೂ ಪರಿಸ್ಥಿತಿ ಸ್ವಲ್ಪ ಶಾಂತವಾದ ಬಳಿಕ "ಹಳೆಯ ಪರಿಯು ಕಳೆದುಹೋಗಿ ಹೊಸದಕ್ಕೆ ಎಡೆ ಕೊಡುವದು" ಕಾಣದೇ ಹೋಗುತ್ತದೆ.

ಇದಕ್ಕೆ ಕಾರಣವಿಷ್ಟೇ: ವಸ್ತುಸ್ಥಿತಿಯನ್ನು ಎದುರಿಸುವದರಲ್ಲಿ ಎರಡು ಬಗೆಯುಂಟು; ಒಂದು ಭೌತಿಕ ವಸ್ತುಸ್ಥಿತಿ, ಇನ್ನೊಂದು ನೈತಿಕ ವಸ್ತುಸ್ಥಿತಿ. ನಾವು ಕೇವಲ ಭೌತಿಕ ವಸ್ತುಸ್ಥಿತಿಯನ್ನಷ್ಟೇ ಗಮನಿಸಿ ನೈತಿಕ ವಸ್ತುಸ್ಥಿತಿಯನ್ನು ಕಡೆಗಣಿಸಿದರೆ ಕ್ರಾಂತಿಗಳಾಗಲಿ ಪಕ್ಷಗಳ ಪರಿವರ್ತನೆಯಾಗಲಿ ಕಡೆಗೆ ಮಹತ್ವದ್ದೇನನ್ನೂ ಸಾಧಿಸಲಾರದೆ ಹೋಗುವವು. ನೈತಿಕ ವಸ್ತುಸ್ಥಿತಿಯನ್ನು ನಾವು ಎದುರಿಸಿದಾಗಲೇ ಸ್ಥಿತಿಗತಿಯನ್ನು ಬದಲಿಸಲು ನಾವು ಸಮರ್ಥರಾಗುವೆವು.

ಹಳೆಯ ಅವಸ್ಥೆ ಹಾಗೆಯೇ ಉಳಿದುಕೊಳ್ಳಲು ಇನ್ನೂ ಒಂದು ಕಾರಣವುಂಟು. ವಸ್ತುಸ್ಥಿತಿಯನ್ನು ಎದುರಿಸಲೆಳಸುವವರಲ್ಲಿ ಎರಡು ಮನೋವೃತ್ತಿಯುಂಟು. ಕಠೋರವಾದ ವಸ್ತುಸ್ಥಿತಿಗಳು ಎದುರುಬಿದ್ದಾಗ, ಎದರು ತೊಡರುಗಳನ್ನು ಕಂಡು ನಮ್ಮೆದೆ ತಲ್ಲಣಿಸಿದಾಗ, ಅವಕ್ಕೆ ಶರಣೆನ್ನದೆ ಬೇರ ದಿಕ್ಕಿಲ್ಲೆಂದು ನಮಗೆ ತೋರಿದರೆ ಆಗ ಮಾತ್ರ ಹಳೆಯ ಅವಸ್ಥೆ ಉಳಿದುಕೊಳ್ಳುವದು. ನಮ್ಮ ಮನಸು ಒಲ್ಲದಿದ್ದರೂ ಆತ್ಮ ಸಾಕ್ಷಿ ನೋವಿನಿಂದ ನರಳಿದರೂ ಯಥಾಸ್ಥಿತಿಯು ನಿರಾಪದವಾಗಿ ಉಳಿಯುವದು. ಆದರೆ ಪ್ರತಿಕೂಲ ವಸ್ತುಸ್ಥಿತಿ ಎಷ್ಟೆಷ್ಟು ಪ್ರಬಲವಾಯಿತೋ—ಅದೂ ಭೌತಿಕ ವಸ್ತುಸ್ಥಿತಿಗಳು ನೈತಿಕ ವಸ್ತುಸ್ಥಿತಿಗಳಿಗೆ ಬಾಧಕವಾಗಿದ್ದರೆ- ಅದನ್ನು ಗೆದ್ದು ಮುನ್ನಡೆಯುವ ನಮ್ಮ ಛಲವೂ ಅಷ್ಟಷ್ಟೇ ಬಲಗೊಂಡಿತೆಂದರೆ, ಆಗ ಭೌತಿಕ ವಸ್ತುಸ್ಥಿತಿಗೆ ನಾವು ಬಗ್ಗಲಾರೆವು. ನೈತಿಕ ಧ್ಯೇಯವನ್ನು ಹಿಂಸೆಯಿಲ್ಲದ ಸಾಧಿಸಲು ಮತ್ತು ಉಭಯ ಪಕ್ಷಗಳಿಗೂ ಸರಾಗವಾಗಿ ಹೊಸ ಸ್ಥಿತಿಗತಿಗೆ ಹೊಂದಿಕೊಳ್ಳಲು ಅವಶ್ಯವಾದ ಅವಕಾಶವನ್ನು ಕೊಡಲು ಎಷ್ಟು ಬೇಕೋ ಅಷ್ಟು ದುಟ್ಟಿಗೆ ಮಾತ್ರ ಸಡಿಲು ಕೊಡಲು ನಾವು ಸಿದ್ಧರಾಗುವೆವು.

ನನ್ನ ಸಿದ್ಧಾಂತವನ್ನು ಕುರಿತು ವಿವರಿಸುವೆ. ಉದಾಹರಣೆಗೆ "ವನಸ್ಪತಿ"ಯನ್ನೇ ತೆಗೆದುಕೊಳ್ಳೋಣ. ಕೆಲವು ಮಹಾ ಪ್ರಭಾವಶಾಲಿ ವರ್ಗಗಳು ಈ ಉದ್ದಿಮೆ ಉಳಿಯಬೇಕೆಂದು ಅಪೇಕ್ಷಿಸುತ್ತವೆ; ತಪ್ಪುವಿಲ್ಲದ ಪಕ್ಷದಲ್ಲಿ ವನಸ್ಪತಿಯನ್ನು ಕೊಂಡುಕೊಳ್ಳಲು, ಅದೆಷ್ಟೇ ಮರುಳತನವಿರಲಿ, ಆಶಿಸುವ ಜನರೂ ಇರುವರು; ಇಷ್ಟೇ ಅಲ್ಲ, ಅದರ ಬದಲಿಗೆ ಹೆಚ್ಚು ಆರೋಗ್ಯಕರವೂ ಅಗ್ಗವೂ ಆದ ಶುದ್ಧ ಎಣ್ಣೆಯನ್ನು ಬಡಿಸಿದರೆ ಸೈನಿಕರು ಕನಲಿದರೂ ಕನಲಬಹುದು. ಇವು ಭೌತಿಕ ವಿದ್ಯಮಾನಗಳು ಅಥವಾ ವಸ್ತುಸ್ಥಿತಿಗಳು. ಆದರೆ ಅತ್ತ ಅತ್ಯಂತ ಮಹತ್ತರವಾದ ನೈತಿಕ ವಸ್ತುಸ್ಥಿತಿಯೂ ಒಂದಿದೆ. ಇದೊಂದು ಅನೈತಿಕ ವ್ಯಾಪಾರ; ಏಕೆಂದರೆ ಮುಖ್ಯವಾಗಿ, ಅದನ್ನು ಅಚ್ಚ ತುಪ್ಪದೊಡನೆ ಗೊತ್ತಾಗದಂತೆ ಬೆರಸಲು ಬರುವದರಿಂದಲೇ ವನಸ್ಪತಿಯ ವ್ಯಾಪಾರ ಇಷ್ಟು ಲಾಭದಾಯಕವಾಗಿದೆ. ಅದು ಮೋಸವನ್ನೂ ಅಪ್ರಾಮಾಣಿಕತೆಯನ್ನೂ ಕಲಿಸುವ ವ್ಯಾಪಾರವಾಗಿಬಿಟ್ಟಿದೆ. ಅದು ಕುಡುಕತನ, ವ್ಯಭಿಚಾರಗಳಿಗಿಂತಲೂ ಹೆಚ್ಚಾಗಿ ನೀತಿಗೇಡಿತನವನ್ನುಂಟುಮಾಡಿದೆಯೆನ್ನಬಹುದು. ಏಕೆಂದರೆ ಎಂದೆಂದೂ ಕುಡಿಯದ, ವ್ಯಭಿಚಾರ ಮಾಡದ, ಬೀಡಿಸಿಗರೇಟು ಸೇದದ ಅಥವಾ ಚಹಾವನ್ನು ಕೂಡ ತೆಗೆದುಕೊಳ್ಳದ ಜನರನ್ನು ಕೂಡ ಅದು ಅಧಃಪತನಕ್ಕೆಳೆದಿದೆ. ಇದು ಮಹತ್ತರವಾದ ನೈತಿಕ ವಸ್ತುಸ್ಥಿತಿ. ಇದರೆದುರು ನಾವು ಭೌತಿಕ ವಾಸ್ತವಿಕತೆಗೆ ತಲೆಬಾಗಿದರೆ ಅದಕ್ಕೆ ತೋರಿಕೆಯ ವಾಸ್ತವಿಕತೆಯನ್ನು ಎದುರಿಸುವದೆಂದರೆ ಸೋತ ಸೈನ್ಯ ಗೆದ್ದವಂಗೆ ಶರಣು ಬರುವಂತೆ ಪೂರ್ಣ ಅಧೀನವಾಗುವದಲ್ಲ. ಅದನ್ನು ನಿವಾರಿಸಲು ವ್ಯವಹಾರ್ಯವಾದ, ಅಹಿಂಸಕವಾದ ಆದರೂ ಖಂಡಿತವಾದ ಯುಕ್ತಿಯನ್ನು ಕಂಡುಹಿಡಿಯಬೇಕು. ಯಾವುದಾದರೊಂದು ವ್ಯಾಪಾರಕ್ಕೆ ಬರುವ ಆರ್ಥಿಕ ಹಾನಿಯಾಗಲಿ ಕೆಲವರ ಜಿಹ್ವಾಚಾಪಲ್ಯಕ್ಕೆ ಒದಗುವ ರುಚಿಹಾನಿಯಾಗಲಿ ರಾಷ್ಟ್ರಕ್ಕಾಗುವ ನೈತಿಕ ಹಾನಿಯಷ್ಟು ಘೋರವೆನಿಸದು.

ನಿಯಂತ್ರಣದ ಧೋರಣೆಗೂ ಇದೇ ಮಾತು ಅನ್ವಯಿಸುತ್ತದೆ. ಎರಡೂ ಪಕ್ಷಗಳಲ್ಲಿ ಭೌತಿಕ ವಸ್ತುಸ್ಥಿತಿಗಳು ಒಂದಕ್ಕೊಂದು ವಿರುದ್ಧವಾಗಿರಬಹುದು. ಕೆಲವೊಂದು ಪ್ರಬಲ ವಿದ್ಯಮಾನ, ನಿಯಂತ್ರಣ ರಾಜ್ಯಕ್ಕೆ ಅನುಕೂಲವಾಗಿರಬಹುದು; ಇನ್ನು ಕೆಲವು ವಿನಿಯಂತ್ರಣಕ್ಕೆ ಅನುಕೂಲವಾಗಿರಬಹುದು. ಆಗ ನಿರ್ಣಯವನ್ನು ಯಾವ ಆಧಾರದಿಂದ ಮಾಡಬೇಕು? ನೈತಿಕ ವಿದ್ಯಮಾನಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡು ನಾವು ನಿರ್ಧಾರಕ್ಕೆ ಬರಬೇಕೆಂದು ನನ್ನ ನಮ್ರ ಸೂಚನೆ. ನೈತಿಕ ದೃಷ್ಟಿಯಿಂದ ನೋಡಿದರೆ, ನಿಯಂತ್ರಣಗಳು ಭಾರತದಲ್ಲಿ ನೀತಿಪಾತಕ್ಕೆ ಕಾರಣವಾಗುವವೆಂಬದು ಸಂಶಯಾತೀತ. ಅಪ್ರಾಮಾಣಿಕ, ವಂಚಕ ವೃತ್ತಿಯನ್ನು ಅವು ಹಿಡಿತಕ್ಕೆ ತರುವದು ದೂರವೇ ಉಳಿಯಿತು, ಬದಲಿಗೆ ನಿಜವಾಗಿ ಪ್ರಾಮಾಣಿಕರಾದವರು ಕೂಡ ನಿರುಪಾಯರಾಗಿ ಉನ್ನತ ಶೀಲವನ್ನೂ ಶ್ರದ್ಧಾಯುಕ್ತ ಸೇವಾಬುದ್ಧಿಯನ್ನೂ ತೊರೆಯುವಂತೆ ಮಾಡಿವೆ. ಒಬ್ಬಾತನು ಮೋಸ ಮಾಡದಿದ್ದಾಕ್ಷಣ, ಲಂಚ ಭಕ್ಷೀಸುಗಳನ್ನು ಕೊಡದಿದ್ದಾಕ್ಷಣ, ಅಥವಾ ಸ್ವತಃ ಪದಾರ್ಥಗಳಲ್ಲಿ ಮಿಶ್ರಣವನ್ನಾಗಲಿ ಮಾರುವಲ್ಲಿ ಸೇರಿಗೆ ಮೂರು ಪಾವನ್ನಾಗಲಿ ಮಾಡುವದಿಲ್ಲ, ಇಲ್ಲವೆ ಕಳ್ಳಪೇಟೆಯ ದರದಲ್ಲಿ ಮಾಡುವದಿಲ್ಲ ಅಥವಾ ಕಳ್ಳಪೇಟೆಯಲ್ಲಿ ಕೊಳ್ಳುವದಿಲ್ಲೆಂದಾಕ್ಷಣ, ಅವನು ಯೋಗ್ಯ ನಾಗರಿಕನೆನಿಸಲಾರ. ಆಡಳಿತದ ನಿಯಂತ್ರಣನೀತಿಯ ಫಲವಾಗಿ ಅವನು ಸಹನಾಗರಿಕರ, ಸಹೋದ್ಯಮಿಗಳ ಅಥವಾ ಮೇಲಧಿಕಾರಿಗಳ ಅಪ್ರಾಮಾಣಿಕ ವ್ಯಾಪಾರಗಳನ್ನು ಕಂಡುಕಂಡೂ ಕಣ್ಮುಚ್ಚಿ ಕುಳಿತುಕೊಳ್ಳುವಂತಾದರೆ ಅವನ ನಾಗರಿಕತ್ವಕ್ಕೆ ಚ್ಯುತಿಯೆ ಬಂದಂತೆ. ಮನಸಿಲ್ಲದಿದ್ದರೂ ಅಪ್ರಾಮಾಣಿಕತೆಗೆ ಬಲಿಬೀಳುವ, ಅವುಗಳಿಗೆ ಮೂಕ ಸಾಕ್ಷಿಗಳಾಗುವ, ಇಲ್ಲವೆ ಅಂಥ ದೂಷಿತ ಧನವನ್ನು ಅಂಗೀಕರಿಸುವ ಕಾರಕೂನರ ಮತ್ತು ಗುಮಾಸ್ತರ ಸಂಖ್ಯೆಯೇನೂ ಕಡಿಮೆಯಿಲ್ಲ. ಈ ಪದ್ಧತಿಯಲ್ಲಿ ನಾಗರಿಕನ ನೈತಿಕ ಭಾವನೆಯನ್ನು ಬೆಳೆಸುವ ಸಾಮರ್ಥ್ಯ ಎಳ್ಳಷ್ಟೂ ಇಲ್ಲ. ಈ ಪದ್ಧತಿಯನ್ನು ಹೆಚ್ಚುಹೆಚ್ಚು ಕಾಲ ನಡೆಸಿಕೊಂಡು ಹೋದಂತೆ ತನಗರಿಯದೆಯೇ ಕೆಳತರಗತಿಯ ನೀತಿಗಿಳಿಯುವ ಜನರ ಸಂಖ್ಯೆಯೂ ಹೆಚ್ಚುತ್ತ ಹೋಗುವದು. ಸಸ್ಯಾಹಾರಿಗಳ ಮನೆಯಲ್ಲಿ ಹುಟ್ಟಿದ ಮಗು ಸಸ್ಯಾಹಾರವನ್ನೂ ಮಾಂಸಾಹಾರಿಗಳ ನಡುವೆ ಹುಟ್ಟಿದ್ದು ಅದನ್ನೂ ಸಹಜ ಖಾದ್ಯವೆಂದು ಪರಿಗ್ರಹಿಸುವಂತೆ ಇಂದಿನ ಬೆಳೆಯುತ್ತಿರುವ ಮಕ್ಕಳ ಪೀಳಿಗೆಯಾದರೂ ಈಗಾಗಲೆ ಅಪ್ರಾಮಾಣಿಕತೆಯನ್ನು ಸಹಜ ಧರ್ಮವೆಂದು ಅಂಗೀಕರಿಸತೊಡಗಿದೆ.

ನಿಯಂತ್ರಣಗಳ ನೀತಿಘಾತಕ ಪ್ರಭಾವವನ್ನು ಅನೇಕ ಸ್ಫುಟ ನಿದರ್ಶನಗಳಿಂದ ತೋರಿಸಿಕೊಡಬಹುದು. ಈ ಸಂಚಿಕೆಯಲ್ಲಿ ಇನ್ನೊಂದೆಡೆ ಇದರ ಎರಡು ಉದಾಹರಣೆಗಳನ್ನು ಉಲ್ಲೇಖಿಸಲಾಗಿದೆ. ನೀತಿಯ ಮಟ್ಟ ಅಧೋಗತಿಯಲ್ಲಿರುವಾಗ, ಮೇಲಧಿಕಾರಿಯ ಅಯೋಗ್ಯ ಅಪೇಕ್ಷೆಯನ್ನು ಪ್ರತಿಭಟಿಸುವ ಧೈರ್ಯ ಇಲ್ಲದಿರುವಾಗ, ನಿಯಂತ್ರಣಗಳು ದೇಶಕ್ಕೊಂದು ಗ್ರಹಚಾರವೇ ಸೈ. ನಾವು ನೈತಿಕ ವಸ್ತುಸ್ಥಿತಿಗಳನ್ನು ಎದುರಿಸಬೇಕು. ಆಹಾರ ಕೊರತೆ ಮತ್ತು ಔದ್ಯೋಗಿಕ ಪ್ರಗತಿಯ ಅಭಾವಕ್ಕಿಂತಲೂ ನೈತಿಕ ದಾರಿದ್ರ್ಯವೇ ದೊಡ್ಡದಾಗಿದೆ. ಆದರಿಂದ, ನಿಯಂತ್ರಣಗಳನ್ನು ರೂಪಿಸುವಾಗಲೂ ಉದ್ಯಮಕ್ಕೆ ಉತ್ತೇಜನವೀಯುವಾಗಲೂ ರಾಷ್ಟ್ರದ ನೈತಿಕ ವೃತ್ತಿಗೆ ಪ್ರಮುಖ ಸ್ಥಾನವನ್ನು ಕೊಡಬೇಕಲ್ಲದೆ, ನಿಯಂತ್ರಣಗಳಿರುವಾಗಲೇ ಅವನ್ನು ಆದಷ್ಟು ಬೇಗ ತೆಗೆದು ಹಾಕುವ ಉಪಾಯಗಳನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು.

೨೩-೧೧-೪೮ ಕಿ. ಘ. ಮಶ್ರುವಾಲಾ

ಅಖಿಲ ಭಾರತ ಸರ್ವಸೇವಾ ಸಂಘ

ಕಾಂಗ್ರೆಸ್ಸಿನ ರಾಜಕೀಯ ಕಾರ್ಯಕ್ಷೇತ್ರವು ಸ್ವಾತಂತ್ರ್ಯ ಸಂಪಾದನೆಯ ನಂತರ ಮುಕ್ತಾಯವಾದ್ದರಿಂದ ಇನ್ನು ಮುಂದೆ ಕಾಂಗ್ರೆಸ್ಸು ಲೋಕ ಸೇವಾ ಸಂಘವೆಂದು ಮಾರ್ಪಾಟು ಹೊಂದಬೇಕೆಂದು ಗಾಂಧೀಜಿ ಕಳೆದ ಫೆಬ್ರುವರಿಯಲ್ಲಿ ಸೂಚಿಸಿದ್ದರು. ಹಳ್ಳಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಜನಸಾಮಾನ್ಯರಿಗೆ ನಿಜವಾದ ಸ್ವರಾಜ್ಯವನ್ನು ದೊರಕಿಸಿ ಕೊಡಲು ಈ ಲೋಕ ಸೇವಾ ಸಂಘವು ಪ್ರಯತ್ನಿಸಬೇಕೆಂದೂ ಅವರು ಬಯಸಿದ್ದರು. ಗಾಂಧೀಜಿಯ ಆ ಬಯಕೆಯನ್ನು ಈಡೇರಿಸಲು ಮತ್ತು ಅವರಿಂದ ಸ್ಫೂರ್ತಿ ಪಡೆದು ಸಂಸ್ಥಾಪಿತವಾದ ಸಂಸ್ಥೆಗಳ ಕಾರ್ಯವನ್ನು ಕ್ರೋಡೀಕರಿಸಲು ಅಖಿಲ ಭಾರತ ಸರ್ವ ಸೇವಾ ಸಂಘವು ಸ್ಥಾಪಿಸಲಾಗಿದೆ. ಹತ್ತು ರಚನಾತ್ಮಕ ಸಂಸ್ಥೆಗಳ ಹತ್ತು ಪ್ರತಿನಿಧಿಗಳು ಮತ್ತು ೫ ಜನ ಸಹಾಯಕ ಸದಸ್ಯರು ಇದರಲ್ಲಿರುವರು.

೧) ಶ್ರೀ ಧೀರೇನ ಮುಜುಮುದಾರ ಅ. ಭಾ. ಚ. ಸಂಘ ೨) ಜೆ. ಸಿ. ಕುಮಾರಪ್ಪಾ ಅ. ಭಾ. ಗ್ರಾ. ಉ. ಸಂಘ ೩) ರಾಧಾಕೃಷ್ಣ ಬಜಾಜ ಗೋ ಸೇವಾ ಸಂಘ ೪) ಈ. ಡಬ್ಲ್ಯು. ಆರ್ಯನಾಯಕಂ ಹಿಂ. ತಾ. ಸಂಘ ೫) ಕಾಕಾ ಸಾಹೇಬ ಕಾಲೇಲಕರ ಹಿಂದುಸ್ತಾನೀ ಪ್ರಚಾರ ಸಭಾ ೬) ಜೀವನಜಿ ದೇಸಾಯಿ ನವಜೀವನ ಕಾರ್ಯಾಲಯ ೭) ಎ. ವಿ. ಥಕ್ಕರ ಹರಿಜನ ಸೇವಕ ಸಂಘ ೮) ಲಕ್ಷ್ಮೀದಾಸ ಶ್ರೀಕಾಂತ ಆದಿವಾಸಿ ಸಂಘ ೯) ಗುಲಜಾರಿಲಾಲ ನಂದಾ ಹಿಂ. ಮಜದೂರ ಸಂಘ ೧೦) ಡಾ. ದಿನಶಾ ಮೇಥಾ ನಿಸರ್ಗ ಚಿಕಿತ್ಸೆ ಸಂಸ್ಥೆ ಸಹಾಯಕ ಸದಸ್ಯರು- ೧೧) ಕೃಷ್ಣದಾಸ ಗಾಂಧಿ ೧೨) ಆಚಾರ್ಯ ಕೃಪಲಾನಿ ೧೩) ಆರ್. ಆರ್. ದಿವಾಕರ ೧೪) ಎಸ್. ರಾಮಸ್ವಾಮಿ ೧೫) ವಲ್ಲಭಭಾಯಿ ಪಟೇಲ. ನವಂಬರ ೧೫ಕ್ಕೆ ಕೂಡಿದ ಸಭೆಯಲ್ಲಿ ಘಟನೆಯನ್ನು ಸಿದ್ಧಪಡಿಸಲಾಯಿತು. ಸರದಾರ ವಲ್ಲಭಭಾಯರು ಕಾರ್ಯದರ್ಶಿಗಳಲ್ಲೊಬ್ಬರಿರುವರು. ರಾಧಾಕೃಷ್ಣ ಬಜಾಜರು ಕೋಶಾಧ್ಯಕ್ಷರು. ಸಮಿತಿಯ ಮಾಡತಕ್ಕ ಕಾರ್ಯಪಟ್ಟಿಯನ್ನು ಸಿದ್ಧಪಡಿಸಲು ಕಾಲೇಲಕರ, ರಾಧಾಕೃಷ್ಣ ಬಜಾಜ, ಕೃಷ್ಣದಾಸ ಗಾಂಧಿ ಮತ್ತು ಜೆ. ಸಿ. ಕುಮಾರಪ್ಪಾ ಇವರ ಉಪಸಮಿತಿಯು ನೇಮಿಸಲ್ಪಟ್ಟಿತು. ಈ ಸಂಸ್ಥೆಗೆ ಶಾಶ್ವತ ಅಧ್ಯಕ್ಷರಿಲ್ಲ; ಆಯಾ ಸಭೆಯ ಕಾಲಕ್ಕೆ ಸಭೆಯ ಅಧ್ಯಕ್ಷರನ್ನು ಆರಿಸಿಕೊಳ್ಳಲಾಗುವದು. ಸಂಘಕ್ಕೆ ಸಮರ್ಥ ಅಧ್ಯಕ್ಷನನ್ನು ಆರಿಸಿಕೊಂಡಿದ್ದಾದರೆ ಕಿರಿಯ ಕಾರ್ಯಕರ್ತರ ಪ್ರಗತಿಗೆ ಅವಕಾಶ ಸಿಕ್ಕುವದಿಲ್ಲವೆಂಬ ಅಭಿಪ್ರಾಯವು ಸಭೆಯಲ್ಲಿ ವ್ಯಕ್ತವಾದ್ದರಿಂದ ಕಾಯಂ ಅಧ್ಯಕ್ಷರನ್ನಾರಿಸಲಿಲ್ಲ. ಅಧಿಕಾರಿಗಳಲ್ಲಿಯೂ ಕಿರಿಯ ಕಾರ್ಯಕರ್ತರನ್ನು ಹೆಚ್ಚಾಗಿ ಆರಿಸಬೇಕೆಂದು ನಿರ್ಧರಿಸಲಾಯಿತು.

ಆಯಾ ರಚನಾತ್ಮಕ ಸಂಸ್ಥೆಗಳಿಗೆ ಈ ಸಂಸ್ಥೆಯು ಸಲಹೆ ಸೂಚನೆಗಳನ್ನು ಕೊಡುವದು. ಅವುಗಳ ಆಡಳಿತದಲ್ಲಿ ಕೈಹಾಕಬಯಸುವದಿಲ್ಲ. ತಾಂತ್ರಿಕ ಕೌಶಲವನ್ನು ಈ ಸಂಘಗಳಿಂದ ಪಡೆದು ಈ ಸಂಸ್ಥೆಯು ತನ್ನ ಸ್ವಂತ ಕೇಂದ್ರಗಳನ್ನು ಸ್ಥಾಪಿಸಿಕೊಳ್ಳುವದು. ಗಾಂಧೀಜಿಯವರು ನಿರ್ದೇಶಿಸಿದ ರೀತಿಯಲ್ಲಿ ಎಲ್ಲ ರಚನಾತ್ಮಕ ಶಾಖೆಗಳಲ್ಲಿ ಈ ಕೇಂದ್ರದ ಮುಖಾಂತರ ಕಾರ್ಯ ನಡೆಯುವದು. ಈ ಸಂಸ್ಥೆಗೆ ಎಲ್ಲ ಬಗೆಯ ಸಹಾಯ ಸಿಕ್ಕು ಅದು ಯಶಸ್ವಿಯಾಗಲೆಂದು ಹಾರೈಸುತ್ತೇವೆ. ಈ ಸಂಸ್ಥೆಗೆ ಆರ್ಥಿಕ ಸಹಾಯ ಮಾಡಬಯಸುವವರು ಕೋಶಾಧ್ಯಕ್ಷರಾದ ರಾಧಾಕೃಷ್ಣ ಬಜಾಜ ಗೋಪುರಿ ನಲವಾಡಿ ಪೋ. (ವರ್ಧಾ ಸಿ. ಪಿ.) ಈ ವಿಳಾಸಕ್ಕೆ ಬರೆಯಬೇಕು.

—ಜೆ. ಸಿ. ಕುಮಾರಪ್ಪಾ

ಭೀಕರ ಬಿರುಗಾಳಿ

ಮುಂಬಯಿ ನಗರಕ್ಕೆ ನವೆಂಬರ ತಾ. ೨೧ ನವೆಂಬರದಿಂದ ೩೦ ತಾಸುಗಳ ವರೆಗೆ ಬೀಸಿದ ಭೀಕರವಾದ ಬಿರುಗಾಳಿಗೆ ಗುರಿಯಾಯಿತು. ಗಾಳಿಯ ಒತ್ತಡವೂ ವೇಗವೂ ಇಷ್ಟೊಂದು ಅಸಾಧಾರಣವಾಗಿತ್ತು ಹವಾಮಾನ ತಿಳಿಸುವ ಮೊದಲು ಎಂದೂ ಇರಲಿಲ್ಲವೆಂದು ತಿಳಿದು ಬಂದಿದೆ. ಮುಂಬಯಿ ಮತ್ತು ಸುತ್ತಲಿನ ಪ್ರದೇಶದಲ್ಲಿಯೂ ಬಿತ್ತ ಬೆಳೆಗಳ ಹಾನಿ ಎಷ್ಟಾಗಿದೆ ಎಂಬುದರ ವಿವರವಿನ್ನೂ ಖಚಿತವಾಗಿ ತಿಳಿದಿಲ್ಲ. ಅಂದಿನ ರಾತ್ರಿ ಮನೆಯ ಮಾಡವೇ ಹಾರಿಹೋಗಿ ಪೂರಾ ನೆನೆದು ಹೌಹಾರಿಹೋದ ಮಕ್ಕಳುಮುದುಕರ ಸ್ತ್ರೀಪುರುಷರ ಬವಣೆಯನ್ನು ಅನುಭವಿಸಿದವರೇ ಅರಿಯಬಲ್ಲರು. ಈ ಕಷ್ಟಕ್ಕೆ ಗುರಿಯಾದವರು ಎಷ್ಟೋ ಜನರು ಯಾರೊಬ್ಬರು ಕೂಡ ಜಗತ್ತಿಗೆ ತಿಳಿಯದೆ ಹೋಗಬಹುದು. ನಿರಾಶ್ರಿತ ಶಿಬಿರದಲ್ಲಿದ್ದವರಂತೂ ಇದ್ದು ಬಿದ್ದುದ ಪೆಟ್ಟು ತಿಂದರು. ಕಳೆದ ಕಾಲಾಂತರದಿಂದ ಬಂದ ತಮ್ಮ ಮನೆಮಾರುಗಳನ್ನು ತೊರೆದು ಸ್ಥಾನಭ್ರಷ್ಟರಾಗಿ ಎಲ್ಲಾದರೂ ಬದುಕೋಣವೆಂದು ಪಾಕಿಸ್ತಾನದಿಂದ ಬಂದ ನಿರಾಶ್ರಿತರಾದ ಈ ಹತಭಾಗ್ಯರ ಬಗ್ಗೆ ದೇವರು ಮತ್ತೇಕೆ ಇಷ್ಟು ನಿಷ್ಕರುಣೆ ಮಾಡಿದನೋ? ವಿಭಜನೆಯ ತತ್ವವನ್ನು ಮುಂದರಿಸಿ ಲಕ್ಷಾಂತರ ಜನರನ್ನು ಗತಿಗೇಡು ಮಾಡಿದ ಪಾಕಿಸ್ತಾನದ ನಿರ್ಮಾಪಕರು ಎಲ್ಲಿಯೋ ಉಳಿದರು; ಆದರೆ ಮತ್ತೊಮ್ಮೆ ನಿಸರ್ಗದ ಕ್ರೋಧಕ್ಕೆ ತುತ್ತಾದವರು ನಿರಪರಾಧಿಗಳಾದ ನಿರಾಶ್ರಿತರು.

ಕಡೆತನಕ ಹಾನಿಗೊಳಗಾದವರ ಕಷ್ಟದ ಮುಂದೆ, ತಾತ್ಕಾಲಿಕವಾಗಿ, ವಾಹನಗಳ ಓಡಾಟ ನಿಂತದ್ದು, ಒಂದೆರಡು ದಿನ ಹಾಲು, ಆಹಾರಪದಾರ್ಥ, ದೀಪ ಇವೇ ಮೊದಲಾದವು ಹೊತ್ತಿಗೆ ಸರಿಯಾಗಿ ದೊರೆಯದ್ದು ಇವೆಲ್ಲ ತಪ್ಪಿಲ್ಲದ ಅನನುಕೂಲತೆಗಳೇ ಸರಿ. ಅವನ್ನು ಸುಲಭವಾಗಿ ಬದಿಗೆ ಸರಿಸಬಹುದು. ವಿತ್ತವನ್ನೂ ಪ್ರಾಣವನ್ನೂ ಕಳೆದುಕೊಂಡದ್ದು ಕೂಡ ಕಾಲಾಂತರದಲ್ಲಿ ಒಂದು ಮಸಕು ನೆನಪಾಗಿ ಉಳಿಯುವದು ಮತ್ತು ಜನರು ಹೊಸ ಪರಿಸ್ಥಿತಿಗೆ ಹೇಗೋ ಹೊಂದಿಕೊಂಡು ಬಿಡುವರು- ಇದಕ್ಕೂ ಹೆಚ್ಚಿನ ಗಂಡಾಂತರಗಳು ಮಾನವ ಕುಲಕ್ಕೆ ಬಂದುದುಂಟು ಮತ್ತು ಅದನ್ನು ಅನುಭವಿಸಿ ಮರೆತದ್ದೂ ಉಂಟು.

ಇಂತಹ ಭೀಕರ ಅನಾಹುತಕ್ಕೆ ಗುರಿಯಾದ ಜನರ ಶೀಲ ಸ್ವಭಾವಗಳ ಮೇಲಾದ ಆಘಾತವು ಹೆಚ್ಚು ವಿಚಾರಣೀಯವಾಗಿದೆ. ಇಂತಹ ಸಂದರ್ಭಗಳಲ್ಲಿ ಜನರು ತೋರುವ ಉದ್ವೇಗವೂ ಭಾವಪ್ರಕೋಪಗಳೂ ಅವುಗಳಿಂದಾಗಿ ಘಟಿಸುವ ಕೃತಿಗಳೂ ಮಾನವನ ಮನಸ್ಸಿನ ಮೇಲೆ, ಅವನ ಸ್ವಭಾವದ ಮೇಲೆ, ಸಂಸ್ಕಾರ ಸಂಸ್ಕೃತಿಯ ಮೇಲೆ ವೈಯುಕ್ತಿಕ ಹಾಗೂ ಸಾಮೂಹಿಕವಾಗಿ ಎಂದೂ ಮಸಕಾಗದ ಪ್ರಬಲ ಪರಿಣಾಮಗಳನ್ನು ಹುಟ್ಟಿಸಿಬಿಡುತ್ತವೆ. ಇಂತಹ ಅನಾಹುತಗಳ ಬರವಿನಿಂದ ಮಾನವ ಹೃದಯದಲ್ಲಿ ದೇವಾಂಶವು ಜಾಗೃತಬರುವದೋ ಅಥವಾ ದಾನವಾಂಶವು ತಾಂಡವವಾಡುವದೋ ಹೇಳಲು ಬಾರದು. ಸಾರ್ವತ್ರಿಕ ಅಥವಾ ವೈಯುಕ್ತಿಕ ಲಾಭಾಲಾಭಗಳು ಈ ಅಂಶವನ್ನೇ ಅವಲಂಬಿಸಿವೆ.

ಆದ್ದರಿಂದ, ಈ ಬಿರುಗಾಳಿಯ ಅನಾಹುತದಿಂದ ಉಂಟಾದ ಅವ್ಯವಸ್ಥೆಯನ್ನೂ ಅಸ್ವಸ್ಥತೆಯನ್ನೂ ಮುಂಬಯಿಯು ಅತಿ ಲಗುಬಗೆಯಿಂದ ಹಿಡಿತಕ್ಕೆ ತಂದು ಶಾಂತಿಸುವ್ಯವಸ್ಥೆಯನ್ನು ಕಾಯ್ದಿತು ಎಂಬ ಮಾತಿಗೆ ಅರಗೌರವ ತಲ್ಲದಿರಲಾರದು. ರಾಜಮಾರ್ಗಗಳಲ್ಲಿ ಬಿದ್ದ ಗಿಡ ಮರಗಳನ್ನೂ ಕಲ್ಲು ಮಣ್ಣಿನ ಗುಂಪೆಗಳನ್ನೂ ಕೂಡಲೆ ತೆಗೆದು ಓಡಾಡಲು ಬರುವಂತೆ ಮಾಡಲಾಯಿತು. ಮಂಗಳವಾರದ ಹೊತ್ತಿನಲ್ಲಿ ವಿದ್ಯುಚ್ಛಕ್ತಿ ಮತ್ತು ಟ್ರಾಮುಗಳ ತಂತಿಗಳನ್ನು ಸರಪಡಿಸಲಾಯ್ತು. ರೇಲ್ವೆಗಳು ಮರಳಿ ಯಥಾಪ್ರಕಾರವಾಗಿ ಓಡಾಡುವಂತೆ ಮಾಡಲಾಯ್ತು. ಸಮುದ್ರದಲ್ಲಿಯೋ ಮಣ್ಣಿನ ಗುಂಪೆಯಲ್ಲಿಯೋ ಮರಗಳ ಕೆಳಗಿನ ತೆರೆಗಳಲ್ಲಿಯೋ ಸಿಕ್ಕುಬಿದ್ದ ಜನರನ್ನು ಕೂಡಲೆ ಹೊರತೆಗೆದು ಪ್ರಾಣದಾನ ಮಾಡಲಾಯ್ತು. ಇದೆಲ್ಲಕ್ಕೂ ಕಳಶವಿಟ್ಟಂತೆ ಮಾತೆಂದರೆ ಮೇಲ್ಕಾಣಿಸಿದ ಘಟನೆಗಳೆಲ್ಲ ಬಿರುಗಾಳಿಯ ಸುಳಿಯು ಇನ್ನೂ ಜೋರಾಗಿ ಬೀಸುತ್ತಿರುವಾಗಲೇ ನಡೆದವೆಂಬುದು. ಇದರಿಂದ ಮಾನವನ ಅಸದೃಶ ಸಾಹಸವೂ ಧೈರ್ಯವೂ ವ್ಯಕ್ತವಾಗುವದಲ್ಲದೆ ಇದೆಲ್ಲ ಮಾನವನ ಅಪಾರ ಪ್ರತಿಭೆಯ ಆಳವನ್ನು ಅಳೆದು ತೋರಿಸುವಂತಿದೆ.

[೧೦ನೆಯ ಪುಟಕ್ಕೆ]

ಭೀಕರ ಬಿರುಗಾಳಿ

[೯ ನೆಯ ಪುಟದಿಂದ]

ಈ ಸಂದರ್ಭದಲ್ಲಿ ಮೈಸೂರಿನ ಮಿಲಿಟರಿ ನಾಗರಿಕ ಮತ್ತು ಸೈನಿಕ ಅಧಿಕಾರಿಗಳೂ ಅವರವರ ಅನುಯಾಯಿಗಳೂ ನಿಜವಾಗಿ ಅಭಿನಂದನಾರ್ಹರಾಗಿದ್ದಾರೆ. ಅವರೆಲ್ಲರಿಗೂ ನಮ್ಮ ಕೃತಜ್ಞತೆ ಪ್ರಶಂಸೆಗಳು. ಇದರಂತೆ ಮುಂಬಯಿಯ ಆಸಂಖ್ಯಾತ ಸ್ತ್ರೀಪುರುಷರು ಗಾಳಿಮಳೆಗಳಾಗ ತಾವು ಸುರಕ್ಷಿತವಾಗಿದ್ದರೂ ಅಪಾಯಕ್ಕೆ ಗುರಿಯಾದವರನ್ನು ಬದುಕಿಸಲು, ಮುಳ್ಳಿನಿಂದ ಮತ್ತು ಮನೆಯಲ್ಲಿ ತೊಳ್ಳ ನೀರಿನಿಂದ ಜನರನ್ನು ಹೊರದೆಗೆಯಲು ಆಶ್ರಯ ಅನ್ನ ನೀರು ಒದಗಿಸಲು, ಮನೆಬಿಟ್ಟು ಹೊರಬಿದ್ದು ಎಡಗೈಯಲ್ಲಿ ಜೀವಹಿಡಿದು ಓಡಾಡಿದರು. ಇವರನ್ನು ಎಷ್ಟು ಅಭಿನಂದಿಸಿದರೂ ಎಷ್ಟು ಹೊಗಳಿದರೂ ಕಡಿಮೆಯೇ. ಮುಂಬಯಿಯ ಒಂದು ಉಪನಗರದಲ್ಲಿ ಸ್ತ್ರೀ ಸ್ವಯಂಸೇವಕಿಯರು ಮನೆಮನೆಗೆ ಅನ್ನ ಎತ್ತಿ ಸೋಮವಾರ ಮಂಗಳವಾರ ಎರಡುದಿನ ೧೫೦೦ ಜನರ ಹೊಟ್ಟೆಗೆ ಹಾಕಿದರೆಂದು ವರದಿಯಾಗಿದೆ. ಇನ್ನುಳಿದ ಭಾಗಗಳಲ್ಲಿಯೂ ಇಂತಹ ಸತ್ಕಾರ್ಯಗಳು ನಡೆದಿರಬೇಕು. ಸಾರ್ವಜನಿಕ ಮತ್ತು ಲೋಕದ ಗಮನಕ್ಕೆ ಇವು ಬಂದಿಹೊ ಇಲ್ಲವೊ ಎಂಬುದು ದೊಡ್ಡದಲ್ಲ. ಒಂದು ಕಠಿಣ ಪ್ರಸಂಗದಲ್ಲಿ ನಾವು ಹಿಂದೆಗೆಯದೆ ಮಾನವಕುಲಕ್ಕೆ ಶೋಭಿಸುವಂತೆ ಮಾನವಕಲ್ಯಾಣಕ್ಕಾಗಿ ದುಡಿದೆವು ಎಂಬ ನೈತಿಕ ಭಾವನೆಯಿಂದ ಉಂಟಾಗುವ ಆತ್ಮತೃಪ್ತಿ ದೊಡ್ಡದು. ಅದೇ ಇದಕ್ಕೆ ದೊರೆಯಬೇಕಾದ ಹೆಚ್ಚಿನ ಪ್ರತಿಫಲ.

ಇನ್ನು ಇಂತಹ ನೈತಿಕ ಅಪಘಾತಕಾಲದಲ್ಲಿ ಮೇಲ್ಕಾಣಿಸಿದ ಉದಾತ್ತತೆಗೆ ವ್ಯತ್ಯಯಬರುವಂತೆ ವರ್ತಿಸಿ ಮಾನವನು ಅಧಃಪಾತಹೊಂದುವ ಸಂಭವವೂ ಇದೆ. ಸುತ್ತಲೂ ಸಂಕಟಕವಿದ್ದಾಗ ಸ್ವಾರ್ಥಿಗಳು ಅದರ ದುರ್ಲಾಭಪಡೆದು ಸ್ವಪ್ರತಿಷ್ಠೆಗಾಗಿಯೋ ಸ್ವೋನ್ನತಿಗಾಗಿಯೋ ಹಣಗಳಿಸುವದು ಅಸಂಭವವೇನಲ್ಲ. ಇಂತಹ ಸಮಯ ಸಾಧಿಸಿ ದುರುಳರು ಕಳವು ಸುಲಿಗೆಗೆ ಹಾದರಕ್ಕೆ ಎಳಸಬಹುದು. ವ್ಯಾಪಾರಿಗಳು ಇದೇ ಸಂಧಿಯೆಂದು ಆಹಾರ ಪದಾರ್ಥಗಳಿಗೆ ಮಿತಿಮೀರಿದ ಬೆಲೆ ಬೋಳಬಹುದು. ದೀಪವಿಲ್ಲದೆ ಕತ್ತಲಲ್ಲಿ ಗೋಳಾಡುವಾಗ ಅದು ಎಲ್ಲರಿಗೂ ಬೇಕಾದಾಗ ಒಂದೊಂದು ಮೇಣಬತ್ತಿಗೆ ಸಿಕ್ಕಾಬಟ್ಟೆ ಬೆಲೆ ತೆಗೆದುಕೊಳ್ಳಬಹುದು. ಸಮಾಜಘಾತಕವಾದ ಇಂತಹ ಕೀಳು ಪ್ರವೃತ್ತಿಗಳು ಜನರಲ್ಲಿ ತಲೆದೋರಿದರೆ ಅದು ಮಾನವಕುಲಕ್ಕೆ ಚಿರ ಅಘಾತವೆಂದೇ ಹೇಳಬೇಕು. ಇದು ಮಾನವನ ಲೋಲುಪತೆಯನ್ನು ವ್ಯಕ್ತಗೊಳಿಸುತ್ತದೆ. ಇದಕ್ಕಾಗಿ ಏನನ್ನು ಮಾಡಲೂ ಮನುಷ್ಯನು ಹೇಸದಾಗುತ್ತಾನೆ.

“ಹತ್ವಾರ್ಥ ಕಾಮಾಂಸ್ತು ಗುರೂನಿಹೈವ ಭುಂಜೀಯ ಭೋಗಾನ್ ರುಧಿರಪ್ರದಿಗ್ಧಾನ್” ಅಂದರೆ, “ನಾವು ಇಲ್ಲಿ ನಮ್ಮ ಗುರುಹಿರಿಯರನ್ನು ಕೊಂದು ಅವರ ರಕ್ತದಿಂದ ನಾವು ಆರೋಗ್ಯವನ್ನೂ ಭಾಗ್ಯವನ್ನೂ ಭೋಗಿಸುತ್ತೇವೆ” ಎಂಬುದಾಗಿ ಈ ಲೋಲುಪವೃತ್ತಿಯು ಘಂಟಾಘೋಷವಾಗಿ ಹೇಳಲು ಹೇಸುವದಿಲ್ಲ. ಇದು ಖಂಡಿತವಾಗಿ ಆಸುರೀವೃತ್ತಿ. ಇದು ವಿನಾಶಕಾರಿಯಾಗಿದ್ದು ಸಮಾಜಕ್ಕೆ ಕಂಟಕಪ್ರಾಯವಾಗಿರುವದಲ್ಲದೆ ಕೊನೆಗೆ ಈ ಪ್ರವೃತ್ತಿಗೆ ತಮ್ಮನ್ನೇ ಆಹುತಿಕೊಡುವ ಪ್ರಸಂಗವೇ ಬರುವದು.

ಸಾರ್ವತ್ರಿಕ ಉನ್ನತಿಯೋ ಅವನತಿಯೋ ಬಂದೊದಗಿದಾಗ ಮನುಷ್ಯನಿಗೆ ಅನುಸರಿಸಲು ಎರಡು ಮಾರ್ಗಗಳಿವೆ. ಸುಖದ ಮಧ್ಯದಲ್ಲಿದ್ದಾಗ ತನಗಿಂತ ಮೊದಲು ಉಳಿದವರು ಅದನ್ನು ಭೋಗಿಸಲಿ ಎನ್ನುವದು; ಮತ್ತು ಅದೇ ದುಃಖ ಒದಗಿದಾಗ ಅದನ್ನು ತೊಲಗಿಸಲು ತಾನೇ ಎಲ್ಲರಿಗಿಂತ ಮೊದಲು ನುಗ್ಗಿ ಹೋಗಿ ಉಳಿದವರನ್ನು ಸಂರಕ್ಷಿಸುವದು. ಇದಕ್ಕನ್ನಬೇಕು ಮಾನವತೆಯೆಂದು—ದೈವೀಪ್ರವೃತ್ತಿಯೆಂದು. ತದ್ವಿರುದ್ಧವಾಗಿ ಸುಖ ಬಂದಾಗ ತಾನೇ ಮುನ್ನುಗ್ಗುವದು ಮತ್ತು ದುಃಖ ಒದಗಿದಾಗ ಹಿಂಜರಿದು ಬದುಕುವದಲ್ಲದೆ ಅನ್ಯರ ದುಃಖದಿಂದ ತಾನು ಲಾಭಹೊಂದಬೇಕೆಂದು ಹವಣಿಸುವದು; ಇದು ಪಿಶಾಚವೃತ್ತಿ. ಸಂಕಟ ಒದಗಿದಾಗಲೂ ಅಚಲರಾಗಿ ದೈವೀವೃತ್ತಿಯನ್ನು ತಳೆದ ಧೀರರಿಗೆ ಅನಂತಾನಂತ ವಂದನೆಗಳು

ಮುಂಬಯಿ ೨೭—೧೧—೪೮

—ಕಿಶೋರಲಾಲ ಮಶ್ರುವಾಲಾ

ತೆರಿಗೆಯನ್ನು ನಾವೇಕೆ ತೆರುತ್ತೇವೆ?

ಸರಕಾರವೆಂದರೆ ತಾವೇ ಮಾಡುವದಕ್ಕಿಂತ ಚೆನ್ನಾಗಿ ಜನರಿಗೆ ಅವರ ಕೆಲಸಗಳನ್ನು ಮಾಡಲು ನೆರವಾಗುವ ಒಂದು ಪ್ರತಿನಿಧಿ. ತಮ್ಮ ಸರಕಾರಕ್ಕಿಂತ ತಾವೇ ಆ ಕೆಲಸವನ್ನು ಚೆನ್ನಾಗಿ ಮಾಡಲು ಜನರು ಶಕ್ತರಿದ್ದರೆ ಅಂಥ ಸರಕಾರವನ್ನು ಇಟ್ಟುಕೊಂಡಿರುವುದರಲ್ಲಿ ಯಾವ ಅರ್ಥವೂ ಇಲ್ಲ.

ಈ ಕೆಲಸ ಮಾಡಲು ತಕ್ಕವನ್ನಾಗಿ ಮಾಡಲು ಸರಕಾರಕ್ಕೆ ತೆರಿಗೆಯನ್ನು ತೆರಲಾಗುತ್ತಿದೆ. ತೆರಿಗೆ ಕೊಡುವ ಬಾಧ್ಯತೆಯ ಜೊತೆಗೇ ಸರಕಾರ ಜನರಿಗಾಗಿ ಕೆಲಸ ಮಾಡಬೇಕೆಂದು ಆಶಿಸುವ ಹಕ್ಕು ಜನರಿಗಿದೆ. ಸರಕಾರದ ಕಡೆಯಿಂದ ಹೇಳುವದಾದರೆ, ಅದಕ್ಕಿರುವ ತೆರಿಗೆ ವಸೂಲಿನ ಹಕ್ಕು ಆ ತೆರಿಗೆಯ ಹಣವನ್ನು ತೆತ್ತವನ ಪ್ರಯೋಜನಕ್ಕಾಗಿ ಖರ್ಚು ಮಾಡುವ ಬಾಧ್ಯತೆಯನ್ನೂ ತನ್ನ ಜೊತೆಗೆ ಹೊರಿಸುತ್ತದೆ.

ಸಾಮ್ರಾಜ್ಯಶಾಹಿಯಲ್ಲಿ ಜನರ ಬಗ್ಗೆ ಮಾಡಬೇಕಾದ ಬಾಧ್ಯತೆಯ ಕೆಲಸಕ್ಕೆ ನ್ಯಾಯವಾದ ಮಾನ್ಯತೆ ದೊರಕಲಿಲ್ಲ ಆದರೆ ಈಗ ಜನಪ್ರಿಯವೆಂದು ಹೇಳಿಕೊಳ್ಳುವ ಸರಕಾರಗಳು ನಮ್ಮಲ್ಲಿರುವವಾಗ ಅವು ಜನರ ಹಿತಸಂಬಂಧಗಳಿಗೆ ಪೋಷಕಗಳೆನಿಸಬೇಕು.

ಇದಕ್ಕೆ ಉದಾಹರಣೆಯೆಂಧರೆ— ಸರಕಾರವು ರೈತನಿಗೆ ನೀರೊದಗಿಸಬೇಕು. ಭೂಮಿ ಸಾರಗೆಡದಂತೆ ನೋಡಿಕೊಳ್ಳಬೇಕು, ಹವಾಮಾನದ ಬದಲಾವಣೆಗಳನ್ನು ಮುಂಗಡವಾಗಿ ಪ್ರಕಟಿಸುವುದು ಮತ್ತು ಪದಾರ್ಥಗಳ ಉತ್ಪಾದನ ಮತ್ತು ವಿತರಣಗಳಿಗಾಗಿ ಮುಂತಾದವುಗಳಿಗಾಗಿ ಸೌಲಭ್ಯಗಳನ್ನು ದೊರಕಿಸಿ ಕೊಡುವುದು. ಬಾಳೆಯನ್ನು ಬೆಳೆಯಬೇಕಾದರೆ, ಅವಶ್ಯ ಬಿದ್ದರೆ, ಬೆಳೆಗಾರರಿಗೆ ಸರಕಾರವು ಬಾಳೆಯ ಹಿಳ್ಳ (ಮರಿ) ಗಳನ್ನು ಒದಗಿಸಬೇಕು. ಇದೇ ಮೇರೆಗೆ ಇತರ ವಿಷಯಗಳಲ್ಲೂ ಸರಕಾರ ನೆರವೀಯಬೇಕು.

ಆದುದರಿಂದ ಗ್ರಾಮೋದ್ಯಮಗಳಲ್ಲಿ ಇಂಥದೇ ಸಹಾಯವನ್ನು ಅವುಗಳ ಉತ್ಪಾದನ ಮತ್ತು ವಿತರಣದ ಕಾರ್ಯದಲ್ಲಿ ಕೊಡಬೇಕು. ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಅವುಗಳ ಖರೀಗಾರನೂ ಆಗಬೇಕು. ಈ ಮಾರ್ಗದಿಂದ ಮಾತ್ರ ಒಂದೀ ಸರಕಾರವು ಜನರ ಆರ್ಥಿಕ ಜೀವನಕ್ಕೆ ಕಾರ್ಯತಃ ನೆರವಾಗಬಲ್ಲುದು. ಇದೇ ಸಾರ್ವಜನಿಕ ಹಣಕಾಸಿನ ವ್ಯವಹಾರದ ನಿಜೋದ್ದೇಶ. ಜನರಿಗೆ ಈ ನೆರವನ್ನು ಒದಗಿಸದ ಸರಕಾರಕ್ಕೆ ತೆರಿಗೆ ವಸೂಲು ಮಾಡಲು ಯಾವ ನೈತಿಕ ಆಧಾರವೂ ಇಲ್ಲ, ಜನರಿಗಾದರೂ ತೆರಿಗೆ ಕೊಡಲು ಯಾವ ನೈತಿಕ ಬಾಧ್ಯತೆಯೂ ಇಲ್ಲ. ತಾನು ತೆತ್ತ ತೆರಿಗೆಗೆ ಬದಲಾಗಿ ಸರಕಾರವೇನು ಕೊಟ್ಟಿದೆ ಎಂಬದನ್ನು ಕೇಳುವ ಹಕ್ಕು ನಾಗರಿಕನಿಗಿದೆ.

ಅನೇಕ ಪ್ರಾಂತಗಳಲ್ಲಿ ಮನೆಕೈಗಾರಿಕೆಯ ಸಾಮಾನುಗಳ ಮೇಲೂ ಮಾರಾಟಕರ ಹೇರಲಾಗಿದೆ. ಆದರೆ ಸರಕಾರ ಆ ಕೈಗಾರಿಕೆಗಳಿಗೆ ಯಾವ ನೆರವನ್ನೂ ಸಲ್ಲಿಸುತ್ತಿಲ್ಲ ಮತ್ತು ಆ ಸಾಮಾನುಗಳ ಬದಲು ಅದು ಪರದೇಶದ ಇಲ್ಲವೆ ಗಿರಣಿಯಲ್ಲಿ ತಯಾರಾದ ಸಾಮಾನುಗಳನ್ನು ಬಳಸುತ್ತದೆ. ಒಂದು ಸರಕಾರವು ಕೈಕಾಗದವನ್ನು ಬಳಸದಿರುವುದಲ್ಲದೆ ಆ ಕಾಗದದ ಉತ್ಪಾದನೆಗೆ ಯಾವ ಸಹಾಯವನ್ನೂ ಮಾಡದಿರುವಾಗ ಕೈಕಾಗದದ ಮೇಲೆ ಮಾರಾಟಕರ ಹೇರಲು ಆ ಸರಕಾರಕ್ಕೆ ಯಾವ ಹಕ್ಕೂ ಇಲ್ಲ. ಹಾಗೆ ತೆರಿಗೆ ಹೇರಿದರೆ ಅದು ಅನೈತಿಕವಷ್ಟೇ ಅಲ್ಲದೆ, ಜನರ ಆರ್ಥಿಕ ಜೀವನಕ್ಕೊಂದು ವಿಘಾತಕವೂ ಆಗುತ್ತದೆ. ಲೋಕಸೇವಾಕಾರ್ಯಗಳಲ್ಲೂ ಅಷ್ಟೇ: ಹಳ್ಳಿಗಳಿಗೆ ಸರಿಯಾದ ಪಾಲು ದೊರೆಯುವುದಿಲ್ಲ. ಕೊಳೆಗೆ ನೊಣ ಮುತ್ತುವಂತೆ ಮಂತ್ರಿಗಳ ಸುತ್ತ ಪೋಲೀಸರು ಕವಿಯುತ್ತಾರೆ. ಆದರೆ ಹಳ್ಳಿಗಾಡುಗಳಲ್ಲಾಗಲಿ ಚಿಕ್ಕಪಟ್ಟಣಗಳಲ್ಲಾಗಲಿ, ಜನರ ರಕ್ಷಣೆಗೆ ಅಥವಾ ಕೇಡನ್ನು ತಪ್ಪಿಸುವದಕ್ಕೆಂದು ಅವರು ಬರುವುದು ಕಾಣಸಿಗದು. ಪೋಲೀಸರು ಮಂತ್ರಿಗಳು ಸಂಬಳಕೊಟ್ಟು ಇಟ್ಟುಕೊಂಡ ಆಳುಗಳಲ್ಲ; ಅವರನ್ನು ಜನರ ರಕ್ಷಣೆಗಾಗಿ ಇಡಲಾಗಿದೆ. ಜನರು ತೆತ್ತ ಹಣದಿಂದ ಅವರಿಗೆ ಸಂಬಳ ಕೊಡುತ್ತಾರೆ. ಅವರ ನಿಜವಾದ ಯಜಮಾನರೆನಿಸುವ ತೆರಿಗೆ ತೆತ್ತವರ ಸೇವೆ ಮಾಡುವುದೇ ಅವರ ಪ್ರಜ್ಞಾನ ಕರ್ತವ್ಯವಲ್ಲದೆ, ತಮ್ಮ ಸಹೋದ್ಯೋಗಿಗಳಾದ ಮಂತ್ರಿಗಳ ಸುತ್ತ ನೇತಾಡುತ್ತಿರುವುದಲ್ಲ.

ನಾಗರಿಕರಿಗೆ ತಿಳಿವಳಿಕೆ ಉಂಟಾಗುತ್ತ ಹೋದಹಾಗೆ ಪ್ರಜಾಪ್ರಭುತ್ವದಲ್ಲಿ ಅವಶ್ಯಕವಾದ ಈ ವ್ಯವಸ್ಥೆಗಳು ಮಾಡಲ್ಪಡುವವು; ಮತ್ತು ಸರಕಾರವು ಜನರ ಸಹಾಯಕವೆನಿಸುವುದಲ್ಲದೆ, ಅವರ ಉತ್ಪಾದನೆಯನ್ನು ಉಂಟುಬಡುಕವ ಪರವುಷ್ಯವೆನಿಸದು ಎಂದು ಆಶಿಸುತ್ತೇವೆ. ಅಲ್ಲಿಯವರೆಗೆ ಸರಕಾರದ ವೆಚ್ಚದ ಲೆಕ್ಕ ತೋರಿಸುವಂತೆ ಅದು ತನ್ನ ದೊಡ್ಡ ಹೊಣೆಗಳನ್ನು ಅರಿತು ಅವನ್ನು ನಿರ್ವಹಿಸಲು ಹೆಣಗುತ್ತಿರುವುದರಿಂದ ಎಲ್ಲ ಗೃಹ ಗ್ರಾಮೋದ್ಯಮಗಳ ಮೇಲೂ ಮಾರಾಟಕರ ಹೇರಬಾರದು. ಹಾಗೆ ಹೇರುವುದಾದರೆ ಅದು, ಈ ಉದ್ಯಮಗಳನ್ನು ನಾಶಮಾಡುವುದು ತನ್ನ ಕರ್ತವ್ಯವೆಂದು ಸರಕಾರ ನಿರ್ಧರಿಸಿದಾಗ ಮಾತ್ರ. ವಿಚಾರ ಮಾಡಿ ನೋಡಿದರೆ ಬಹಳ ಕಾಲದಿಂದ ಇದನ್ನು ಅಲಕ್ಷ್ಯ ಮಾಡಲಾಗಿದೆ ಮತ್ತು ಬ್ರಿಟಿಶರ ಆಡಳಿತೆಯಲ್ಲಿ ಈ ಕೈಗಾರಿಕೆಗಳನ್ನು ಕ್ರಮೇಣ ಒರಸಿತೆಗೆಯುತ್ತ ಬರಲಾಗಿದೆ. ನಮ್ಮ ಈಗ ರಾಷ್ಟ್ರೀಯರೇ ನಡೆಸುವ ಸರಕಾರಗಳಿರುವಾಗ ನಮಗೆ ಆ ಬಗ್ಗೆ ಪರಿಹಾರ ಪಡೆಯುವ ಹಕ್ಕಿಲ್ಲವೆ?

-ಜೆ. ಸಿ. ಕುಮಾರಪ್ಪ

ನಿಯಂತ್ರಣಗಳ ನೀತಿಪಾತಕ ಪರಿಣಾಮಗಳು

ಒಬ್ಬ ಪತ್ರಕಾರ ಬರೆಯುತ್ತಾನೆ: ನಾನು ಒಬ್ಬ ಒಕ್ಕಲಿಗನೂ ಸಮಾಜಸೇವಕನೂ ಆಗಿದ್ದೇನೆ. ನನ್ನ ಸಹೋದ್ಯೋಗಿಗಳೂ ಸಹಕೃಷಿಕರೂ ನಾನೂ ಒಮ್ಮೆ ಮಹಾತ್ಮರ ಅವಿಶ್ರಾಂತ ಪ್ರಯತ್ನದಿಂದ ಕಿತ್ತೊಗೆಯಲಾದ ನಿಯಂತ್ರಣಗಳ ಆಳಿಕೆಯನ್ನು ಪುನಃ ಹೋರುವದು ಬಹಳ ನೀತಿಪಾತಕವೆನಿಸುವದು. ಅದರಿಂದ ಪ್ರಾಮಾಣಿಕತೆಯ ಮತ್ತು ನಾಗರಿಕ ಕರ್ತವ್ಯಗಳ ಮಟ್ಟ ಕೆಳಗಿಳಿಯುವದು. ಅದಕ್ಕೆ ಇದೊಂದು ಉದಾಹರಣೆ.

“ಮೊನ್ನೆ ಒಬ್ಬ ರೈತ ಅವಶ್ಯವಿರುವಷ್ಟು ಧಾನ್ಯಗಳನ್ನು ಕೇಖರಿಸಿಡುವ ಮುಂತಾದ ಕೆಲಸಗಳಿಗೆ ಅಪ್ಪಣೆಚೀಟಿ ಪಡೆಯುವದರ ಸಲುವಾಗಿ ತನ್ನ ಕುಟುಂಬದವರ ಹೆಸರುಗಳನ್ನೂ ಇತರ ಸಂಗತಿಗಳನ್ನೂ ದಾಖಲೆಮಾಡಿಸಲು ನಿಯಂತ್ರಣದ ಕಚೇರಿಗೆ ಹೋದನು ಮಿಕ್ಕೆಲ್ಲ ಸಂಗತಿಗಳನ್ನು ಹೇಳಿದ ಬಳಿಕ ತನ್ನ ಮಗುವಿಗೆ ೯ ವರ್ಷ ವಯಸ್ಸು ಎಂದು ಹೇಳಿದನು. ಅದರ ವಯಸ್ಸು ೬ ವರ್ಷವೆಂಬುದು ನನಗೆ ಗೊತ್ತಿತ್ತು. ಹುಡುಗನನ್ನು ಸಾಲೆಗೆ ಕಳಿಸದಿರುವಾಗ ಅವನ ವಯಸ್ಸು ಒಂಬತ್ತೆಂದು ಹೇಗೆ ಹೇಳುವೆಯೆಂದು ನಾನು ಕೇಳಿದೆ. ಅನಾರೋಗ್ಯದ ದೆಸೆಯಿಂದ ಹುಡುಗನು ಅವನ ವಯಸ್ಸಿಗಿಂತ ಚಿಕ್ಕವನಾಗಿ ಕಾಣುತ್ತಾನೆ ಎಂದು ಅವನು ಉತ್ತರ ಕೊಟ್ಟನು. ಇದೆಲ್ಲ ಬರೀ ಮಿಥ್ಯಾಲಾಪ. ನಿಜವಾದ ಸಂಗತಿಯೆಂದರೆ, ೬ ವರ್ಷದ ಮಗುವಿನ ಪಾಲಿಗಿಂತ ೯ ವರ್ಷದ ಮಗುವಿನ ಪಾಲು ವರ್ಷಕ್ಕೆ ಮೂರಮಣ ಇಪ್ಪತ್ತುನಾಲ್ಕು ಸೇರುಗಳಷ್ಟು ಹೆಚ್ಚಾಗುತ್ತದೆ. ನಿಯಂತ್ರಣದ ನಿಯಮಗಳು ಬಿಡುವುದಕ್ಕಿಂತ ಹೆಚ್ಚು ಆಹಾರವನ್ನು ಕೊಡಿಡಬೇಕೆಂದು ಅವನು ಬಯಸಿದನು, ಏಕೆಂದರೆ, ಕಷ್ಟಪಟ್ಟು ದುಡಿವ ರೈತನಿಗೆ ನಿಯಮಗಳು ಬಿಡುವ ಆಹಾರಾಂಶ ಬೇಕಾದ್ದಕ್ಕಿಂತ ಖಂಡಿತವಾಗಿಯೂ ಬಹಳ ಕಡಿಮೆಯಿದೆ. ಒಬ್ಬ ರೈತನ ಕುಟುಂಬದಲ್ಲಿ ತಿಂಗಳೊಂದಕ್ಕೆ ಗಂಡಸಿಗೆ ೩೦ ಮತ್ತು ಹೆಂಗಸಿಗೆ ೨೫ ಸೇರುಗಳಿಗಿಂತ ಹೆಚ್ಚು ಆಹಾರಧಾನ್ಯ ಆಗತ್ಯವಿದೆ. ತನ್ನ ಕಣಜದಲ್ಲಿ ದವಸವಿರುವಾಗ ಬೆಳೆಗಾರನು ತನಗೆ ಇದಿಮೂಟಿ ಕೊಡದ ನಿಯಮಗಳನ್ನು ಉಲ್ಲಂಘಿಸಲು ಹಾದಿ ಹುಡುಕುವುದು ಸ್ವಾಭಾವಿಕವಾಗಿಯೇ ಇದೆ.”

ಸ್ವತಃ ಸೀದಾ ಅಧಿಕಾರಿಗಳೇ ಅಪ್ರಾಮಾಣಿಕತೆಯಿಂದಲೂ ವಂಚಕತೆಯಿಂದಲೂ ವರ್ತಿಸುವುದಕ್ಕೆ ಅನೇಕ ಉದಾಹರಣೆಗಳಿವೆ. ಅದಕ್ಕೆ ಇದು ನಿದರ್ಶನ; ಅನೇಕ ಕಡೆಗಳಲ್ಲಿ ಕಾಳನ್ನು ತ-ಗುವುದರ ಬದಲು ಅಳೆಯಲಾಗುತ್ತದೆ. ಏಕೆಂದರೆ ಅದರಿಂದ ಅಂಗಡಿಗೆ ಅಲ್ಪಸ್ವಲ್ಪ ಉಳಿತಾಯವಾಗುತ್ತದೆ; ಬೆಲ್ಲವನ್ನು ತೂಗಿದರೆ ತಕ್ಕಡಿಯ ತಟ್ಟೆಗಳಿಗೆ ಸ್ವಲ್ಪ ಅಂಟಿಕೊಳ್ಳುತ್ತದೆ. ಸಕ್ಕರೆಯ ವ್ಯಾಪಾರದಲ್ಲೂ ಅಂಥದೇ ಮೋಸವನ್ನು ಮಾಡುತ್ತಾರೆ; ಬೆರಕೆ ಕೂಡ ಮಾಡುತ್ತಾರೆಂದು ನಾನು ಕೇಳಿದ್ದೇನೆ

ಈ ಎಲ್ಲ ದುಃಖಗಳೂ ಸಂಪೂರ್ಣ ಸತ್ಯವೆಂದಾದರೂ ಅವೆಲ್ಲವೂ ನಿಯಂತ್ರಣಗಳು ಬರುವುದಕ್ಕಿಂತ ಮೊದಲೂ ಇದ್ದವು. ಅವುಗಳಲ್ಲಿ ಒಂದೂ ನಿಯಂತ್ರಣಗಳ ಕಚೇರಿ ಹೊಸದಾಗಿ ನಿರ್ಮಿಸಿದ್ದಲ್ಲ. ಅಂಥ ಸಂಗತಿ ಇದ್ದದ್ದೇ ಆದರೆ ಅದನ್ನು ಪೇಟೆಯ ರೂಢಿಯಿಂದ ಕಂಡು ಕಲಿತದ್ದಾಗಿರುತ್ತದೆ. ಇದು ಸತ್ಯ ಆದರೆ ಅದರಲ್ಲಿ ಒಂದು ವ್ಯತ್ಯಾಸವಿದೆ; ನಿಯಂತ್ರಣವಿಲ್ಲದಾಗ, ಬೇಕಾದ ಅಂಗಡಿಗೆ ಹೋಗಿ ತನಗೆ ಬೇಕಾದ ಬಗೆಯ ಸಾಮಾನುಗಳನ್ನು ಬೇಕಾದಷ್ಟು ಕೊಳ್ಳಲೂ ಅವುಗಳ ಬೆಲೆಯ ಬಗ್ಗೆ ಚೌಕಶಿ ಮಾಡಲೂ ಗಿರಾಕಿಗೆ ಸ್ವಾತಂತ್ರ್ಯವಿದೆ. ಅದರಲ್ಲಿ ಸರಕಾರೀ ಅಧಿಕಾರಿಗಳಿಗಿಂತ ಖಾಸಗಿ ವ್ಯಾಪಾರಿಯ ಮೇಲೆ ದೂರು ತರುವುದು ಸುಲಭವೆನಿಸುವುದು. ನಿಯಂತ್ರಣಗಳು ಮಾರುವವರಿಗೆ ಸರಕುಗಳ ಗುತ್ತಿಗೆ ಕೊಟ್ಟುಬಿಡುವುವು; ಆದರಲ್ಲಿ ಗಿರಾಕಿಯ ಮೇಲೆ ಎಲ್ಲ ನಿಯಂತ್ರಣಗಳೂ ಮಾರಾಟಗಾರರ ಮೇಲೆ ಅನಿಯಂತ್ರಣವೂ ಇರುವಂತಾಗುತ್ತದೆ. ಕೈಯಲ್ಲಿ ಶಿಲುಕಿರುವಾಗಲೂ ಸೀದಾ ಕಾರಕೂನನು ‘ಶಿಲುಕು ಮುಗಿದುಹೋಗಿದೆ, ನಾಳೆ ಬನ್ನಿರಿ’ ಎಂದು ಗಿರಾಕಿಗಳನ್ನು ಮನೆಗೆ ಕಳಿಸುವುದು ಅನುಭವಕ್ಕೆ ಬಂದಿದೆ. ಅಗ್ರಹಿಯೂ ಸುಲಭವಾಗಿ ಮೋಸಹೋಗದವನೂ ಆದ ಗಿರಾಕಿಗೆ ಸಾಕಾಗುವಷ್ಟು ಧಾನ್ಯವನ್ನು ಹೇಗಾದರೂ ಮಾಡಿ ಆ ಕಾರಕೂನನು ಒದಗಿಸುತ್ತಾನೆ. ಕತೆಗೆ ಯಾರಾದರೂ ಕೇಳಿದರೆ, ‘ಸ್ವಲ್ಪ ಶಿಲುಕಿತ್ತು ಆದರೆ ದು ಒಬ್ಬರು ಅಧಿಕಾರಿಗಳಿಗೆ, ಇಲ್ಲವೆ ದೊಡ್ಡ ಮನುಷ್ಯರಿಗೆ ಬೇಕಾಗಿತ್ತು” ಎಂದು ಮೇಲಿನವರ ಅಪ್ಪಣೆಯ ಮರೆಯಿಂದ ತಾನು ಹೇಗೆ ಅಸಹಾಯನೆಂಬುದನ್ನು ಹೇಳಿ ತಪ್ಪಿಸಿಕೊಳ್ಳುತ್ತಾನೆ.

ಮುಂಬಯಿ, ೨೫—೧೧—೪೮

—ಕಿ. ಘ. ಮಶ್ರುವಾಲಾ

ಅಸ್ಪೃಶ್ಯರ ಬಗ್ಗೆ ಶ್ರೀ ವಿನೋಬಾ ಅವರ ವಿಚಾರ

ತಾ. ೧—೧೦—೪೮ರಲ್ಲಿ ಗಾಂಧೀಪಕ್ಷದ ವೇಳೆಯಲ್ಲಿ ಶ್ರೀ ವಿನೋಬಾ ಭಾವೆಯವರು ಜಯಪುರದಲ್ಲಿ ಮಾಡಿದ ಭಾಷಣದಲ್ಲಿ ಕೆಳಗಿನ ಅಂಶಗಳನ್ನು ಹೇಳಿದರು.

ಗಾಂಧೀಜಯಂತಿಯನ್ನು ಆಚರಿಸುವ ಕಾಲದಲ್ಲಿ ಹರಿಜನವಸತಿಗಳೆದುರು ಗುಡಿಸುವ ಕೆಲಸವನ್ನು ವಹಿಸಿದ ಕೆಲ ಮಿತ್ರರನ್ನು ಅವರ ಸಮಾಜದವರು ಬಹಿಷ್ಕರಿಸಿದರು. ಅದರಿಂದ ಗಾಂಧಿಯವರ ಆತ್ಮಕ್ಕೆ ಅಗಾಧ ಹಿಂಸೆಯಾಯಿತು. ಸವರ್ಣರ ಈ ಮನೋಭಾವ ಹೇಯವಾದುದು. ಒಮ್ಮೆ ನಾನು ಒಂದು ಪ್ರಾರ್ಥನೋತ್ತರ ಭಾಷಣದಲ್ಲಿ ಸವರ್ಣರ ನಡತೆಯನ್ನು ಟೀಕಿಸಿದ್ದಕ್ಕೆ ಉತ್ತರ ಹಿಂದುಸ್ಥಾನದ ಒಂದು ಪತ್ರಿಕೆ ವಿರೋಧವನ್ನು ವ್ಯಕ್ತಪಡಿಸಿತ್ತು. ಆದರೆ ನನ್ನ ಆ ಹಿಂದಿನ ಮಾತಿಗೆ ಬಿಕಾನೇರಿನ ಘಟನೆಯೀಗ ನಿದರ್ಶನವಾಗಿ ಸಿಕ್ಕಿದಂತಾಯಿತು. ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕೊಟ್ಟರೆ ಅದೇನೂ ಸವರ್ಣರಿತ್ತ ಒಂದು ಅದ್ಭುತ ವರವಲ್ಲ. ಅದು ಅವರೇ ಹಿಂದೆ ಮಾಡಿದ ಪಾಪಕ್ಕೊಂದು ಪ್ರಾಯಶ್ಚಿತ್ತವಿಧಿಯಷ್ಟೆ. ಅದೂ ಪೂರ್ಣ ಪ್ರಾಯಶ್ಚಿತ್ತವೆನಿಸದು, ಹರಿಜನರನ್ನು ಮಿಕ್ಕವರ ಮಟ್ಟಕ್ಕೆ ಎತ್ತುವೆನೆಂದು ಹಿಂದೂಗಳು ಮಾಡುವ ಪ್ರತಿಜ್ಞೆಯೆಂದು ಅದನ್ನು ಕರೆಯಬಹುದು. ದಿಲ್ಲಿಯಲ್ಲಿ ಮಹಾತ್ಮರಿದ್ದ ಭಂಗಿವಸತಿಯಲ್ಲಿ ಇತ್ತೀಚೆಗೆ ಸ್ಥಳಸಂಕೋಚ ಮತ್ತು ಗಲೀಜಿನ ಬಗ್ಗೆ ದೂರು ಕೊಟ್ಟರೆ ಯಾರೂ ಕೇಳುವವರಿಲ್ಲವಾಗಿದೆ. ಇದು ದಕ್ಷಿಣ ಆಫ್ರಿಕದಲ್ಲಿ ಬಿಳಿಯರು ಬಣ್ಣದವರಿಗೆ ಕೊಡುವ ಹಿಂಸೆಗೆ ಕಡಿಮೆಯೆನಿಸದು. ಹರಿಜನರಿಗೆ ಈವರೆಗೆ ಕೊಟ್ಟ ಸವಲತ್ತುಗಳು ಕೇವಲ ಅಲ್ಪ, ಅವನ್ನು ಎಂಜಲೆಸದಂತೆ ಅವರತ್ತ ಎಸೆಯಲಾಗಿದೆ. ಜನರು ಸ್ವತಃ ಹೋಗಿ ಹರಿಜನರೊಡನೆ ವಾಸಮಾಡತೊಡಗಿದರೆ ಮಾತ್ರ ಅವರ ನಿಜವಾದ ಕಷ್ಟಸುಖಗಳನ್ನು ತಿಳಿಯುವರು; ಅನ್ಯಥಾ ಶಕ್ಯವಿಲ್ಲ.

- ಡಿ. ಎಂ.

ಮಧ್ಯಪ್ರಾಂತ ಸರಕಾರವು ಈಗಲೇ ಬಟ್ಟೆ ಸೀದಾ ಪ್ರಾರಂಭಿಸುವದಿಲ್ಲೆಂದು ಪ್ರಕಟಿಸಿರುತ್ತದೆ. ಮೊನ್ನೆ ದಿಲ್ಲಿಯಿಂದ ಪ್ರಕಟವಾದ ಸುದ್ದಿಯಲ್ಲಿ ಮಧ್ಯಪ್ರಾಂತ, ಮುಂಬಯಿ ಮತ್ತು ದಿಲ್ಲಿ ಪ್ರಾಂತಗಳು ಬಟ್ಟೆ ಸೀದಾ ಪ್ರಾರಂಭಿಸುವವೆಂದು ಹೇಳಲಾಗಿತ್ತು.

ಬುದ್ಧಿಶಕ್ತಿಯನ್ನು ಅಳೆಯಬಹುದೇ ?

(ಬರೆದವರು:— ಶ್ರೀ ಕೆ. ವಿಠ್ಠಲ ಶೆಟ್ಟಿ, ಬಿ. ಎ., [illegible])

ಮಂದಮತಿಗಳ ಯುಗ !

ಸರ್ ಸಿರಿಲ್ ಬರ್ಟ್ ಎಂಬವರು ಲಂಡನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಹೆಸರಾಂತ ಮನಃಶಾಸ್ತ್ರಜ್ಞರು. ಮನೋವಿಜ್ಞಾನದ ಅನೇಕ ಸಂಶೋಧನೆಗಳನ್ನು ಮಾಡಿದ್ದಾರೆ ಅವರು ತಮಗೆ ದೊರೆತ ಹಲವು ಸಾಕ್ಷ್ಯಗಳ ಆಧಾರದಿಂದ ಹೇಳುವುದೇನೆಂದರೆ :— ಮಾನವ ಜನಾಂಗದ ಬುದ್ಧಿಶಕ್ತಿಯು ದಿನ ಹೋದಂತೆ ಕುಂದುತ್ತಾ ಇದೆ. ಪ್ರಚಲಿತ ವೇಗದಲ್ಲೇ ಅದು ಕ್ಷಯಿಸುತ್ತ ಹೋದರೆ, ಇನ್ನು ಐವತ್ತೇ ವರ್ಷಗಳೊಳಗೆ, ಜಗತ್ತಿನಲ್ಲಿ ಮಂದಮತಿಗಳ (Mental defectives) ಸಂಖ್ಯೆ ಈಗಿರುವುದರ ಇಮ್ಮಡಿಯಾಗುವುದು. ವೇತನ ಪಡೆಯುವ ಅರ್ಹತೆಗೆ ಬೇಕಾಗುವಷ್ಟು ಕನಿಷ್ಠ ಬುದ್ಧಿವಂತಿಕೆಯ ಹುಡುಗ ಹುಡುಗಿಯರ ಸಂಖ್ಯೆ ಅರ್ಧದಷ್ಟಾಗುವುದು.

ಏನಿದು! ಅಷ್ಟು ವೇಗದಿಂದ ನಮ್ಮ ಬುದ್ಧಿಶಕ್ತಿ ಕುಂದುತ್ತಿದೆಯೆ? ಎಂದು ಆಶ್ಚರ್ಯಪಡಬೇಡಿರಿ. ಡಾ. ರೇಮಂಡ್ ಕಾಟೆಲ್ ಎಂಬ ಮತ್ತೋರ್ವ ಮನಶ್ಶಾಸ್ತ್ರಜ್ಞರು ಇದಕ್ಕಿಂತಲೂ ನಿರಾಶಾಜನಕ ಚಿತ್ರ ಬರೆಯುತ್ತಾರೆ. 'ಮಾನವ ಜನಾಂಗವು ಮಾನಸಿಕ ದಿವಾಳಿತನದತ್ತ ನಾಗಾಲೋಟದಿಂದ ಧಾವಿಸುತ್ತಿದೆ.' ಎನ್ನುವಷ್ಟು ಮುಂದುವರಿದಿದ್ದಾರೆ. ಅವರು ಕಳೆದ ತಲೆಮಾರಿನಲ್ಲೇ ಮಂದಮತಿಗಳ ಸಂಖ್ಯೆ ನೂರಕ್ಕೆ ೨೦ ಏರಿದೆಯೆಂದು ಅವರ ಅಂದಾಜು. ಮಾನವನ ಬುದ್ಧಿಶಕ್ತಿ ಈ ರೀತಿಯ ಕಠಿನ ಕ್ಷಯಕ್ಕೆ ತುತ್ತಾಗಿರುವದು ನಿಜವೇ ಆದರೆ, ಮಕ್ಕಳ ಶಿಕ್ಷಣದ ಅವಧಿಯನ್ನು ಒಂದೆರಡು ವರ್ಷ ವರ್ಧಿಸುವಂತಹ ಚಿಲ್ಲರೆ ವಿಧಾನಗಳಿಂದ ಕ್ಷಯವನ್ನು ತಡೆಗಟ್ಟುವದು ಅಸಾಧ್ಯವೇ ಸರಿ. ಅರ್ಥಾತ್, ಇನ್ನು ಎರಡೇ ಶತಮಾನಗಳಲ್ಲಿ ಜಗತ್ತೆಲ್ಲ ಮಂದಮತಿಗಳ ರಾಜ್ಯವಾಗುವದು ನಿಶ್ಚಿತ.

ಇದೆಲ್ಲಾ ಸುಮ್ಮಗೆ ಬಾಯಿಪಟಾಕಿ ಎನ್ನಬೇಡಿರಿ. ಇದೂ ಒಂದು ನಂಬತಕ್ಕ ಮಾತೇ? ಎಂದು ಮೂಗು ಮುರಿಯಬೇಡಿ. ದೂರ, ಎತ್ತರ, ಭಾರ ಮೊದಲಾದುವುಗಳನ್ನು ಅಳೆವಷ್ಟೇ ನಿಷ್ಕೃಷ್ಟವಾಗಿ ಬುದ್ಧಿಶಕ್ತಿಯನ್ನೂ ಅಳೆಯುವ ವಿಧಾನಗಳನ್ನು ಕಂಡುಹಿಡಿದಿದ್ದಾರೆ ಮನೋವಿಜ್ಞಾನಿಗಳು. ಒಬ್ಬೊಬ್ಬರಲ್ಲಿ ಒಂದೊಂದು ಬಗೆಯ ಸಾಮರ್ಥ್ಯವಿರುವ ಕಾರಣ, ಎಲ್ಲ ತರದ ಸಾಮರ್ಥ್ಯಗಳನ್ನು ಹೋಲಿಸುವುದು ಅಸಾಧ್ಯವೆಂಬಂತೆ ನಮಗೆ ತೋರುವುದು ನಿಜ. ಆದರೆ, ಮನಶ್ಶಾಸ್ತ್ರಜ್ಞರ ಹೇಳಿಕೆಯಂತೆ, ಪ್ರತಿಯೊಬ್ಬ ವ್ಯಕ್ತಿಯಲ್ಲಿ ವಿಶಿಷ್ಟವಾದ ಕೆಲವು ಸಾಮರ್ಥ್ಯಗಳಿರುವಂತೆಯೇ ಎಲ್ಲ ವ್ಯಕ್ತಿಗಳಲ್ಲಿ (ಅಸಾಧಾರಣ ಪ್ರತಿಭಾಶಾಲಿಗಳಲ್ಲಿ ಕೂಡ) ಸಾಮಾನ್ಯವಾದ ಒಂದು ಬುದ್ಧಿಸಾಮರ್ಥ್ಯವೂ ಇದೆ. ಯಾವ ವ್ಯಕ್ತಿಯೇ ಇರಲಿ, ತನ್ನ ಆ ಸಾಮಾನ್ಯ ಬುದ್ಧಿಶಕ್ತಿಗೆ ಮೀರಿದ ಯಾವ ಕೆಲಸವನ್ನೂ ಮಾಡಲಾರ. ಆದ ಕಾರಣ, ಅಂತಹ ಸಾಮಾನ್ಯ ಬುದ್ಧಿಶಕ್ತಿಯನ್ನು (general intelligence) ನಿಷ್ಕೃಷ್ಟವಾಗಿ ಅಳೆಯಲಿಕ್ಕೆ ಸಹಾಯಕವಾದ ಕೆಲವು ಬಗೆಯ ಪರೀಕ್ಷಾವಿಧಾನಗಳನ್ನು ಪಾಶ್ಚಾತ್ಯ ಮನಶ್ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ವ್ಯಕ್ತಿಗಳ ಮತ್ತು ಮಾನವ ಗುಂಪುಗಳ ಬುದ್ಧಿಶಕ್ತಿಯನ್ನು ಹೋಲಿಸುವ ವ್ಯವಸ್ಥಿತ ಪ್ರಯತ್ನಗಳು ಆರಂಭವಾಗಿ ಹಲವು ವರ್ಷಗಳಾಗಿವೆ.

ಮಕ್ಕಳ ಬುದ್ಧಿಮಾಪನ

ಕಿರಿಯ ಎಳೆಯ ಮಕ್ಕಳ ಬುದ್ಧಿಶಕ್ತಿಯನ್ನು ಅಳೆಯುವ ಒಂದು ಉಪಾಯವನ್ನು ಹೇಳುತ್ತೇವೆ, ಕೇಳಿ. ಅಸಂಗತವಾದ (Absurd) ಅಥವಾ ತರ್ಕವಿರುದ್ಧವಾದ (illogical) ಒಂದು ಮಾತನ್ನು ಹೇಳಿ, ಅದರಲ್ಲಿ ಅಸಂಗತ ಅಥವಾ ತರ್ಕವಿರುದ್ಧ ಅಂಶವನ್ನು ಸೂಚಿಸುವಂತೆ ಮಗುವಿಗೆ ಹೇಳುವುದು. ಉದಾ: ಒಬ್ಬನು ಒಂದು ಅಂಗಡಿಯಲ್ಲಿ ಜಾಹಿರಾತಿನ ಬೋರ್ಡನ್ನು ಕಂಡ. ಅದರಲ್ಲಿ, ನಮ್ಮ ಹೊಸ ಮಾದರಿಯ ಒಂದು ಒಲೆಯನ್ನು ಕೊಂಡುಕೊಂಡು ಅರ್ಧಾಂಶ ಕಲ್ಲಿದ್ದಲನ್ನು ಉಳಿಸಿರಿ, ಎಂದಿತ್ತು. ಎಲ್ಲಾ ಕಲ್ಲಿದ್ದಲನ್ನು ಉಳಿಸುವ ಆಸೆಯಿಂದ ಅವನು ಎರಡು ಒಲೆಗಳನ್ನು ಕೊಂಡುಕೊಂಡ; ಇಲ್ಲಿ ಅಸಂಗತವಾದ ಅಂಶವೇನು?

ಸಾಧಾರಣ ಅಷ್ಟೇ ಕಠಿನವಾದ ಮತ್ತೊಂದು ಪ್ರಶ್ನೆ ಕೇಳಿರಿ— 'ಒಬ್ಬ ಮನುಷ್ಯನಿದ್ದ [illegible] ಒಂದು ಇಡಿ ಸುತ್ತುಬರುವಷ್ಟು ಶಕ್ತಿ [illegible]. ಆದರೆ, ಪಾರ್ಕಿನ ಅರ್ಧ ಸುತ್ತು [illegible]. ಪುನಃ ಹೊರಟಲ್ಲಿಗೇ ಬರಲು [illegible], ಇಲ್ಲಿ ಅಸಂಗತವಾದ [illegible]?

[illegible] ಮಕ್ಕಳಿಗೆ ಅವರಿಗೆ ಆ ಪ್ರಶ್ನೆಗಳ [illegible] ನೋಡಿ.

[illegible] ಮಕ್ಕಳ ಬಗ್ಗೆ [illegible] ಪ್ರಶ್ನೆಯನ್ನು ನೀವಾದರೆ ಒಂದೇ ಕ್ಷಣದಲ್ಲಿ ಉತ್ತರಿಸಲಿಕ್ಕೆ ಸಾಕು— 'ರಾಮನು ಕೃಷ್ಣನಿಗಿಂತ ವೇಗವಾಗಿ ಓಡುತ್ತಾನೆ. ಕೃಷ್ಣನು ಗೋವಿಂದನಿಗಿಂತ ನಿಧಾನವಾಗಿ ಓಡುತ್ತಾನೆ. ಹಾಗಾದರೆ, ರಾಮು, ಕೃಷ್ಣ, ಗೋವಿಂದ ಇವರಲ್ಲಿ ಯಾರ ವೇಗ ಅತಿ ಹೆಚ್ಚಿನದು?

ಹನ್ನೆರಡು ವರ್ಷ ವಯಸ್ಸಿನ ಮಕ್ಕಳಿಗೆ ಹಾಕುವ ಪ್ರಶ್ನೆಗಳಾದರೋ ಇವಕ್ಕಿಂತ ಸ್ವಲ್ಪ ಕಠಿನವಾಗಿರುತ್ತವೆ. ಉದಾ: ರೈಲು ಹೊರಡಲು ತಡವಾದರೆ ಪರವೂರಲ್ಲಿರುವ ತನ್ನ ಮಿತ್ರನನ್ನು ಅವನು ಭೇಟಿಯಾಗಲಾರ. ರೈಲು ಹೊರಡಲು ತಡವಾಗದಿದ್ದರೆ, ರೈಲು ಹತ್ತಲು ಅವನಿಂದ ಸಾಧ್ಯವಿಲ್ಲ. ರೈಲು ಹೊರಡಲು ತಡವಾಯಿತೋ ಇಲ್ಲವೋ ಗೊತ್ತಿಲ್ಲ. ಅವನು ತನ್ನ ಮಿತ್ರನನ್ನು ಭೇಟಿಯಾದನೇ ಇಲ್ಲವೋ?

ಉಚ್ಚ ಬುದ್ಧಿಶಕ್ತಿ

ಬುದ್ಧಿಮಾಪಕ ಪ್ರಶ್ನೆಗಳೆಲ್ಲ ಇಷ್ಟೇ ಕಠಿನವೆಂದು ಭಾವಿಸಬೇಡಿ. ಸೇನೆಗೆ ವ್ಯಕ್ತಿಗಳನ್ನು ಸೇರಿಸುವಾಗ 'ಉಚ್ಚ ಬುದ್ಧಿಶಕ್ತಿಯ ವಯಸ್ಕ' (Superior adult) ರನ್ನು ಆರಿಸಲೋಸುಗ, ಈ ಕೆಳಗಿನ ಮಾದರಿಯ ಬಹಳ ಕಠಿನ ಪ್ರಶ್ನೆಗಳನ್ನೂ ಕೇಳುತ್ತಾರೆ. ಅವುಗಳಿಗೆ ಉತ್ತರವೀಯಲು ಸಾಮಾನ್ಯ ಬುದ್ಧಿಶಕ್ತಿ ಸಾಲದು. ನಿಮ್ಮಲ್ಲಿಯೂ ಉಚ್ಚ ಬುದ್ಧಿಶಕ್ತಿಯಿದೆಯೋ ಎಂದು ತಿಳಿಯುವ ಕುತೂಹಲವಿದ್ದರೆ ಇವನ್ನು ಮೊದಲು ಉತ್ತರಿಸಿ, ಲೇಖನದ ಕೊನೆಯಲ್ಲಿ ಕೊಟ್ಟ ಉತ್ತರಗಳೊಂದಿಗೆ ನಿಮ್ಮವನ್ನು ಹೋಲಿಸಿ ನೋಡಿರಿ. (ದಯವಿಟ್ಟು ಪ್ರಯತ್ನ ಮಾಡುವ ಮುನ್ನ ಉತ್ತರಗಳನ್ನು ನೋಡದಿರಿ.)

ಅಮೇರಿಕದ ಸೇನಾಪಡೆಗೆ ವ್ಯಕ್ತಿಗಳನ್ನು ಆರಿಸುವಾಗ ಕೇಳುವ ಮಾದರಿಯ ಪ್ರಶ್ನೆಯಿದು— 'ರಾಮುವಿನ ತಾಯಿ ಅವನ ಕೈಯಲ್ಲಿ ೩ ಪಾವಿನದೊಂದು ೫ ಪಾವಿನದೊಂದು ಹೀಗೆ ಎರಡು ಪಾತ್ರೆಗಳನ್ನಿತ್ತು ಏಳು ಪಾವು ನೀರು ತರುವಂತೆ ಅವನಿಗೆ ಹೇಳಿದಳು. ಅವೆರಡೇ ಪಾತ್ರೆಗಳನ್ನುಪಯೋಗಿಸಿ, ಸರಿಯಾಗಿ ೭ ಪಾವು ನೀರು ತರುವ ಬಗೆ ಹೇಗೆ ?

ಕೆಲವು ಪ್ರಶ್ನೆಗಳಲ್ಲಿ, ಕೇವಲ ಸಂಕೇತಗಳನ್ನು (code) ಕಂಡುಹಿಡಿಯುವದಷ್ಟೇ ಕೆಲಸವಾಗಿರುತ್ತದೆ. ಉದಾ: ೬೮೩೨೭ ನ್ನು '೬೮ ಇ ಅ ೭' ಎಂಬುದು ಸೂಚಿಸುವುದಾದರೆ, ೮೫೩೬೯ ನ್ನು 'ಆ ಉ ಅ ೬ ೯' ಎಂಬುದು ಸೂಚಿಸುವುದಾದರೆ, ' ' ೯ ಅ ಈ ಉ ಆ ' ಎಷ್ಟನ್ನು ಸೂಚಿಸುತ್ತದೆ ?

ಇದಕ್ಕಿಂತಲೂ ತುಸು ಕಠಿನವಾದ ಈ ಕೆಳಗಿನ ಪ್ರಶ್ನೆಯನ್ನು ಉತ್ತರಿಸಲು ಸ್ವಲ್ಪ ಹೆಚ್ಚಿಗೆ ಸಹನೆ ಬೇಕಷ್ಟೆ; 'ಛ ಢ ಖ ಥ' ಎಂಬದು 'ಜನಗಣ' ಎಂಬುದನ್ನು ಸೂಚಿಸುವುದಾದರೆ 'ಭ ಯ ಫ ಥ' ಎಂಬುದು ಏನನ್ನು ಸೂಚಿಸುವುದು ?


ವ್ಯಕ್ತಿಯಲ್ಲಿ ಒಂದು ವರದಿಯನ್ನು ಬರೆಯುವಷ್ಟು ಸಾಹಿತ್ಯಕ ಸಾಮರ್ಥ್ಯವಿದೆಯೋ (Literary ability) ಎಂದು ಪರೀಕ್ಷಿಸುವ ಹಲವು ಪ್ರಶ್ನೆಗಳೂ ಇವೆ. ಅರ್ಥರಹಿತವಾದ ಪದ ಸಮುದಾಯವೊಂದನ್ನು ಕ್ರಮಗೊಳಿಸಿ ಅರ್ಥಪೂರ್ಣ ವಾಕ್ಯವನ್ನು ರಚಿಸುವಂತೆ ಹೇಳುವದು ಒಂದು ತೆರೆ. ಉದಾ: 'ಮತ್ತು ನಿಂತುಹೋಗಿದೆ ಕಟ್ಟಿಸುವ ದೊರೆಯದೆ ಸಾಮಗ್ರಿಗಳು ಮನೆ ಕೆಲಸ ಕೆಲಸಗಾರರು.' ಕೆಲವು ಶಬ್ದಗಳನ್ನು ಕೊಟ್ಟು, ಅವುಗಳಿಗೆ ವಿರುದ್ಧ ಅರ್ಥ ಕೊಡುವ ಶಬ್ದಗಳನ್ನು ಕೇಳುವುದು ಇನ್ನೊಂದು ತೆರೆ. ಉದಾ: ಕಷ್ಟ, ಒದ್ದೆ, ಗಟ್ಟಿ, ಕ್ರಮೇಣ, ಕಟ್ಟು, ಇವುಗಳಿಗೆ ವಿರೋಧ ಪದಗಳಾವುವು ?

ಮಾತಿಗೆ ಸೋಲುವ ಮಹಾನುಭಾವರು

ಆದರೆ ಬೇರೆ ಎಲ್ಲ ವಿಷಯಗಳಲ್ಲಿ ಚತುರರಿದ್ದು ಶಬ್ದಗಳಿಗೆ ಸೋಲುವ ಮಹಾನುಭಾವರೂ ಇದ್ದಾರೆ. ಅಂಥವರ ಕೈಗೆ ವಿಶಿಷ್ಟ ಬಗೆಯ ಸಾಧನ ಸಲಕರಣೆಗಳನ್ನಿತ್ತು ಅವರ ಕೈವಾಡವನ್ನು ಪರೀಕ್ಷಿಸಿಯಾಗಲೀ, ಇತರ ವಿಧಾನಗಳಿಂದಾಗಲೀ ಬುದ್ಧಿಶಕ್ತಿಯನ್ನು ಅಳೆಯುತ್ತಾರೆ. ಒಂದರಹಿಂದೆ ಒಂದರಂತೆ ಕೆಲವು ಅಂಕೆಗಳನ್ನು ಹೇಳಿ, ಆ ಅಂಕೆಗಳನ್ನು ಕೂಡಲೇ ಯಥಾಕ್ರಮದಲ್ಲಿ ಪುನರುಚ್ಚರಿಸುವಂತೆ ಹೇಳುವುದು ಉತ್ತಮ ತರದ [illegible] ಬುದ್ಧಿವಂತಿಕೆಯ ಪ್ರಶ್ನೆಯಾಗಿದೆ. ವ್ಯಕ್ತಿಯ ಬುದ್ಧಿಶಕ್ತಿ ಅತಿ ಚುರುಕಾಗಿರು[illegible]ವೆಂದರೆ ಹದಿನಾಲ್ಕನೆಯ ವರ್ಷ[illegible] ಒಬ್ಬನು ಎಂಟು ಅಂಕೆಗಳನ್ನು [illegible] ಪುನರುಚ್ಚರಿಸಬಲ್ಲನಾದರೆ ಅವನ [illegible] ತಕ್ಕಮಟ್ಟಿಗಿದೆಯೆಂದು [illegible] ಅವೇ ಅಂಕೆಗಳನ್ನು ವಿರುದ್ಧ ಕ್ರಮ[illegible] [illegible] ಅನುವದಿಸಲು [illegible] ಪ್ರಯತ್ನ ಮಾಡಿ ನೋಡಿ.

ಬುದ್ಧಿಮಾಪಕ [illegible] [illegible] ಸುಮಾರು ೪೦ ವರ್ಷ[illegible].

[illegible] (ಮುಂದಿನ ಪುಟಕ್ಕೆ)



ಅಶಕ್ತಿನಲ್ಲಿ ನೆರನಾಡ ಯಮುನಾ

ಶಾದೀಸೇ ಪಹಲೇ

'ಶಾದೀಸೇಪಹಲೇ' ಅಥವಾ 'ಮದುವೆಗೆ ಮೊದಲು' ಎಂಬುದು ರಾಜಾ ನೇನೇ ನಿರ್ಮಿತ. ರಾಜಾನೇನೇ ಇದರ ದಿಗ್ದರ್ಶಕರು. ಹುಬ್ಬಳ್ಳಿಯ ಸುದರ್ಶನ ಟಾಕೀಸಿನಲ್ಲಿ ಇದನ್ನು ಈ ಎರಡನೆಯ ವಾರದಲ್ಲಿ ಪ್ರದರ್ಶಿಸಲಾಗುತ್ತಿದೆ.

ಮದುವೆಗೆ ಮೊದಲು ಕಥಾನಾಯಕ ರಾಮಿ ಘಟ್ಟಿಯಾಗುವದೇ ಪೂರ್ವಾರ್ಧದ ಕಥೆ. ರಾಮಿಯ ತಂದೆಯೊಬ್ಬ ಜೂಜುಗಾರ. ಚಂದುವಿದ್ದ ಕಾರಖಾನೆಯಲ್ಲೇ ಕೆಲಸಕ್ಕೆ ಸೇರಿ ತಂದೆಗೆ ಅವಳು ದುಡಿದು ಹಾಕುತ್ತ ಬಂದಳು. ಆದರೆ ಅವಳ ದುಡಿತವೆಲ್ಲ ಇವನ ಜೂಜುಗಾರಿಕೆಗೆ ಆಗಿಹೋಗುತ್ತಿತ್ತು. ಹೀಗಾಗಿ ಅವಳು ಚಂದುವಿನೊಡನೆ ಮದುವೆಯಾಗುವೆನೆಂದು ಹೇಳಿ ಅವನನ್ನೊಪ್ಪಿಸಿ, ಅವನನ್ನು ಕರೆದುಕೊಂಡು ಅಪ್ಪನನ್ನು ತನ್ನಹಳ್ಳಿಗೆ ಸಾಗಿಸಿದಳು. ಅದರೂ ಅವಳಪ್ಪ ಜೂಜುಗಾರಿಕೆ ಬಿಡಲಿಲ್ಲ. ಇದರಿಂದ ಕ್ರುದ್ಧನಾದ ಚಂದು ಒಮ್ಮೆ ಅವಳ ಅಪ್ಪನಿಂದ ಅವಮಾನಿತನಾಗಿ ಅವರಿಬ್ಬರನ್ನು ಬಿಟ್ಟು ಪುನಃ ಕಾರಖಾನೆಯ ಕೆಲಸಕ್ಕೆ ಹೊರಟುಹೋದನು. ರಾಮಿ ಧರ್ಮಸಂಕಟದಲ್ಲಿ ಸಿಲುಕಿದಳು. ಏನು ಹೇಳಿದರೂ ಅಪ್ಪ ಜೂಜಾಟ ಬಿಡುವುದಿಲ್ಲ, ಇವಳಿಗೆ ಅವನನ್ನು ಬಿಟ್ಟು ಹೋಗಲು ಧೈರ್ಯವಿಲ್ಲ.

[illegible] ಗಳಿಂದ ಇವಳನ್ನು ಬಿಡಿಸಿ ಮುಂದೆ ಕರೆದೊಯ್ಯಲು [illegible] ತರುವೆನೆಂದು [illegible] ಕೊಂಡು ಹೊರಟವನು ಪುನಃ [illegible] ಬಲೆಗೆ ಸಿಕ್ಕು [illegible] ಹೋಗಬೇಕಾಯಿತು. ಈ ವೇಳೆಯಲ್ಲಿ [illegible] ಬಹಳ [illegible] [illegible] ಊರಿಗೆ ಹೋದಳು. ಅಲ್ಲಿ [illegible] ಬಾಗಿಲು [illegible]. ಹೊಸ್ತಿಲಿಗೆ [illegible] ಅಳುತ್ತ ಬಿದ್ದಳು. [illegible] ಹಚ್ಚಿಕೊಂಡು ಪ್ರಾಣಬಿಟ್ಟಿದ್ದಳು. [illegible] ಅಪ್ಪನೂ ಓಡುವೂ ಅಲ್ಲಿಗೆ ಬಂದು [illegible]. ಮಗಳ ಶವ ಎತ್ತಿಕೊಂಡು [illegible] [illegible] ನಷ್ಟದಂತೆ [illegible] [illegible] ದಿಂದ ಒಪ್ಪಿದ. ಅಲ್ಲಿಗೆ ಕಥೆ ಇತಿಶ್ರೀಯಾಯಿತು.

ಅಭಿನಯ ಗಂಭೀರವಾಗಿ [illegible] ವಾಗಿಯೇಯಿದೆ. ಆದರೆ [illegible] ಅಪ್ರಾಯಮಾನವಾಗುವಷ್ಟು [illegible] ಸನ್ನಿವೇಶಗಳೂ ಹಲವಾಗಿವೆ ಮುಖ್ಯ ಪಾತ್ರಗಳ ನಟನೆ ಔಚಿತ್ಯವನ್ನೆಲ್ಲಾ [illegible] ವರ್ಷಾ ದೀಪ್ಯ: [illegible] ಬಹುಮನ್ನಮಾನ: ಎಂಬ [illegible] ಬುದ್ಧಿವಾದವನ್ನು ಹೇಳಹೊರಟ [illegible] ಜನತೆಯ ಶಿಕ್ಷಣದೃಷ್ಟಿಯಿಂದ [illegible] ದಿದೆಯಾದರೂ ಈ ನೀತಿಬೋಧ[illegible] ಪ್ರಧಾನವಾಗಿ ಚಿತ್ರದ ವೈಶಂಬ [illegible] ಕ್ತಿಯಿಂದ ತುಂಬಿರುವುದು ರಸಭಂಗ [illegible] ಸ್ವಲ್ಪ ಅನುಚಿತವೆನಿಸೀತು. ಆದರೆ [illegible] ಹಿಂದುಸ್ತಾನದ ಪುನರುತ್ಥಾನ [illegible] ಪ್ರಧಾನವಾದ ನೈತಿಕಕ್ಷೇತ್ರದಲ್ಲಿ [illegible] ಕಾರಕಾರಿಯಾಗುವಂತೆ ನಿರ್ಮಿಸ[illegible] ಚಿತ್ರದ ಸದುದ್ದೇಶವನ್ನು ಕೊಂಡಾಡದ [illegible] ಕೀಯನಾವನೂ ಒಪ್ಪಲಾರನು.

— [illegible]



ಕಿರೀಟಪತಿಗಳು

[illegible] ೬೨.

[illegible]ಯುದ್ಧದ ನಂತರ [illegible]ದಲ್ಲಾದಂತೆ ವಿದೇಶಗಳಲ್ಲೂ ಹಲವು [illegible] ಸಂದರ್ಭ ಉಂಟಾಯಿತು. ಅಂಥ [illegible]ಗೆ ೩೬ ಮಂದಿ ಇದ್ದಾರೆ.

ಈ ಉಂಡಾಡಿಗಳಾಗಿದ್ದ ರಾಜರಾಣಿಯ[illegible]ದು ಉದ್ಯೋಗ ಸಿಗವಾಗಿದೆ. ಮಕ್ಕ[illegible]ತೆ ಮೋಜುಮಾಡುತ್ತ ಕೂಡಲು ಅವರ [illegible]ಯಲ್ಲೀಗ ಕಾಸಿಲ್ಲವಾಗಿದೆ. ಅವರಲ್ಲಿ ಹಲ[illegible]ವರಂದು ಅಮೇರಿಕಕ್ಕೆ ಹೋಗಿದ್ದಾರೆ. "ಕೆಂದುರಿ ಜೋಗಿ"ಯಲ್ಲಿ ಜೋಗಿ ಕೆಂದ[illegible] ಮಾಯೆಯಿಂದ ಮಕ್ಕಳನ್ನು ಸ್ವರ್ಗ[illegible]ಯ್ಯಾಗ ಹಿಂದಕ್ಕೆ [illegible] ಕುಣಿ[illegible]ದುಗನಂತೆ ಅವರೀಗ,

'ಅಯ್ಯೋ ಹೋಯಿತೆ ಆ ನಾಕ,
ಅಯ್ಯೋ ಬಂದಿತೆ ಈ ಲೋಕ ?"

ಎಂದು ಸಂಕಟ ಪಡುತ್ತಿದ್ದಾರೆ!

ಜೇತದ ಹಿಂದಿನ ಚಕ್ರವರ್ತಿನಿಯೂ ಹಂಗೇರಿಯ ರಾಣಿಯೂ ಆಗಿದ್ದ ಮಹಾಮಹಿಳೆ ಇಂದು ನ್ಯೂಯಾರ್ಕಿನಲ್ಲಿ ಜೋಲು ಮೋರೆ ಹಾಕಿಕೊಂಡು ತಿರುಗುತ್ತಿದ್ದಾಳೆ. ಅವಳ ಮೈದುನ ನಿರುದ್ಯೋಗದಕ್ಷಿಣೆಯೆಂದು ವಾರಕ್ಕೆ ಸುಮಾರು ೬೦ ರೂಪಾಯಿಗಳನ್ನು ಸರಕಾರದಿಂದ ಪಡೆದು ಕಾಲ ಹಾಕುತ್ತಿದ್ದಾನೆ. ಕಾಲಗತಿ ಕೆಟ್ಟು ಸರಕಾರದ ಸಹಾಯ ನಿಂತು ಹೋದ ಕೂಡಲೆ ತನ್ನ ಬಳಗದ ನೆನಪಾಗಿ ಅವರ ಮನೆಗೆಂದು ಯುರೋಪಿಗೆ ದಯಮಾಡಿಸಿದ. ಇನ್ನೊಬ್ಬನೆಂದರೆ ಅಬ್ದುಲ್ ಮಜೀದ ಖಾನ್. ಇವನು ತುರ್ಕಿಯ ಧರ್ಮಗುರುಪಟ್ಟಕ್ಕೂ ಸುಲ್ತಾನಗಿರಿಗೂ ಹಕ್ಕುದಾರನು. ಹಿಂದೆ ಕೆಂಪು ಸುಲ್ತಾನನೆನಿಸಿದ್ದ ಅಬ್ದುಲ್ ಹಮೀದನ ವಂಶದವನು. ಸಿರಿವಂತೆಯಾದ ಅವನ ಗ್ರೀಕ್ ಹೆಂಡತಿ ಬಹಳ ಪತಿವ್ರತೆ; ಇವನು [illegible]ರಿಗೆ ಹತ್ತೊಂಬತ್ತು ಮೊಳದವನಾದ ಕೂಡಲೆ ಇವನನ್ನು ಬಿಟ್ಟು ತವರುಮನೆಗೆ ಓಡಿದಳು!

ಆದರೆ ರಾಜ್ಯ ಬಿಟ್ಟರೂ ರಾಜಮರ್ಯಾದೆಯನ್ನು ಜನರಿಂದ ಪಡೆಯುತ್ತಿರುವ ಅಪೂರ್ವ ಪ್ರೇಮಿಗಳೆಂದರೆ ಇಂಗ್ಲೆಂಡಿನ (ಹಿಂದೆ [illegible]ನೆಯ ಎಡ್ವರ್ಡ್ ಎನಿಸಿದ್ದ) ವಿಂಡ್ಸರ್ ದಂಪತಿಗಳು. ಅವರನ್ನು ಊರಿನ ಎಲ್ಲ ಉತ್ಸವಾದಿಗಳಿಗೂ ಆಹ್ವಾನಿಸುತ್ತಾರೆ, ಆತಿಥ್ಯ [illegible]ಸುತ್ತಾರೆ; ಇದಕ್ಕೆ ಅವರ ಸ್ವಯಂಕೃತ ಸಿಂಹಾಸನತ್ಯಾಗವೇ ಕಾರಣ. ಯುಗೋಸ್ಲೇವಿಯಾದ ಪೀಟರ್ ಮತ್ತು ಅಲೆಕ್ಸಾಂಡ್ರಾ ದಂಪತಿಗಳಾದರೋ ಅಂಥ ಆದರಾತಿಥ್ಯಕ್ಕೆ ಪಾತ್ರರಾಗದಿದ್ದರೂ ತಮ್ಮಷ್ಟಕ್ಕೆ ತಾವು ತೃಪ್ತರಾಗಿ ಇದ್ದಾರೆ. ರುಮೇನಿಯದ ಕರೋಲ್ ಅರಸನು ಇಲಿಯಟ್ ರೂಸ್ವೆಲ್ಟ ಮತ್ತು ಕಾರ್ನೇಲಿಯುಸ್ ವೆಂಡರ್ ಬಿಲ್ಟರ ಸಹಾಯದಿಂದ ನ್ಯೂಯಾರ್ಕಿನಲ್ಲಿ ದಿನ ದಬ್ಬುತ್ತಿದ್ದು, ಅವರ ಸಹಾಯ ಸಿಲದೆ ಈಗ ಒಬ್ಬ [illegible]ಚಾರಕನನ್ನು ಆಶ್ರಯಿಸಿ ಸ್ವಲ್ಪ ಉತ್ತಮ [illegible]ಯಲ್ಲಿ ಕಾಲಿಡುತ್ತಿದ್ದಾನೆ.

ಸ್ಪೇನಿನ ಹಿಂದಿನ ಅರಸನ ಮಗ ಡಾನ್ [illegible]ನನು 'ಮಲ್ಲಾರ್ಡ್ ಸೀಮಿ ದ ಗರ್ಗ [illegible], ಎಲ್ಲಾ ಊರು ತಿರುಗಿ ಒಂದೆ, [illegible] ನನಗೆ ಸಂಗಂ ಜೋಡಿ' [illegible]

[illegible] ಕಣ್ಣೀ ತೆರೆದು ತಿರುಗುತ್ತಿದ್ದಾನೆ. ಅವನಿಗೆ ಸಂತತಿ ಮತ್ತು ೧೧ ಜನ ಮಕ್ಕಳು ಇದ್ದಾರೆ. [illegible] ಹಿಂದಿನ ರಾಜ ತನ್ನ ಕುಟುಂಬದ ಹೊಟ್ಟೆ ಹೊರೆಯಲು ಬ್ರಿಟನ್ನಿನಿಂದ ಭಿಕ್ಷೆ ಪಡೆಯುತ್ತಿದ್ದಾನೆ. ಆಲ್ಬೇನಿಯದ ದೊರೆ ಜೋಗ್ ಮತ್ತು ಅವನ ಹೆಂಡತಿ ಹೊಟ್ಟೆಗಿಲ್ಲದೆ ಸಾಯುತ್ತ ಇದ್ದರೂ 'ಅಂಗಿಬಿಂಗಿ ರಾಷ್ಟ್ರತ' ರಾಗಿ ಮೆರೆಯುತ್ತಿದ್ದಾರೆ! ವ್ಲಾಡಿಮಿರ್ ಕಿರಿಲೋವಿಚ್ಚನು ರಶಿಯದ ಜಾರ್ ದೊರೆಗಳ ಸಿಂಹಾಸನಕ್ಕೆ ತಾನು ಹಕ್ಕುದಾರನೆಂದು ಸ್ಪೇನಿನಲ್ಲಿ ಕುತ್ತುತ್ತಿದ್ದಾನೆ. ಸ್ವಿಜರ್‌ಲೆಂಡಿನಲ್ಲಿ ಬೆಲ್ಜಿಯನ್ನರ ಲಿಯೋಪೋಲ್ಡ್ ದಂಪತಿಗಳು ಮತ್ತು ರಶಿಯದ ಸೆರೆಯಲ್ಲಿರುವ ಹಿಂದಿನ ಚೀನೀ ಚಕ್ರವರ್ತಿಯ ಗಾದಿಯ ಹಕ್ಕುದಾರ ಹೆನ್ರಿ ಪೂಯೀ ಇವರದೂ ಇದೇ ಹಾಡು—

ದೊಡ್ಡ ಹೊಟ್ಟೆಯನ್ನು ಹೊತ್ತು
ಹುಟ್ಟಿಬಿಟ್ಟೆ ದೊರೆ;
'ಬಡಿಯುದೆಲ್ಲ ಪಡೆಯೊ' ಎಂದು
ಬಂತು ನನಗೆ ಕರೆ;
ಆಗಲೆಂದು ತಂದುದೆಲ್ಲ
ತಿಂದುಬಿಟ್ಟೆನರೆ—
ಪ್ರಜೆಗಳೆಂಬ ದೇವತೆಗಳ-
ಗಾದೆ ನೊಂದು ಹೊರೆ!

ಗದ್ದಿಗೆಯಲಿ ಕುಳಿತ ನನಗೆ
ಸೇರದೊರಟು ನೆಲ
ಎಂದೆ—ಜಟ್ಟಿಜಾರಿಬಿದ್ದ-
ರದೇವರಸೆ ಛಲ!
ಆದರಾರು ಕೇಳಲಿಲ್ಲ—
ಏನು ಜನರ ಛಲ!
ಪ್ರಷ್ಟಶೀತ ಪ್ರಾಣನಾಶ-
ಅಯ್ಯೊ ಸತ್ತೆನಲ!

—ಮಾಮ

× × ×

ಜಾತಿಭೇದ

ಹುಟ್ಟುವಾಗ ನೀನು ಕಣ್ಣು ಕೈಕಾಲು ಸಹಿತ ಹುಟ್ಟಿರುವೆಯಲ್ಲದೆ ನಿನಗೆ ಅಂಗಿ ಇತ್ತೆ, ರವಕೆ ಇತ್ತೆ? ಬೇಕಾದರೆ ನಿನ್ನ ಅಮ್ಮನನ್ನು ಕೇಳು. ಹಾಗೇ ನಿನಗೆ ನೀನು ಬ್ರಾಹ್ಮಣನೋ ಲಿಂಗಾಯತನೋ ಇತರನೋ ಎಂಬುದೇನಾದಾರೂ ಗೊತ್ತಿತ್ತೇ ಆಗ? ವಿಚಾರ ಮಾಡು. ದೇವರು ಮನುಷ್ಯರ ಹೊಟ್ಟೆಯಿಂದ "ಮನುಷ್ಯನನ್ನಲ್ಲದೆ" ಬೇರೆ ಯಾರನ್ನೂ ಹುಟ್ಟಿಸುತ್ತಿಲ್ಲ. ಹೀಗೆ ಹುಟ್ಟಿದ ಮನುಷ್ಯರು ಅನಂತರ ತಾವು ಆ ಜಾತಿಯವರು ಈ! ಜಾತಿಯವರು ಎಂಬುದನ್ನು ಸುತ್ತು ಮುತ್ತಲಿನ ಜನರಿಂದ ತಿಳಿಯುತ್ತಾರೆ. ಹೌದೋ ಅಲ್ಲವೋ? ಈ ಜಾತಿಭಾವನೆ ಹೆಚ್ಚಾಗಿ, ಹಿಂದು ಮುಸಲ್ಮಾನರಲ್ಲಿ ಜಗಳವಾಗಿ ಹಿಂದುಸ್ತಾನ ಇಬ್ಭಾಗವಾದ ಸುದ್ದಿಯನ್ನು ನೀನು ಕೇಳಿರಬಹುದು.

ನಮ್ಮ ದೇಶದಲ್ಲಿ ಈ ಜಾತಿಭಾವನೆ ಎಷ್ಟು ಆಳವಾಗಿದೆ ಎಂಬುದಕ್ಕೆ ಒಬ್ಬರು ಒಂದು ಉದಾಹರಣೆ ಕೊಟ್ಟಿದ್ದಾರೆ. ಅದು ಬಹಳ ಸ್ವಾರಸ್ಯವಾಗಿದೆ. ನವರತ್ನಗಳ ಹೆಸರನ್ನು ನೀನು ಕೇಳಿರಬಹುದು. ಅವುಗಳಲ್ಲಿ ವಜ್ರವೆಂಬುದೊಂದು. ವಜ್ರದಲ್ಲಿ ಹಾಲಿನಂತಿರುವುದು ಬ್ರಾಹ್ಮಣವಜ್ರ, ಜೇನಿನಂತಿರುವುದು ಕ್ಷತ್ರಿಯವಜ್ರ, ಕೊನೆಯ ಬಣ್ಣದ್ದು ವೈಶ್ಯವಜ್ರ, ಹೊಗೆಯಂತೆ ಕಂದು ಬಣ್ಣದ್ದು ಶೂದ್ರವಜ್ರ ಎಂಬ ಜಾತಿಗಳಿರುವುದಾಗಿ ಶಾಸ್ತ್ರದಲ್ಲಿ ಹೇಳಿದೆ. ಬ್ರಾಹ್ಮಣ ವಜ್ರಕ್ಕೆ ಸಾವಿರ ರೂಪಾಯಿಯ ಬೆಲೆ ಯಿದ್ದರೆ, ಕ್ಷತ್ರಿಯವಜ್ರಕ್ಕೆ ೭೫೦, ವೈಶ್ಯ ವಜ್ರಕ್ಕೆ ೫೦೦ ಮತ್ತು ಶೂದ್ರವಜ್ರಕ್ಕೆ ೨೫೦ ರೂಪಾಯಿಯ ಬೆಲೆ! ಹಕ್ಕಿ ಪಕ್ಷಿಗಳಲ್ಲಿ ಕೂಡ ಇಂಥ ವರ್ಗೀಕರಣವಿದೆ. ಹಕ್ಕಿಗಳಲ್ಲಿ ಗಿಳಿ ಬ್ರಾಹ್ಮಣ, ಕಾಗೆ ಚಂಡಾಲ, ಹಂಸ ಕ್ಷತ್ರಿಯ ಎಂದು ಹೇಳುವುದುಂಟು. ಮೊದಲು ಶಿಕ್ಷಕ ವೃತ್ತಿಯವರು, ಸೈನಿಕರು, ವ್ಯಾಪಾರಿಗಳು, ಇತರ ಉದ್ಯೋಗಿಗಳು ಎಂಬುದಾಗಿ ಉದ್ಯೋಗದ ಭೇದದಿಂದ ಜಾತಿಗಳು ಹುಟ್ಟಿದವು. ಆದರೆ ಕಡೆಯಲ್ಲಿ ಅವುಗಳು ನಾಲ್ಕರಿಂದ ನಾಲ್ಕು ಸಾವಿರದಷ್ಟಾಗಿ ಒಂದು ಜಾತಿ ಹೆಚ್ಚು ಇನ್ನೊಂದು ಕಡಿಮೆ ಎಂಬ ರೂಢಿ ಬಂದು ತಿಳಿವಳಿಕೆಯಿಲ್ಲದೆ ಪರಸ್ಪರ ಹೊಟ್ಟೆಕಿಚ್ಚಿನಿಂದ ತಂತಮ್ಮಲ್ಲಿ ಜಗಳವಾಡಿ ಜನರು, ಅನ್ಯರ ಆಳಾಗಿ ಬಾಳುವ ಪ್ರಸಂಗ ಬಂದಿತು. ಇದು ನಿನಗೊಂದು ಮರೆಯಲಾರದ ಪಾಠವಲ್ಲವೆ? ನೀನು ವಿಚಾರಶೀಲ (ಲೆ), ನಿನಗೆ ಸುಳ್ಳುಯಾವುದು ಸತ್ಯಯಾವುದು ಎಂಬುದನ್ನು ಪರೀಕ್ಷಿಸುವ ಬುದ್ಧಿವಂತಿಕೆಯಿದೆ, ಅದನ್ನು ಸ್ವಲ್ಪ ಬಳಸಿಕೊಂಡು, ನೀನು ದೊಡ್ಡವನಾ (ಳಾ) ದಮೇಲೆ ಎಂಥ ಬುದ್ಧಿಯ ಮನುಷ್ಯನಾಗಬೇಕು, ಎಂಥ ಒಳ್ಳೆ ಜೀವನ ನಡೆಸಬೇಕು, ಯಾವುದರಿಂದ, ಕೇವಲ ನಿನಗಲ್ಲದೆ ಎಲ್ಲರಿಗೂ ಹಿತವಾಗುವುದು ಎಂಬುದನ್ನು ಈಗಿನಿಂದಲೇ ಆಲೋಚಿಸುತ್ತಿರುವೆ ಎಂಬುದು ನನಗೆ ಗೊತ್ತು. ಆದುದರಿಂದಲೇ ನಾನು ನಿನಗೆ ಈ ಜಾತಿಭೇದದ ಪುರಾಣ ಹೇಳಿದೆ. ಏನಂತೀಯಾ ಮಗೂ, ನನ್ನ ಅಳಿಯಾ (ಸೊಸೆ?)

—ನಿನ್ನ ಅತ್ತೆ

ಪ್ರಾಚೀನ ಭಾರತದ ರಾಜ್ಯತತ್ವಗಳು

[೫ ನೆಯ ಪುಟದಿಂದ]

ಬಗ್ಗೆ ಇದ್ದ ಈ ಪ್ರಾಚೀನ ಪರಂಪರೆಯನ್ನು ಗಮನಿಸಿದರೆ ದೇಶಕ್ಕೆ ಹಿತವಾಗುವದೆಂಬುದು ನಿರ್ವಿವಾದವಾಗಿದೆ.

ರಾಜ್ಯಸೂತ್ರದಲ್ಲಿ "ಜಾತ್ಯತೀತ," "ಧರ್ಮಾತೀತ" ಅಥವಾ "ಲೌಕಿಕ" ಪದ್ಧತಿ ಬೇಕೆಂದು ಈಚೆಗೆ ನಮ್ಮ ದೇಶದಲ್ಲಿ ಕೂಗು ಎದ್ದಿದೆ. ಕಳೆದ ಕೆಲ ಶತಮಾನಗಳಿಂದ ನಾವು ಧರ್ಮದ ಹೆಸರಲ್ಲಿ ಅನುಭವಿಸಿದ ಕಷ್ಟಪರಂಪರೆಗಳು "ಲೌಕಿಕತೆ" ಗೆ ನಾವು ಕಣ್ಮುಚ್ಚಿಮಾಲೆ ಹಾಕುವಂತೆ ಮಾಡಿರಬಹುದಾದರೂ ಆ ಶಬ್ದದಲ್ಲಿ ಅಡಕವಾಗಿರುವ ಅಪಾಯಗಳನ್ನು ಅಲಕ್ಷಿಸಿದರೆ ನಮಗೇ ಹಾನಿ. "ಲೌಕಿಕತೆ" ಯ ಅತಿರೇಕದಿಂದ ಯುರೋಪಿನ ಕೆಲ ದೇಶಗಳಲ್ಲಿ ಆದ ಅನಾಹುತಗಳಿಂದ ನಾವು ಬುದ್ಧಿ ಗಲಿಯಬೇಕು. "ಧರ್ಮ"ಶಬ್ದಕ್ಕೆ ಸಂಕುಚಿತಾರ್ಥವನ್ನು ಹಚ್ಚಬಾರದಾದರೂ ಮನುಷ್ಯನ ಬುದ್ಧಿಯನ್ನು ಪರಿಣಾಮಕಾರಿಯಾಗಿ ಸಂಯಮದಲ್ಲಿಡಬಲ್ಲ ಶಕ್ತಿಯೆಂದರೆ ಧರ್ಮಬುದ್ಧಿಯೊಂದೇ. ಅದನ್ನು ಸದಾ ಜಾಗ್ರತವಾಗಿಡುವದೇ ರಾಜ್ಯಸೂತ್ರಧಾರಿಯ ಕರ್ತವ್ಯ. ದಿ. ಗೋಖಲೆಯವರು ಅದಕ್ಕಾಗಿಯೆ ರಾಜಕಾರಣವನ್ನು ಸದ್ಧರ್ಮಾನುವರ್ತಿಯಾಗಿ ಮಾಡಬೇಕೆಂದು ವಾದಿಸಿದರು. ಗಾಂಧೀಜಿಯವರಂತೂ ಧರ್ಮಸಾಕ್ಷಿಯಾದ ರಾಜಕಾರಣಕ್ಕೇ ಜೀವನವನ್ನು ಮುಡಿಪಿಟ್ಟರು, ಬಲಿಗೊಟ್ಟರು. ಅಧಿಕಾರವೆಂಬದು ಬಲು ಕೆಟ್ಟವಸ್ತು. ಅದಕ್ಕೆ ಸದ್ಧರ್ಮದ ಕಡಿವಾಣವಿಲ್ಲದೆ ಹೋದರೆ, ಕೇವಲ ಲೌಕಿಕವನ್ನಷ್ಟೇ ಗಮನಿಸಿ, ಜನರ ಹೃದಯವನ್ನು ಅದು ಅಲಕ್ಷಿಸಿದರೆ ರಾಜ್ಯನಾಶಕ್ಕೆ ಔತಣವಿತ್ತಂತಾದೀತು.

ಬುದ್ಧಿಶಕ್ತಿಯನ್ನು ಅಳೆಯಬಹುದೆ ?

[೧೧ನೆಯ ಪುಟದಿಂದ]

ಫ್ರಾನ್ಸ್ ದೇಶದ ಡಾ. ಬೆನೆಟ್ ಎಂಬಾತನೇ ಅಂತಹ ಪ್ರಯೋಗಗಳ ಜನಕನೆನ್ನಬಹುದು. ಮಕ್ಕಳಲ್ಲಿ ಮಂದಮತಿಗಳನ್ನು ಆರಿಸಿ ತೆಗೆದು ಕೆಲವು ವಿಶಿಷ್ಟ ಶಾಲೆಗಳಿಗೆ (special schools) ಕಳುಹಿಸಿ ಕೊಡುವ ಪ್ರಸಂಗ ಬಂದಾಗ, ಬುದ್ಧಿಮಾಪಕ ಪ್ರಶ್ನೆಗಳು ಮೊತ್ತಮೊದಲು ಉಪಯೋಗಿಸಲ್ಪಟ್ಟವು. ಈಗಲಾದರೋ ಮಹತ್ವದ ಜವಾಬ್ದಾರಿ ಕೆಲಸಗಳಿಗೆ ವ್ಯಕ್ತಿಗಳನ್ನು ಆರಿಸುವಾಗಲೂ ಅವರ ಬುದ್ಧಿಶಕ್ತಿಯನ್ನು ಅಳೆಯುವ ಕ್ರಮವನ್ನಿಟ್ಟುಕೊಂಡಿದ್ದಾರೆ. ವಿದ್ಯಾರ್ಥಿ ವೇತನಗಳಿಗೆ ಅರ್ಹತೆಯನ್ನು ನಿರ್ಣಯಿಸುವಲ್ಲಿಯೂ ಬುದ್ಧಿಮಾಪಕ ಪ್ರಶ್ನೆಗಳನ್ನು ಕೇಳುವುದುಂಟು. ಸರಕಾರಿ ಮತ್ತು ಸೈನಿಕ ಇಲಾಖೆಗಳು ಹಾಗೂ ವಾಣಿಜ್ಯ ಕಚೇರಿಗಳು ಉದ್ಯೋಗಾಪೇಕ್ಷಿಗಳ ಬುದ್ಧಿಶಕ್ತಿಯನ್ನು ಅಳೆದುಕೊಂಡ ಬಳಿಕವೇ ಅವರನ್ನು ಸ್ವೀಕರಿಸುತ್ತಾರೆ. ೧೯೧೪–೧೮ ರ ಮಹಾಯುದ್ಧದ ಸಮಯದಲ್ಲಿ, ಅಮೇರಿಕದ ಸೇನಾಧಿಕಾರಿಗಳು ಎರಡು ಮಿಲಿಯ ಉಮೇದವಾರರ ಬುದ್ಧಿಶಕ್ತಿಯನ್ನು ಅಳೆದು ಆರಿಸಿದಂದಿನಿಂದ ಬುದ್ಧಿಮಾಪಕ ಪ್ರಯೋಗಗಳಿಗೆ ಮಹತ್ವ ಬಂತು. ಈಗೀಗ ಯುದ್ಧಕಾಲದಲ್ಲಿ ಸೈನಿಕರಾಗಿದ್ದವರು ಪ್ರಜಾಸಂಸ್ಥೆಗಳಲ್ಲಿ (Civil appointments) ಕೆಲಸ ಮಾಡಲು ಯೋಗ್ಯರೋ ಅಲ್ಲವೋ ಎಂಬುದನ್ನು ಕೂಡ ಬುದ್ಧಿಮಾಪನದಿಂದ ಕಂಡುಹಿಡಿಯಲುಪಕ್ರಮಿಸಿದ್ದಾರೆ.

ಒಬ್ಬೊಬ್ಬರ ರೀತಿ ಒಂದೊಂದು

ಆದರೆ, ವ್ಯಕ್ತಿಗೆ ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕವೇ ಅವನ ಬುದ್ಧಿಶಕ್ತಿಯನ್ನು ಅಳೆಯಲಾಗುವುದೆಂದು ಭಾವಿಸಬಾರದು. ವ್ಯಕ್ತಿ ಮತ್ತು ಸಂದರ್ಭಕ್ಕೆ ತಕ್ಕಂತೆ, ಇಂಥದೇ ಪರೀಕ್ಷೆ ಅಗತ್ಯವೆಂಬುದನ್ನು ನಿರ್ಣಯಿಸಲಿಕ್ಕೆ ಪರಿಣತರ ನೆರವು ಬೇಕಾಗುವುದು. ಬಾಯ್ದೆರೆ ಪರೀಕ್ಷೆಗೆ ತುಸು ನಾಚುವ ಹುಡುಗರು ಬರವಣಿಗೆಯಲ್ಲಿ ಜಾಣರಿರುತ್ತಾರೆಂತಲೂ ಬರೆಯಲಿಕ್ಕೆ ಅಳುಕುವ ಹುಡುಗಿಯರು ಬಾಯ್ದೆರೆ ಪರೀಕ್ಷೆಯಲ್ಲಿ ಚಾತುರ್ಯ ತೋರಿಸುವರೆಂತಲೂ ತೀರ ಎಳೆಯ ಮಕ್ಕಳು ಬರವಣಿಗೆಯೆಂದೊಡನೆ ದಿಗಿಲು ಬೀಳುವರೆಂತಲೂ ಪಾಶ್ಚಾತ್ಯ ಮನೋವಿಜ್ಞಾನಿಗಳ ಅಭಿಪ್ರಾಯ' ಹೀಗೆ ವ್ಯಕ್ತಿಯ ಒಲವು, ಆರಿಸುವ ಸಂದರ್ಭ' ಯಾವ ಕೆಲಸಕ್ಕೆ ಆರಿಸಲಿದೆಯೋ ಅದಕ್ಕೆ ಬೇಕಾದ ಯೋಗ್ಯತೆ — ಮುಂತಾದುವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬುದ್ಧಿಶಕ್ತಿಯನ್ನು ಅಳೆಯುವ ಪ್ರಯತ್ನ ಮಾಡಬೇಕು. ಅಷ್ಟೇ ಅಲ್ಲ, ಮಹತ್ವದ ನಿರ್ಧಾರಗಳನ್ನು ಕೈಕೊಳ್ಳುವ ಮುಂಚೆ, ತಿರುಗೊಮ್ಮೆ ಸವಿವರವಾದ ವ್ಯಕ್ತಿ ಪರೀಕ್ಷೆ (persona examination) ಮಾಡಿಯೇ ಒಬ್ಬನನ್ನು ಆರಿಸಬೇಕಾಗುವದು.

ಬೇರೆ ಯಾವ ವಿಧಾನದಿಂದಲೂ ಬೆಳಕಿಗೆ ಬರಲು ಅಸಾಧ್ಯವೆಂಬಂತಿದ್ದ ವಿಶೇಷ, ಸಾಮರ್ಥ್ಯಗಳು ಬುದ್ಧಿಮಾಪನದ ಮೂಲಕ ಬಯಲಿಗೆ ಬಂದ ಕೆಲವು ನಿದರ್ಶನಗಳೂ ಇವೆ. ಉದಾ: ಸಾರ್ಜಂಟ್ ಎಂಬಲ್ಲಿಯ ಒಬ್ಬ ಮಜೂರನು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ಶಾಲೆಬಿಟ್ಟಿದ್ದ. ಸೇನೆಗೆ ಸೇರಿಸುವ ಮುನ್ನ ಅವನ ಬುದ್ಧಿಶಕ್ತಿಯನ್ನು ಪರೀಕ್ಷಿಸಲಾಯಿತು. ಆಗ, ಅವನಲ್ಲಿ ಉಚ್ಚತರದ ಪ್ರಾಕೃತಿಕ ಸಾಮರ್ಥ್ಯವಿದೆಯೆಂದು (natural ability) ಗೊತ್ತಾಯಿತು. ಅವನನ್ನು ಸೈನಿಕ ಶಾಲೆಗೆ ಕಳಿಸಿದರು. ಅವನು ಆ ಶಾಲೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಹೊಂದಿ ಕಳೆದ ಮಹಾಯುದ್ಧದ ವೇಳೆ, ಮರುಭೂಮಿಯ ಕಾಳಗಗಳಲ್ಲಿ ಉಚ್ಚವರ್ಗದ ಸೇನಾಧಿಪತಿಯೆಂದು ಹೆಸರುಗಳಿಸಿದನಂತೆ. ಸಾಮಾನ್ಯ ತರದ ಶೈಕ್ಷಣಿಕ ಪರೀಕ್ಷೆಯಲ್ಲಾದರೆ, ಪ್ರಾಯಶಃ ಅವನು ಮೂಲ ಪರೀಕ್ಷೆಯಲ್ಲೇ ತೇರ್ಗಡೆ ಹೊಂದುತ್ತಿರಲಿಲ್ಲ.

ಕೊನೆಯದಾಗಿ, 'ಬುದ್ಧಿಶಕ್ತಿಯೇ ಸರ್ವಸ್ವ' ವೆಂದು ತಿಳಿಯಬಾರದು. ಅದು ಒಂದು ವರಿಷ್ಠ ಮಿತಿಯನ್ನು ಸೂಚಿಸುತ್ತದಷ್ಟೆ. ಆ ಮಿತಿಯನ್ನು ಮುಟ್ಟುವುದು ಯಾ ಮುಟ್ಟದಿರುವುದು ನಮ್ಮನ್ನೇ ಅವಲಂಬಿಸಿದೆ ಮಾತ್ರವಲ್ಲ, ಆ ಮಿತಿಯನ್ನು ಮುಟ್ಟದವರೆಲ್ಲಾ ಅತ್ಯಂತ ಬುದ್ಧಿವಂತರೆಂದು ಭಾವಿಸಲೂ ಬಾರದು.

ಉತ್ತರಗಳು

ಅವನು ಮೊದಲು ದೊಡ್ಡ ಪಾತ್ರೆಯಲ್ಲಿ ನೀರನ್ನು ತುಂಬಿ ಅದರಿಂದ ಸಣ್ಣಪಾತ್ರೆಯನ್ನು ತುಂಬಿಸುವನು; ಆಗ ದೊಡ್ಡ ಪಾತ್ರೆಯಲ್ಲಿ ೨ ಪಾವು ನೀರು ಉಳಿಯುವುದಷ್ಟೆ! ಸಣ್ಣಪಾತ್ರೆಯನ್ನು ಬರಿದುಮಾಡಿ, ಅದರಲ್ಲ ಆ ೨ ಪಾವುಗಳನ್ನು ಸುರಿಯುವನು. ಅನಂತರ ಪುನಃ ದೊಡ್ಡ ಪಾತ್ರೆಯನ್ನು ನೀರಿನಿಂದ ತುಂಬಿ ಎರಡೂ ಪಾತ್ರೆಗಳನ್ನು ಮನೆಗೆ ಕೊಂಡೊಯ್ಯುವನು. ದೊಡ್ಡ ಪಾತ್ರೆಯಲ್ಲಿ ೪ ಮತ್ತು ಸಣ್ಣದರಲ್ಲಿ ೨- ಹೀಗೆ ಒಟ್ಟು ೬ ಪಾವು ತಂದ ಹಾಗಾಯಿತಲ್ಲವೇ ?.

ಮೊದಲನೆಯ ಸಂಕೇತ:– ೧ ರಿಂದ ೫ ಅಂಕೆಗಳನ್ನು ಅನುಕ್ರಮವಾಗಿ ಮೊದಲಿನ ಐದು ಸ್ವರಾಕ್ಷರಗಳಿಂದ ಸೂಚಿಸಲಾಗಿದೆ. ಅರ್ಥಾತ್, ೧=ಅ ೨=ಆ ೩=ಇ ೪=ಈ ೫=ಉ ಅದುದರಿಂದ 'ಃ ಅ ಈ ಉ ಆ' ಎಂಬುದು ೯೧೪೫೨ ನ್ನು ಸೂಚಿಸುತ್ತದೆ.

ಎರಡನೆಯ ಸಂಕೇತ:– ಪ್ರತಿ ಅಕ್ಷರವು ವರ್ಣಮಾಲೆಯಲ್ಲಿ ತನ್ನ ನಂತರ ಬರುವ ಅಕ್ಷರವನ್ನು ಸೂಚಿಸುವುದು. ಅದುದರಿಂದ 'ಛಯಥಧ' ಅಂದರೆ ಮರಣದ

ಸಾಮಗ್ರಿ ಮತ್ತು ಕೆಲಸಗಾರರು ದೊರೆಯದೆ ಮನೆಕಟ್ಟಿಸುವ ಕೆಲಸ ನಿಂತು ಹೋಗಿದೆ.

ವಿರೋಧಾರ್ಥ ಸೂಚಿಸುವ ಪದಗಳು:– ಬಿಳಿ, ಬಿಣ, ಮೆತ್ತಗೆ, ಒಮ್ಮೆಲೇ, ಬಿಚ್ಚು.

(R. F. Lambert ರ Measuring Intelligence ಎಂಬುದನ್ನು ಆಧರಿಸಿ ಬರೆದುದು.)

ಕರ್ನಾಟಕ

ಧಾರವಾಡ

ಧಾರವಾಡ ಜಿಲ್ಲೆಯ ಗ್ರಾಮೋದ್ಧಾರ ಕಾರ್ಯಕರ್ತರ ಅಭ್ಯಾಸಿಕ್ಷಣ ವರ್ಗವು ಹುಬ್ಬಳ್ಳಿಯಲ್ಲಿ ದಿಸೆಂಬರ ೩ ನೇ ಪಕ್ಷದಲ್ಲಿ ಪ್ರಾರಂಭವಾಗುವದು. ಧಾರವಾಡ ಹುಬ್ಬಳ್ಳಿ, ಕಲಘಟಗಿ ಹಾಗು ಗುಡಗೇರಿ ತಾಲೂಕುಗಳ ಕಾರ್ಯಕರ್ತರು ಈ ವರ್ಗದಲ್ಲಿ ಸೇರಬಹುದು. ಅಂಥವರು ದಿಸೆಂಬರ ೧೦ರೊಳಗಾಗಿ ಜಿಲ್ಲಾ ಗ್ರಾಮೋದ್ಧಾರ ಸಮಿತಿಯ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕು.

ಧುಂಡಸಿ ಗ್ರಾಮ ಭತ್ತ ಬೆಳೆವ ರೈತರ ಸಭೆ ೨೫ಕ್ಕೆ ಕೂಡಿ ನವಂಬರ ೧೧ ನೇ ತಾರೀಕಿನ ಸಭೆಯಲ್ಲಿ ಗೊತ್ತಾದ ನಿರ್ಣಯಗಳಿಗೆ ಸರಕಾರದ ಉತ್ತರ ಬಾರದ್ದರಿಂದ ಮತ್ತೆ ೧೨-೧೨-೪೮ಕ್ಕೆ ಸಭೆ ಸೇರಬೇಕೆಂದು ಗೊತ್ತಾಯಿತು.

ಚಿಕ್ಕೇರೂರಲ್ಲಿ ಕಾಳಿನ ಲಾಯಸೆನ್ಸ ಇದ್ದವರ ಮನೆಗಳನ್ನು ಅಧಿಕಾರಿಗಳು ಝಡತಿ ನೂಡಿದರು. ಎರಡು ಭತ್ತದ ಗಿರಣಿಗಳಲ್ಲಿ ಕೂಡಿ ಸರಕಾರಕ್ಕೆ ತಿಳಿಸದೆ ಇದ್ದ ೪೦೦ ಭತ್ತದ ಚೀಲ ಹೆಚ್ಚಾಗಿ ಹೊರಟವು. ಅವೆಲ್ಲ ಜಪ್ತ ಮಾಡಲಾದವು. ಮತ್ತೊಬ್ಬರ ಮನೆಯಲ್ಲಿ ೩೪ ಚೀಲ ಗೋದಿ ಹೊರಟವು.

ಗದುಗಿನ ಪ್ರಸಿದ್ಧ ವ್ಯಾಪಾರಸ್ಥರಾಗಿರುವ ಶ್ರೀ ರಾಮರಾವ ಮಹೀಂದ್ರಕರರ ಮೇಲಿನ ಅಲ್ಲಿಯ ಹರಿಮಂದಿರದ ಸಾಮಾನುಗಳನ್ನು ದರೋಡೆ ಮಾಡಿದರೆಂಬ ಅಪಾದನೆಯ ವಿಚಾರಣೆ ಮುಂಬೈ ಹಾಯಕೋರ್ಟಿನಲ್ಲಿ ನಡೆದು ಅವರು ನಿರ್ದೋಷಿಗಳೆಂದು ಬಿಡುಗಡೆ ಹೊಂದಿದರು. ತನ್ನಿಮಿತ್ತ ಕಳೆದ ರವಿವಾರ ಶ್ರೀ ವೆಂಕಟರಾವ ನಾಯಕರ ಅಧ್ಯಕ್ಷತೆಯಲ್ಲಿ ಅವರ ಮಿತ್ರರು ಅವರನ್ನು ಸತ್ಕರಿಸಿದರು.

ಧಾರವಾಡದಲ್ಲಿಯ ಅಗ್ಗದರದ ಅಂಗಡಿಗಳಲ್ಲಿ ಅಕ್ಕಿಯ ಪ್ರಮಾಣ ಕಡಮೆ ಮಾಡಿದ್ದರಿಂದ ಮತ್ತು ಪೇಟೆಯಲ್ಲಿ ಅಕ್ಕಿ ಸಿಕ್ಕದಂತಾದ್ದರಿಂದ ಜನರು ಗೋಳಾಡುತಿರುವರು.

ಶಿಗ್ಗಾವಿ ತಾಲೂಕಿನ ಕಾಮನಹಳ್ಳಿಯಲ್ಲಿ ಮಳೆಯಿಂದ ಭತ್ತದ ಮೆದಿಗಳು ಕೊಳಿ ಹೋಗಿವೆ; ನಿಂತ ಬೆಳೆಯೂ ಕೆಟ್ಟುಹೋಗಿದೆ. ಜಕ್ಕನಕಟ್ಟಿಯಲ್ಲಿಯೂ ಬೆಳೆ ನಾಶವಾಗಿದೆ. ಬಣಿವೆಗಳಲ್ಲಿಯೂ ನೀರು ಹೊಕ್ಕಿದೆ.

ಸರಕಾರದ ನಿಯಂತ್ರಣ ಧೋರಣದಿಂದ ರೈತರ ಮೇಲೆ ಆಗುವ ಪರಿಣಾಮಗಳ ಬಗ್ಗೆ ವಿಚಾರ ಮಾಡಲು ಇದೇ ೧೧ ನೇ ತಾರೀಕಿಗೆ ಹಿರೇಕೆರೂರ ತಾಲೂಕ ರೈತಪರಿಷತ್ತು ಶ್ರೀ ಬಿ. ಆರ್. ತಂಬಾಕದ ಇವರ ಅಧ್ಯಕ್ಷತೆಯಲ್ಲಿ ಜರುಗುವದು.

ಕುಮಟಾ ನಗರಸಭೆಯ ಹಿಂದಿನ ಅಧ್ಯಕ್ಷರೂ ಮುಸಲ್ಮಾನ ಮುಂದಾಳುಗಳೂ ಆಗಿದ್ದ ಬಸ್ತಿ ಮಹಮ್ಮದ ಅಲ್ಲಿ ಸಾಹೇಬರು ಕಳೆದವಾರ ಕುಮಟೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಬೆಳಗಾವಿ

ಬೆಳಗಾವಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಬಹಳ ಮಳೆಯಾಗಿ ಮುಂಗಾರಿ ಹಾಗು ಹಿಂಗಾರಿ ಬೆಳೆ ಬಹಳ ಧಕ್ಕೆಗೊಂಡಿದೆ. ಕಳೆದ ಒಂದೆರಡು ವರುಷಗಳಿಂದ ಈ ಭಾಗದಲ್ಲಿ ಒಂದಿಲ್ಲೊಂದು ಕಾರಣದಿಂದ ಇದೇ ಹುಕ ವಸ್ಥೈಕರದು.

ಪ್ರತಿಯೊಬ್ಬ ಭತ್ತ ಬೆಳೆಯುವವರಿಗೆ ಒಂದು ವರ್ಷಕ್ಕೆ ತಲಾ ೪ ಖಂಗಾಲಿ ಮನೆ ಭತ್ತ ಮತ್ತು ಚಿಕ್ಕ ಹುಡುಗರಿಗೆ ಅದರ ಅರ್ಧದಷ್ಟು ಭತ್ತ ಬಿಟ್ಟು ಉಳಿದ ಎಲ್ಲ ಭತ್ತವನ್ನು ಸರಕಾರದವರು ವಶಪಡಿಸಿಕೊಳ್ಳುವರು. ಜಮೀನದಾರರಿಗೆ ೩೦ ಮಣ ಧಾನ್ಯದ ಮನೆಗೆ ಬಿಟ್ಟು ಹೆಚ್ಚಿಗೆ ಬೆಳೆದದ್ದರಲ್ಲಿ ಸರಿಯಾಗಿ ಅರ್ಧ ತೆಗೆದುಕೊಳ್ಳುವರು. ೩೦ ಮಣಕ್ಕಿಂತ ಕಡಮೆ ಬೆಳೆದವರಿಂದ ಧಾನ್ಯ ಎತ್ತುವದಿಲ್ಲವೆಂದು ಸರಕಾರ ನಿರ್ಧರಿಸಿದೆಂದು ಮುಂಚಾಗಿ ಜಿಲ್ಲಾ ಕಲೆಕ್ಟರರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ವಿಜಾಪುರ

ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದ ಕಾರ್ಯಕರ್ತರ ತರಬೇತಿ ವರ್ಗವು ಬಾಗಲಕೋಟೆಯ ಸರಕಾರಿ ಒಕ್ಕಲತನ ಶಾಲೆಯಲ್ಲಿ ಉಪಮಂತ್ರಿ ಶ್ರೀ ಕಂಠಿಯವರಿಂದ ಪ್ರಾರಂಭಿಸಲ್ಪಟ್ಟಿತು. ಇತ್ತೀಚಿನ ಕಾಯದೆಗಳ ಜ್ಞಾನ ಮಾಡಿಕೊಡಲಾಗುವದು ಮತ್ತು ಹಳ್ಳಿಯ ಸುಧಾರಣೆಗೆ ಅವಶ್ಯವಿರುವ ಮುಖ್ಯ ವಿಷಯಗಳನ್ನು ಅವರಿಗೆ ತಿಳಿಸಿ ಹೇಳಲಾಗುವದು.

ವಿಜಾಪುರದ ವನಿತಾ ಉತ್ಕರ್ಷ ಮಂಡಳದವತಿಯಿಂದ ಗಾಂಧೀ ಸ್ಮಾರಕ ನಿಧಿಗೆ ೭೨೧ ರೂ. ಕೊಟ್ಟಿರುವರೆಂದು ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇತ್ತೀಚೆ ಆದ ಮಳೆಯಿಂದ ಜಿಲ್ಲೆಯಲ್ಲಿಯ ಗೋದೀ ಬೆಳೆಗೆ ಹಾನಿಯುಂಟಾಗಿದೆ. ಹಿಂಗಾರಿ ಜೋಳಕ್ಕೆ ಎಡೆ ಹೊಡೆಯುವದು ಕೂಡ ಆಗಲಿಲ್ಲ.

ಮುದ್ದೇಬಿಹಾಳ ತಾಲೂಕಿನಲ್ಲಿ ಒಟ್ಟಿಗೆ ೬೧೨೨–೧೪–೦ ಗಾಂಧಿ ಸ್ಮಾರಕ ನಿಧಿ ಕೂಡಿದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬಳ್ಳಾರಿ

ರಾಯಲ ಸೀಮಾ ಮಹಾಜನ ಸಭೆಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ರಾಯಲ ಸೀಮೆಯ ಕೊರತೆಯ ಜಿಲ್ಲೆಗಳಲ್ಲಿ ಒತ್ತಾಯದ ಧಾನ್ಯವಸೂಲಿ ಮಾಡದಿರಲು ಮದ್ರಾಸ ಸರಕಾರವನ್ನು ಕೇಳಿಕೊಳ್ಳಲು ೧೪ ಜನರ ಶಿಷ್ಟಮಂಡಳವೊಂದನ್ನು ನೇಮಿಸಲಾಯಿತು.

ವಿಶ್ವಬ್ರಾಹ್ಮಣ ಸಮಾಜದ ಸ್ವಾಮಿಗಳು, ಕೆ. ಅಪ್ಪಯ್ಯಾಚಾರಿಯವರು ಬಾಲ ವಿಧವೆಯನ್ನು ಲಗ್ನವಾದುದಕ್ಕೆ ಅವರ ಮೇಲೆ ಬಹಿಷ್ಕಾರ ಹಾಕಿದ್ದರಷ್ಟೆ. ಈ ಸಂಬಂಧದಲ್ಲಿ ಸ್ವಾಮಿಗಳ ಮೇಲೆ ನಷ್ಟ ಪರಿಹಾರ ದಾವೆಯನ್ನು ಹೂಡಲಾಗಿತ್ತು. ಅದರಲ್ಲಿ ಸ್ವಾಮಿಗಳ ವಿರುದ್ಧ ತೀರ್ಪು ಕೊಡಲ್ಪಟ್ಟು ಅವರಿಂದ ನಾಮಮಾತ್ರ ೧ ರು. ನಷ್ಟ ಕೊಡಿಸಬೇಕೆಂದು ವಿಧಿಸಲಾಯಿತು.

ಉತ್ತರ ಕನ್ನಡ

೧೯೪೬ ರಲ್ಲಿ ಭಟಕಳದಲ್ಲಿ ತ್ರೈಜರಿ ಅವಲಕಾರಕೂನರಾಗಿದ್ದ ಶ್ರೀ ಜಿ. ಎನ್. ಹೆಗಡೆ ಇವರಿಗೆ ಸರಕಾರೀ ತಿಜೋರಿಯಿಂದ ೪ ಸಾವಿರ ರೂ. ಎತ್ತಿಹಾಕಿ ವಿಶ್ವಾಸಘಾತ ಮಾಡಿದ್ದಕ್ಕೆ ಒಂದು ವರುಷ ಕಠಿಣ ಶಿಕ್ಷೆ ಮತ್ತು ೨೦೦೦ ರೂಪಾಯಿ ದಂಡವಾಯಿತು. ಈ ಶಿಕ್ಷೆಯ ವಿರುದ್ಧ ಅಪೀಲ ಮಾಡಲಿದ್ದುದರಿಂದ ಅವರೀಗ ಜಾಮೀನ ಮೇಲೆ ಬಿಡಲ್ಪಟ್ಟಿದ್ದಾರೆ.

ಕಳೆದ ೨೨ ಹಾಗು ೨೩ಕ್ಕೆ ಮುಂಬಯಿಯಲ್ಲಿ ಸಂಭವಿಸಿದ ಸುಂಟರ ಗಾಳಿ ಅವಾಂತರದಲ್ಲಿ ಹೊನ್ನಾವರ ವ್ಯಾಪಾರಿಗಳ ೫ ಮಚವೆಗಳೂ ಕಂಪ್ರಾಟದಾರ ಶಿವನಸೇಠರ ಮುನ್ನೂರು ಟನ್ ಇರಾವತಿ ಹಡಗಿಗೆ ಹೇರಿಕೊಂಡ ಮಚವೆಯೊಂದೂ ಮುಳುಗಿದ ಸುದ್ದಿ ಬಂದಿದೆ.

ಉತ್ತರ ಕನ್ನಡ ಜಿಲ್ಲಾ ಗಾಂಧಿ ರಾಷ್ಟ್ರೀಯ ನಿಧಿಯು ತಾ. ೮ ರಿಂದ ೧೩ ರ ವರೆಗೆ ೬೫೦೦ ರೂ ಕೂಡಿದ್ದು ಒಟ್ಟಿಗೆ ಈಗ ೧೪೯೭೬-೧೫-೩ ಕೂಡಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ದಕ್ಷಿಣ ಕನ್ನಡ

ದಿನಾಂಕ ೨೭ ರಂದು ಮಂಗಳೂರಲ್ಲಿ 'ಸಂಯುಕ್ತ ಕರ್ನಾಟಕ' [illegible] ಶ್ರೀ ಎಂ. ಆರ್. [illegible] ಗಳು [illegible] ಸಂಘದ [illegible] ಕನ್ನಡ [illegible] ಶ್ರೀ [illegible] ಗಳನ್ನು [illegible] ಹೇಳಿದರು. [illegible] ಕಾರ್ಯಕ್ರಮ [illegible] ನೆರವೇರಿತು.

ಮಂಗಳೂರಲ್ಲಿ ದಿನಾಂಕ ೧೫ ರಂದು ನಡೆದ ಜಿಲ್ಲೆಯ ಪೌರಶಿಕ್ಷಣ ಶಿಬಿರವು ದಿನಾಂಕ ೨೪ ರಂದು ಕೊನೆಗೊಂಡಿತು. ಆ ದಿನ ಜಿಲ್ಲಾ ಅಧ್ಯಾಪಕ ಸಂಘದವರು ಶಿಬಿರದ ಅಧ್ಯಕ್ಷ ಶ್ರೀ ಟಿ. ಏ. ನೀಲಕಂಠ ಅವರನ್ನು, ಶಿಬಿರದ ವ್ಯಾಖ್ಯಾತರನ್ನು ಸತ್ಕರಿಸಿದರು. ಮದ್ರಾಸು ವಿದ್ಯಾಶಾಖೆಯ ಡೈರೆಕ್ಟರ್ ಶ್ರೀ ಬಿ. ಶಿವ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಜರುಗಿತು.

ದಕ್ಷಿಣ ಭಾರತ ರೈಲು ಕಂಪೆನಿಯ ಜನರಲ್ ಮೇನೇಜರ್ ಕೆ. ದೊರೈಯವರು ದಿನಾಂಕ ೨೩ ರಂದು ಮಂಗಳೂರಿಗೆ ಬಂದಾಗ, ವಾಣಿಜ್ಯ ಸಂಘದವರು ಅವರಿಗೊಂದು ಮನವಿಯನ್ನೊಪ್ಪಿಸಿದರು. ಅದಕ್ಕವರು ಉತ್ತರವೀಯುತ್ತಾ, ಮಂಗಳೂರು ರೈಲ್ವೆ ನಿಲ್ದಾಣದ ಸುಧಾರಣೆ ಮಾಡಲಾಗುವುದೆಂದೂ ಬಂದರಗಳ ವಿಚಾರದಲ್ಲಿ ತನ್ನ ಮನಸ್ಸಿಗೆ ಭಟ್ಕಳವೇ ಅದೃಷ್ಟಶಾಲಿಯೆಂದೂ ಹೇಳಿದರು.

ಮಂಗಳೂರಲ್ಲಿ ಇತ್ತೀಚೆಗೆ ಆರ್. ಎಸ್. ಎಸ್. ಚಳವಳಿಯು ಕಾಣಬರುತ್ತಿದೆ. ಪೋಲೀಸು ಅಧಿಕಾರಿಗಳು ಶ್ರೀಗಳಾದ ಟಿ. ಜಿ. ಕಾಮತ್; ಉಪೇಂದ್ರನಾಥ ಪಾಲ್; ಕೆ. ಸೂರ್ಯನಾರಾಯಣ ಅಡಿಗ; ವಿಶ್ವನಾಥ ಶೆಣೈ ಮೊದಲಾದವರ ಮನೆಗಳನ್ನು ಝಡತಿ ಮಾಡಿ ಕೆಲವೊಂದು ಪತ್ರ, ಸಾಹಿತ್ಯವನ್ನು ಕೊಂಡೊಯ್ದರು.

ಉಡುಪಿ ಮುನಸಿಪಲ್ ಕ್ಷೇತ್ರದಲ್ಲಿ ದಿನಾಂಕ ೩೧ ರಿಂದ ಸೀದಾ ಪ್ರಾರಂಭವಾಗಿದ್ದು ಪ್ರಾಯಸ್ಥರಿಗೆ ೮ ಔನ್ಸ ಅಕ್ಕಿ ೨ ಔನ್ಸ ಗೋದಿ ಕೊಡುತ್ತಿರುವರು.

ಕನ್ನಡ ಸಂಸ್ಥಾನ

ಕಳೆದ ಒಂದು ವಾರದಿಂದ ಮಳೆಯಿಂದ ಅನವಟ್ಟಿಯ ಸುತ್ತಮುತ್ತಲಿನ ಭಾಗಗಳಲ್ಲಿಯ ಭತ್ತದ ಬೆಳೆಗಳು ಕೆಟ್ಟು ಹೋಗಿವೆ.

ಮೈಸೂರಿನ ಪ್ರಸಿದ್ಧ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ನಂಜರಾಜ ಅರಸರವರು ಸ್ವಾ. ಶರಣಶಿವಯ್ಯನವರ ನಿವೃತ್ತಿ ಮತ್ತು ಶ್ರೀ ಸಿದ್ಧಲಿಂಗಯ್ಯನವರ ಇತ್ತೀಚಿನ ಹೇಳಿಕೆ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡುತ್ತ ಮೈಸೂರಿಗೆ ಇದೊಂದು ದುರ್ದಿನವೇ ಸೈ. ಮೈಸೂರಿನ ಭಾವೀ ಪ್ರಗತಿಯ ಬಗ್ಗೆ ಇದೇನು ಸುಲಕ್ಷಣವಲ್ಲ. ಕಾರ್ಯಪಾಲಕ ಮತ್ತು ನ್ಯಾಯ ಶಾಖೆಗಳು ಬೇಗ ಪ್ರತ್ಯೇಕಿಸಲ್ಪಟ್ಟಷ್ಟು ಸಂಸ್ಥಾನಕ್ಕೆ ಮತ್ತು ಜನತೆಗೆ ಹಿತಕಾರಿಯಾದೀತು ಎಂದು ಹೇಳಿದರು.

ಕೊಡಗಿನಲ್ಲಿ ದನಗಳ ಜಾತ್ರೆ

ಕೊಡಗು [illegible] ಸಂತೆ ಸಮೀಪ [illegible] ದೇವ ಬಾಣೆಯಲ್ಲಿ ೧೯೪೮ ನೇ ಡಿಸೆಂಬರ್ ೧೬ ನೇ ತಾರೀಕಿನಿಂದ ೨೪ ರ ವರೆಗೆ ೯ ದಿವಸಗಳಲ್ಲಿ ಜಾನುವಾರುಗಳ ಒಂದು ಮಹಾ ಜಾತ್ರೆಯು ನಡೆಸಲ್ಪಡುತ್ತೆ. ಈ ಜಾತ್ರೆಯಲ್ಲಿ ದನಗಳಿಗೆ ಹುಲ್ಲು ನೀರಿನ ಸೌಲಭ್ಯ ಚೆನ್ನಾಗಿರುತ್ತದೆ. ಪ್ರದರ್ಶಕರಿಗೆ ಬಹುಮಾನ ಕೊಡಲಾಗುತ್ತದೆ. ಉತ್ತಮ [illegible] ವಾಹನಗಳಿಗೆ ಬಹುಮಾನ [illegible]. ಸರ್ವರೂ ಈ ಜಾತ್ರೆಗೆ ದಯಮಾಡಿಸಿ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಅಲ್ಲದೆ ವಸ್ತುಪ್ರದರ್ಶನದ ಏರ್ಪಾಡು ಮಾಡಲ್ಪಟ್ಟಿದೆ. ಜನತೆಗೆ ಬೇಕಾದ [illegible] ಯುಕ್ತ ಭಾಷಣಗಳೂ ಮನರಂಜನೆಯ [illegible] ಚಿತ್ರ [illegible] ಸಕಲ ಏರ್ಪಾಡುಗಳಿವೆ.

ಎ. ಸಿ. [illegible] ೮–೧೨–೪೮ ಕ್ಕೆ ಮೇಲ್ಕಂಡ ಸ್ಥಳದಲ್ಲಿ [illegible] ಜರುಗುತ್ತದೆ. ಹೆಚ್ಚಿನ ಮಾಹಿತಿ ಬಗ್ಗೆ ಗೌರವ ಕಾರ್ಯದರ್ಶಿ ಎನ್. ಕೆ. ಮುತ್ತಣ್ಣ ಅವರಿಗೆ ಬರೆಯಬೇಕು.

ಹಿಂದುಸ್ತಾನ

ಮುಂಬಯಿ

ಹಿಂದುಸ್ತಾನದ ಹಿರಿಯೋಲಗದ ಅಧ್ಯಕ್ಷರಾದ ಶ್ರೀ ಮಾವಳಂಕರರು ನವೆಂಬರ ತಾ. ೨೪ ರಂದು ಸೂರತ ನಗರದಲ್ಲಿ ನೆರೆದ ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣಮಾಡುತ್ತ, ಆಹಾರ ಬಟ್ಟೆಯ ಬಗ್ಗೆ ಸದ್ಯದ ಪರಿಸ್ಥಿತಿಯಲ್ಲಿ ಯೋಜನೆ ಬಗೆಯ ನಿಯಂತ್ರಣವಿಚಾರದಿಂದೂ ಇಂಥ ಅಧಿಕಾರಿಗಳ ಮತ್ತು ಸಾಮಾನ್ಯ ಮನುಷ್ಯರ ನೀತಿಯು ಮಟ್ಟವು ತೀರ ಕೆಳಗಿಳಿದಿದ್ದು ನಿಯಂತ್ರಣದಿಂದ ಅದು ಇನ್ನೂ ಅಧಃಪಾತಕ್ಕೆ ಹೋಗುವದೆಂದೂ ಉದ್ಗಾರ ತೆಗೆದರು.

ನವೆಂಬರ ತಾ. ೨೮ ರಂದು ಮುಂಬಯಿ ಪೋಲೀಸ ಹೆಡ್ ಕ್ವಾರ್ಟರ್ಸನಲ್ಲಿ ಮುಖ್ಯ ಸ್ಥಳದ ಪೈಲಟಿಗ್ರವನ್ನು ಅನಾವರಣಗೊಳಿಸುತ್ತ ಗೃಹಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ಮಹಾತ್ಮರ ಉಪದೇಶಗಳನ್ನು ಆಚರಣೆಯಲ್ಲಿ ತರಬೇಕೆಂದು ಹೇಳಿದರು. ನಗರದಲ್ಲಿ ಬಿಕ್ಕಟ್ಟಿನ ಪ್ರಸಂಗ ಬಂದಾಗೆಲ್ಲ ಪೋಲೀಸ ದಳವು ಒಳ್ಳೆ ದಕ್ಷತೆಯುಂಥ ಕಾರ್ಯ ಮಾಡುತ್ತ ಬಂದುದಕ್ಕೆ ಆ ಖಾತೆಯನ್ನು ಅಭಿನಂದಿಸಿದರು.

ಸದ್ಯದ ಬಟ್ಟೆ ಹಾಗೂ ನೂಲಿನ ಸಾಗಾಟ ನಿಯಂತ್ರಣದ ಕಾಯದೆಯ ಮೇರೆಗೆ ಶುದ್ಧ ಖಾದಿಯ ಸಾಗಾಟಕ್ಕೆ, ಜವಳಿ ಕಮಿಶನರ, ಇಲ್ಲವೆ ಪ್ರಾಂತಿಕ ಅಥವಾ ಸಂಸ್ಥಾನ ಜವಳಿ ಅಧಿಕಾರಿಗಳ ಪರವಾನಿಗೆ ಅವಶ್ಯವಿಲ್ಲವೆಂದೂ ಆದರೆ ಶುದ್ಧ ಖಾದಿಯಂಥ ಬಗ್ಗೆ ರೇಲ್ವೆ ಅಧಿಕಾರಿಗಳಿಗೆ ಅ. ಭಾ. ಚರಖಾ ಸಂಘದ ಸರ್ಟಿಫಿಕೇಟ ಹಾಜರ ಮಾಡಬೇಕಾಗುವದೆಂದೂ ಕೈ ನೂಲಿನ ಬಗ್ಗೆಯೂ ಇದೇ ನಿಯಮವಂತೆ ಅಪ್ಪಣೆ ಕೊಡಲಾಗುವದೆಂದೂ ಪ್ರಕಟನೆ ಹೊರಟಿದೆ.

ಬಿರುಗಾಳಿಯ ಪರಿಣಾಮದಿಂದ ಕಣ್ಮರೆಯಾದವೆಂದು ವರದಿಯಾದ ಅನೇಕ ನಾವೆಗಳ ಪೈಕಿ ೯೪ ನಾವಿಕರಲ್ಲಿ ೯೦ ಜನರು ಪಾರಾಗಿ ದಂಡೆಗೆ ಬಂದಿದ್ದಾರೆಂದು ತಿಳಿಯುತ್ತದೆ.

ಮುಂಬಯಿಯಲ್ಲಿ ಬೀಸಿದ ಬಿರುಗಾಳಿಯಿಂದ ಮುಂಬಯಿ ನಗರಕ್ಕೆ ೫ ಕೋಟಿ ರೂ.ಗಳಷ್ಟು ಹಾನಿಯಾಗಿದೆಯೆಂದೂ ಚೆಂಬೂರ ಶಿಬಿರದಲ್ಲಿದ್ದ ಪಾಕಿಸ್ತಾನದಿಂದ ಬಂದ ನಿರಾಶ್ರಿತರು ಮತ್ತೆ ಅನಾಥರಾಗುವ ಸ್ಥಿತಿ ಬಂದಿತೆಂದೂ ತಿಳಿಯುತ್ತದೆ.

ಮುಂಬಯಿ ಬಿರುಗಾಳಿಯಿಂದ ಹಾನಿಗೊಂಡ ಸಂತ್ರಸ್ತರಿಗೆ ಮತ್ತು ನಿರಾಶ್ರಿತರಿಗೆ ಕೂಡಲೆ ಸಹಾಯ ನೀಡಲು ಸರ್ ರತನ ಟಾಟಾ ಚಾರಿಟಿ ಟ್ರಸ್ಟಿನ ಧರ್ಮದರ್ಶಿಗಳು ೧೧ ಸಾವಿರ ರೂಪಾಯಿ ಕೊಡಮಾಡಿದ್ದಾರೆಂದು ಸರಕಾರಿ ಸುದ್ದಿ ಖಾತೆಯ ಪ್ರಕಟನೆ ಹೊರಟಿದೆ.

ಬಿರುಗಾಳಿಗೆ ಗುರಿಯಾದ ಸಂತ್ರಸ್ತರ ಸಹಾಯಾರ್ಥವಾಗಿ ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಅವರು ೧೦ ಸಾವಿರ ರೂಪಾಯಿ ದಾನ ಮಾಡಿದ್ದಾರೆಂದು ತಿಳಿಯುತ್ತದೆ.

ಮುಂಬಯಿ ಕನ್ನಡಿಗರು ಒಂದು ಸಾಹಿತ್ಯ ಕೂಟವನ್ನು ಏರ್ಪಡಿಸಿದ್ದು ಪ್ರತಿ ತಿಂಗಳ ಕೊನೆಯ ಶನಿವಾರ ಮಾತುಂಗದ ಕನ್ನಡ ಸಂಘದಲ್ಲಿ ಕಳೆದ ೧೦ ತಿಂಗಳಿಂದ ಈ ಕೂಟವು ಕೂಡುತ್ತ ಬಂದಿದೆ. ಸಾಹಿತ್ಯ ಕೂಟದ ಕಾರ್ಯಕಲಾಪಗಳಲ್ಲಿ ಭಾಗವಹಿಸ ಬಯಸುವ ಮುಂಬಯಿ ಕನ್ನಡಿಗರು ತಮ್ಮ ವಿಳಾಸದೊಂದಿಗೆ ಕಾರ್ಯದರ್ಶಿ ಕನ್ನಡ ಸಂಘ ಮಾತುಂಗ ಇವರಿಗೆ ಬರೆಯಬೇಕು.

ಮುಂಬಯಿ ಸಾಹಿತ್ಯ ಕೂಟದ ಪರವಾಗಿ ೨೭–೧೧ ೪೭ ರಂದು ಸೇರಿದ ಸಭೆಯಲ್ಲಿ ಶ್ರೀ ರಂ. ಶ್ರೀ. ಮುಗಳಿಯವರು ಬರೆದ "…ನ್ನ" ಕಾದಂಬರಿಯ ವಿಮರ್ಶೆ ಮಾಡಲಾಯಿತು. ವಿಮರ್ಶೆಯಲ್ಲಿ ಕ್ಷಾಮದಂತಹ ದುರಂತ ಚಿತ್ರವನ್ನು ಕಾದಂಬರಿಯ ರೂಪದಲ್ಲಿ ಕೊಡಲೆತ್ನಿಸಿದ ಶ್ರೀ ಮುಗಳಿಯವರು ಅಭಿನಂದನಾರ್ಹರಾದರೂ ರಚನಾದೋಷ, ಪಾತ್ರನಿರೂಪಣ ದೌರ್ಬಲ್ಯಗಳಿಂದ ಕಾದಂಬರಿಯು ಮೇಲ್ಮಟ್ಟ ಪಡೆದಿಲ್ಲವೆಂದು ಸ್ಥೂಲವಾಗಿ ಅಭಿಪ್ರಾಯ ಪಡಲಾಯಿತು ಎಂದು ಮೊದಲಾಗಿ ಸಾಹಿತ್ಯ ಕೂಟದ ಕಾರ್ಯದರ್ಶಿಗಳು ತಿಳಿಸುತ್ತಾರೆ. ಮುಂದಿನ ಸಭೆಯು ಡಿಸೆಂಬರ ೨೫ ಕ್ಕೆ ಸೇರುವದು.

ಹಿಂದುಸ್ತಾನ ಸರಕಾರದವರು ಮದ್ರಾಸ ಪ್ರಾಂತಕ್ಕೆ ಡಿಸೆಂಬರ ತಿಂಗಳಿಗಾಗಿ ೩೧,೫೦೦ ಟನ್, ೧೯೪೮ ನೆಯ ಜಾನೇವರಿ ತಿಂಗಳಿಗಾಗಿ ೨೭,೦೦೦ ಟನ್ ಹೀಗೆ ಆಹಾರ ಧಾನ್ಯ ಕೊಡಮಾಡಿರುವರೆಂದು ಅಧಿಕೃತ ಪ್ರಕಟನೆ ಹೊರಬಿದೆ.

ಮದ್ರಾಸ

ದೇಶದಲ್ಲಿ ಉತ್ಪನ್ನ ಉದ್ಯೋಗವನ್ನು ಅಭಿವೃದ್ಧಿಗೊಳಿಸುವದಕ್ಕಾಗಿ ಭಾರತ ಸರಕಾರವು ಯೋಜಿಸಿದ್ದು, ಆ ಯೋಜನೆಯಂತೆ ದಕ್ಷಿಣ ಹಿಂದುಸ್ತಾನದಲ್ಲಿ ಒಂದು ಕಬ್ಬಿಣ ಕಾರಖಾನೆಯನ್ನು ಸ್ಥಾಪಿಸಲು ಅನುಮತಿ ಕೊಡಬೇಕೆಂದು ಮದ್ರಾಸ ಸರಕಾರವು ಉದ್ಯೋಗಿಕ ಖಾತೆಗೆ ಕಾರ್ಯ ಬರೆದಿದೆಯೆಂದು ತಿಳಿಯುತ್ತದೆ.

ಆಂಧ್ರದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಅದೊಂದು ಪ್ರತ್ಯೇಕ ಆಡಳಿತೆಯ ಘಟಕವಾಗುವದು ಅತ್ಯವಶ್ಯ ಎಂಬುದಾಗಿ ನವೆಂಬರ ತಾ ೨೮ ರಂದು ಸರ್ ಎಸ್. ವಿ. ರಾಮಮೂರ್ತಿಯವರು "ಆಂಧ್ರ ಪ್ರಾಂತ ಸಪ್ತಾಹ"ವನ್ನು ಉದ್ಘಾಟಿಸುತ್ತ ಹೇಳಿದರು.

ಮದ್ರಾಸ ನಾಗರಿಕರು ಡಿಸೆಂಬರ ೮ ಕ್ಕೆ ಗ. ಜ. ಶ್ರೀ ರಾಜಗೋಪಾಲಾಚಾರ್ಯರ ವರ್ಧಂತಿಯನ್ನು ವೈಭವದಿಂದ ಮಾಡಬೇಕೆಂದು ನಿರ್ಧರಿಸಿ ಶ್ರೀ ಕಾಮರಾಜ ನಾಡರರ ಅಧ್ಯಕ್ಷತೆಯಲ್ಲಿ ಒಂದು ಉತ್ಸವ ಮಂಡಲ ರಚಿಸಿದ್ದಾರೆಂದೂ ಈ ಸಮಾಚಾರ ತಿಳಿದು ಗ ಜ ಶ್ರೀ ರಾಜಗೋಪಾಲಾಚಾರ್ಯರು ಶ್ರೀ ನಾಡರರಿಗೆ ಒಂದು ತಂತಿ ಕಳಿಸಿ ತಮ್ಮ ವರ್ಧಂತಿ ಉತ್ಸವದ ವಿಚಾರ ಬಿಟ್ಟುಕೊಡಬೇಕೆಂದು ತಿಳಿಸಿದ್ದಾರೆಂದೂ ಸುದ್ದಿ ಬಂದಿದೆ.

ಹೊಸದಿಲ್ಲಿ

ನವೆಂಬರ ತಿಂಗಳಲ್ಲಿ ವಿದೇಶದಿಂದ ಭಾರತಕ್ಕೆ ೫೭ ಸಾವಿರ ಟನ್ ಆಹಾರ ಧಾನ್ಯಗಳು ಬಂದಿವೆಯೆಂದೂ ಇವುಗಳಲ್ಲಿ ೩೭ ಸಾವಿರ ಟನ್ ಗೋದಿ ೧೭ ಸಾವಿರ ಟನ್ ಅಕ್ಕಿ ಉಂಟೆಂದೂ ೧೯೪೭ ನೆಯ ವರ್ಷಾರಂಭದಿಂದ ಈ ವರೆಗೆ ಸುಮಾರು ೨೪ ಲಕ್ಷ ೯೦ ಸಾವಿರ ಟನ್ ಆಹಾರ ಧಾನ್ಯ ವಿದೇಶದಿಂದ ಬಂದಿದೆಯೆಂದೂ ತಿಳಿಯುತ್ತದೆ.

ಅ ಭಾ. ಹಿಂದೂ ಮಹಾ ಸಭೆಯ ಕಾರ್ಯದರ್ಶಿಗಳಾದ ಶ್ರೀ ದೇಶಪಾಂಡೆಯವರ ಮೇಲೆ ದಿಲ್ಲಿ ಮಹಾ ಸಭಾ ಭವನದ ಆವಾರ ಬಿಟ್ಟು ಹೋಗಕೂಡದೆಂದು ನಿರ್ಬಂಧವಿದ್ದು ಅದನ್ನು ದಿಲ್ಲಿ ಜಿಲ್ಹಾ ಮ್ಯಾಜಿಸ್ಟ್ರೇಟರ ೩ ವಾರಗಳ ಮಟ್ಟಿಗೆ ಸಡಿಲಿಸಿ ಅವರು ತಮ್ಮ ಮನೆಯ ಜನರನ್ನು ಕಾಣ ಹೋಗಲು ಅವಕಾಶವಿತ್ತಿದ್ದಾರೆ.

ಜಯಪುರದ ರಾಷ್ಟ್ರೀಯ ಮಹಾಸಭೆಯ ಬಹಿರಂಗ ಅಧಿವೇಶನವು ಡಿಸೆಂಬರ ತಾ ೧೮ ಮತ್ತು ೧೯ ಕ್ಕೆ ಮಧ್ಯಾಹ್ನ ೩ ರಿಂದ ರಾತ್ರಿ ೯ ರ ವರೆಗೆ ಸೇರುವದೆಂದೂ ಅಧ್ಯಕ್ಷರಾದ ಡಾ. ಪಟ್ಟಾಭಿಯವರು ಡಿಸೆಂಬರ ೧೫ ಮಧ್ಯಾಹ್ನ ಅಲ್ಲಿಗೆ ತಲುಪುವರೆಂದೂ ಅಂದೇ ಅಧ್ಯಕ್ಷರ ಮೆರವಣಿಗೆ ನಡೆಯುವದೆಂದೂ ತಿಳಿಯುತ್ತದೆ.

ಭಾರತದ ಗ ಜ ರಾದ ಶ್ರೀ ರಾಜಗೋಪಾಲಾಚಾರ್ಯರು ಬೆಲ್ಜಿಯಂ ಸರಕಾರದ ಪರವಾಗಿ ತಾ. ೨೭ ರಂದು ದಿಲ್ಲಿಯಲ್ಲಿ ಏರ್ಪಡಿಸಲಾದ ಬೆಲ್ಜಿಯಂ ಕಲಾಪ್ರದರ್ಶನದ ಉದ್ಘಾಟನ ಮಾಡಿದರು. ಈ ಪ್ರದರ್ಶನಕ್ಕೆ ಮುಖ್ಯ ಮಂತ್ರಿ ಪಂ. ಜವಾಹರಲಾಲರು, ವಿದ್ಯಾ ಸಚಿವ ಮೌ. ಅಬುಲ ಕಲಂ ಆಝಾದರು ವಿದೇಶ ರಾಯಭಾರಿಗಳೇ ಮೊದಲಾದವರು ಆಗಮಿಸಿದ್ದರು

ರಾಷ್ಟ್ರೀಯ ಮಜದೂರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಖಂಡುಭಾಯಿ ದೇಸಾಯಿ ಅವರು ಒಂದು ಸಂದರ್ಶನದಲ್ಲಿ "ಈ ಸಂಘದಲ್ಲಿ ೨೦೦ ಕೂಲಿಕಾರ ಸಂಸ್ಥೆಗಳ ೧೮೫ ಪ್ರತಿನಿಧಿಗಳಿದ್ದಾರೆಂದೂ ಈ ಸಂಘಕ್ಕೆ ಹತ್ತು ಲಕ್ಷ ಸದಸ್ಯರಿದ್ದಾರೆಂದೂ ರಾಷ್ಟ್ರದ ಇಂದಿನ ಪರಿಸ್ಥಿತಿಯಲ್ಲಿ ರೇಲ್ವೆ ಕೆಲಸಗಾರರು ಸಂಪು ಹೂಡಿದರೆ ರಾಷ್ಟ್ರಕ್ಕೆ ಅಪಾರ ಹಾನಿಯಾಗುವದೆಂದೂ ಹೇಳಿದರು

ಕಾಮನ್‌ವೆಲ್ತನೊಡನೆ ಅಖಂಡ ಸಂಬಂಧ ವಿಟ್ಟುಕೊಳ್ಳಲು ಒಂದು ಸಮಿತಿ ಕಂಡು ಹಿಡಿಯಲು ಪಂ. ಜವಾಹರಲಾಲರು ನಡೆಸಿದ ಪ್ರಯತ್ನಕ್ಕೆ ಸಾಮಾನ್ಯವಾಗಿ ಸರದಾರರ ಬೆಂಬಲವೂ ಇರುವದೆಂದು ತಿಳಿದು ಬರುತ್ತದೆ

ನವೆಂಬರ ತಾ. ೨೬ ಕ್ಕೆ ಕೂಡಿದ ಘಟನಾ ಸಮಿತಿಯ ಕಾಂಗ್ರೆಸ ಪಕ್ಷದ ಸಭೆಯಲ್ಲಿ ೧೯೪೮ ನೆಯ ಜಾನೇವರಿ ೨೬ ರಂದು ಸ್ವಾತಂತ್ರ್ಯ ದಿನಕ್ಕೆ ಹೊಸ ಘಟನೆಯನ್ನು ಅಂಗೀಕರಿಸತಕ್ಕದ್ದೆಂದು ನಿರ್ಧರಿಸಲಾಗಿದೆ.

ಸಂಯುಕ್ತಪ್ರಾಂತ

ಕಾಶಿಯ ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲಿ ತಾ ೨೬ ರಂದು ಸರದಾರ ವಲ್ಲಭಭಾಯಿ ಪಟೇಲರು ಮಾತನಾಡುತ್ತ, "ಪಂ. ನೆಹರು ಅವರು ಸರಕಾರವನ್ನು ಬಿಟ್ಟು ಹೊರಬಿದ್ದರೆ ಗತಿಯೇನಾದೀತೆಂಬುದನ್ನು ವಿಚಾರಿಸಿರಿ. ದೇಶಕ್ಕೆ ಚಂದ್ರಗ್ರಹಣ ಹಿಡಿದಂತಾಗುವದು. ಚಂದ್ರನೇ ಜಗತ್ತಿಗೆ ಬೆಳಕು ಕೊಡಬಲ್ಲನು. ನಾವೆಲ್ಲ ಚಿಕ್ಕ ಚಿಕ್ಕ ನಕ್ಷತ್ರಗಳಿದ್ದಂತೆ ಮಿಣಿಮಿಣಿ ಮಿನುಗುವವು ಅಷ್ಟೇ" ಎಂದು ಮೊದಲಾಗಿ ಉದ್ಗಾರ ತೆಗೆದರು.

ಹೈದರಾಬಾದ

ಅಖಿಲ ಹೈದರಾಬಾದ ಕಾಂಗ್ರೆಸ ಸಮಿತಿಯು ತಾ ೩೦ ರಂದು ಮೊದಲ ಸಲ ಕೂಡಿತು. ಸ್ವಾಮಿ ರಮಾನಂದ ತೀರ್ಥರು ಅಧ್ಯಕ್ಷತೆ ವಹಿಸಿದ್ದರು. ಇದು ಮೂರು ದಿನ ಕೂಡಿ ಹೈದರಾಬಾದದ ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸುವದು.

ಹಿಂದಕ್ಕೆ ಲಾಯಕ ಅಲಿ ಮಂತ್ರಿ ಮಂಡಲದಲ್ಲಿದ್ದ ಶ್ರೀ ರಾಮಾಚಾರ್ಯ ಮತ್ತು ಶ್ರೀ ಜೆ. ವ್ಹಿ. ಜೋಶಿಯವರು ಮಂತ್ರಿ ಪದಕ್ಕೆ ರಾಜಿನಾಮೆ ಕೊಟ್ಟ ಮೇಲೆ ಅವರ ಸ್ಥಳಗಳಿಗೆ ನೇಮಿಸಿಕೊಳ್ಳಲಾಗಿದ್ದ ಶ್ರೀ ಗೋವಿಂದರಾವ ಜುಡವೇಕರ ಶ್ರೀ ಶಂಕರರಾವ ಪಳಸೇಕರ ಎಂಬ ಇಬ್ಬರು ಮಂತ್ರಿಗಳ ವಿರುದ್ಧ ಯಾವ ಪುರಾವೆಯು ಇಲ್ಲದ್ದರಿಂದ ಬಿಡುಗಡೆ ಹೊಂದಿದ್ದಾರೆಂದು ತಿಳಿಯುತ್ತದೆ. ಉಳಿದ ಮಂತ್ರಿಗಳ ಜೊತೆಗೆ ಇವರನ್ನೂ ಅವರವರ ಮನೆಯಲ್ಲಿ ಬಂಧಿಸಿ ಇಡಲಾಗಿತ್ತು.

ಮ ಗಾಂಧಿಯ ಕೊಲೆಯ ಖಟ್ಲೆಯ ವಿಚಾರಣೆ ನಡೆಸಲು ಮುಖ್ಯ ಪೋಲೀಸ ಅಧಿಕಾರಿಯೆಂದು ನೇಮಿಸಲ್ಪಟ್ಟ ಶ್ರೀ ಜೆ. ಡಿ. ನಗರವಾಲಾರವರನ್ನು ಹೈದರಾಬಾದದ ಇನ್ಸಪೆಕ್ಟರ ಜನರಲರೆಂದು ನೇಮಿಸಲಾಗಿದ್ದು ಅವರಿಗೆ ಮುಖ್ಯವಾಗಿ ಮೀರಲಾಯಕ ಅಲಿ ಮಂತ್ರಿಮಂಡಲ ಹಾಗೂ ಕಾಶೀಂರಜವಿಯ ಮೇಲಿರುವ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸುವ ಕೆಲಸವನ್ನು ಒಪ್ಪಿಸಲಾಗುವದೆಂದು ತಿಳಿಯುತ್ತದೆ.

ಮೀರ ಲಾಯಕಅಲಿ ಮೊದಲಾದವರ ಆಸ್ತಿಯ ಜಪ್ತಿ

ಹೈದರಾಬಾದದ ಹಿಂದಿನ ಮುಖ್ಯ ಮಂತ್ರಿಗಳಾದ ಮೀರಲಾಯಕ ಅಲಿ ಹಾಗೂ ಅವರ ಮಂತ್ರಿಮಂಡಲದಲ್ಲಿದ್ದ ಇತರ ಮಂತ್ರಿಗಳು, ಭದ್ರತಾಮಂಡಲಕ್ಕೆ ಹೋದ ಹೈದರಾಬಾದ ಶಿಷ್ಟಮಂಡಲದ ಧುರೀಣರಾದ ಮೋಯಿನ ನವಾಜಜಂಗ, ಕರಾಚಿಯ ಏಜಂಟ ಜನರಲರಾಗಿದ್ದ ಮುಸ್ತಾಕ ಅಹಮ್ಮದ, ಲಂಡನದಲ್ಲಿ ಹೈದರಾಬಾದ ಏಜಂಟ ಜನರಲರಾಗಿದ್ದ ಮೀರ ನವಾಜ ಜಂಗ, ಹೈದರಾಬಾದ ಪೋಲೀಸ ಡಾಯರೆಕ್ಟರ ಜನರಲರಾಗಿದ್ದ ನವಾಬ ದೀನಯಾರಜಂಗ, ಇವರೇ ಮೊದಲಾದ ೭೭ ಜನರ ಆಸ್ತಿಯನ್ನು ಹೈದರಾಬಾದ ಮಿಲಿಟರಿ ಸರಕಾರದವರು ಜಪ್ತ ಮಾಡಿದ್ದಾಗಿ ನವೆಂಬರ ತಾ. ೨೫ ರಂದು ಆಜ್ಞೆ ಹೊರಟಿದೆ. ಈ ೭೭ ಜನರ ಒಡೆತನಕ್ಕೆ ಸೇರಿದ ಅಥವಾ ಇವರ ಆಪ್ತೇಷ್ಟರ ಹೆಸರಿನಿಂದ ಇದ್ದ ಸ್ಥಾವರ-ಜಂಗಮ ಆಸ್ತಿಯ ವಿಷಯದಲ್ಲಾದ ಎಲ್ಲ ವ್ಯವಹಾರಗಳೂ ರದ್ದುಗೊಳಿಸಲ್ಪಟ್ಟವೆಯೆಂದೂ ಹೇಳಲಾಗಿದೆ.

ಬಟ್ಟೆ ವ್ಯಾಪಾರಿಗಳಿಗೆ ಎಚ್ಚರಿಕೆ

ಅರಳಿ ಜವಳಿ ನಿಯಂತ್ರಣ ಹುಕುಮಿನ ೨೫ (೧) ಕಲಮಿನ ಮೇರೆಗೆ ೧೯೪೮ ನವೆಂಬರ ೩೦ ರ ನಂತರ ಹಿಂದುಸ್ತಾನದಲ್ಲಿ ಸಿದ್ಧವಾದ ಹಾಗು ೧೯೪೮ ಅಗಸ್ಟ ೩೧ ರ ಮೊದಲು ಮಾರ್ಕ ಆದ ಬಟ್ಟೆ ಮತ್ತು ನೂಲನ್ನು ಕೊಳ್ಳಲು ಮಾರಲು ಅಥವಾ ಹತ್ತರ ಇಟ್ಟುಕೊಳ್ಳಲು ಬರುವದಿಲ್ಲ. ಈ ತರದ ಸರಕನ್ನು ಮಾರಾಟ ಮಾಡಲು ಹೆಚ್ಚಿನ ಅವಧಿ ಇನ್ನು ಕೊಡಲಾಗುವದಿಲ್ಲ. ನವೆಂಬರ ೩೦ ರ ನಂತರ ಇಂತಹ ಬಟ್ಟೆಯನ್ನೂ ನೂಲನ್ನೂ ಇಟ್ಟುಕೊಂಡಿರುವದು ಅಪರಾಧವಾಗುವದು. ಇಂತಹ ಸರಕು ಇದ್ದವರು ೧೯೪೮ ಡಿಸೆಂಬರ ತಾ ೧೦ ರೊಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ತಮ್ಮಲ್ಲಿಯ ಸಂಗ್ರಹದ ವಿವರವನ್ನು ಪ್ರಾಂತಿಕ ಜವಳಿ ನಿಯಂತ್ರಕರಿಗೆ ತಿಳಿಸಿ ಅವರ ಅಪ್ಪಣೆಯಂತೆ ನಡೆದುಕೊಳ್ಳಬೇಕು. ತಪ್ಪಿದವರು ಶಿಕ್ಷೆಗೆ ಗುರಿಯಾಗುವರು ಎಂದು ಸರಕಾರಿ ಪ್ರಕಟನೆ ಹೊರಟಿದೆ.

ದಿಲ್ಲಿಯಲ್ಲಿ ಹೈದರಾಬಾದ ಸರಕಾರದ ಏಜಂಟ ಜನರಲ ಪದವನ್ನು ನವೆಂಬರ ತಾ. ೩೦ ರಿಂದ ರದ್ದುಗೊಳಿಸಲಾಗಿದೆ. ಈ ಹುದ್ದೆಯಲ್ಲಿದ್ದ ಶ್ರೀ ಎಂ. ಎ. ರಜವಿ ಇವರಿಗೆ ಆರು ತಿಂಗಳ ರಜೆ ಕೊಟ್ಟು ನಿವೃತ್ತಿಗೊಳಿಸಲಾಗಿದೆ.

ವಾರದ ಭವಿಷ್ಯ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ

ಡಿಸೆಂಬರ ತಾ. ೬ ರಿಂದ ತಾ. ೧೨ ರ ವರೆಗೆ

ಮೇಷ

ಮಕ್ಕಳಿಗೆ ತುಸು ಕ್ಲೇಶ ಆದರೆ ಉಳಿದವರ ಪ್ರಕೃತಿಯು ಉತ್ತಮವಾಗಿದೆ. ಪ್ರಪಂಚದಲ್ಲಿ ಸಣ್ಣ ಪುಟ್ಟ ತ್ರಾಸ ಬಂದೊದಗಿದರೂ ಕುಟುಂಬವೆಲ್ಲ ಪ್ರಗತಿಯ ಮಾರ್ಗದಲ್ಲಿಯೇ ಸಾಗುವದು ಪ್ರಿಯಜನರ ಸಹವಾಸ ಮತ್ತು ಮುಂದಿನ ಸುಖ ಸಮಾಧಾನಕ್ಕಾಗಿ ಊಹಾಪೋಹ. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಲಾಭವೂ ಉತ್ತಮವಾಗಿದ್ದು ಧಂದೆ ಅಥವಾ ನೌಕರಿಯಲ್ಲಿ ನಿಮ್ಮ ಹೆಸರನ್ನು ಗೌರವಪೂರ್ಣವಾಗಿ ಉಲ್ಲೇಖಿಸಲಾಗುತ್ತದೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಬಹಳ ಜಗ್ಗಾಟ ಕಂಡುಬರುತ್ತದೆ. ಮಿತ್ರಸುಖವು ಚನ್ನಾಗಿದೆ. ಪತ್ರವ್ಯವಹಾರವು ಮನಸ್ಸಿಗೆ ಮೆಚ್ಚುವಂತಹದು. ಭೆಟ್ಟಿಗಿಂತ ಪ್ರವಾಸವು ಅನುಕೂಲ. ಭರಣಿ ನಕ್ಷತ್ರಕ್ಕೆ ಮಾತ್ರ ತೊಂದರೆಯಿಂದಲೇ ಯಶ. ತಾ. ೬, ೭, ೮, ೧೨ ಇವು ಒಳ್ಳೆಯವು.

ವೃಷಭ

ನಿಮ್ಮ ಮತ್ತು ನಿಮ್ಮ ಹೆಂಡತಿಯ ಪ್ರಕೃತಿಯಲ್ಲಿ ಸತತವೂ ಕಿರುಕುಳ ಇದ್ದದ್ದೇ. ಮಕ್ಕಳ ಆರೋಗ್ಯ ನೆಟ್ಟಗೆ. ಆದರೆ ಮನೆಯಲ್ಲಿ ಒಬ್ಬ ಸ್ತ್ರೀಯು ನಿಮ್ಮ ಬಗ್ಗೆ ಇಲ್ಲದ ಬೊಬ್ಬಾಟವೆಬ್ಬಿಸುವಳು ನೌಕರ ಚಾಕರರಿಂದ ಆತಂಕ. ಉದ್ಯೋಗದಲ್ಲಿ ಲಾಭಕ್ಕಿಂತ ವೆಚ್ಚವೇ ಹೆಚ್ಚು. ಪ್ರಗತಿಯೂ ಪ್ರತಿಷ್ಠೆಯೂ ನೆಟ್ಟಗಿದೆ. ಆದರೆ ಪ್ರತಿಯೊಂದು ವಿಷಯದಲ್ಲಿಯೂ ನಿಮ್ಮದೆ ಕಾರಭಾರವೆನ್ನುವದು ಎದ್ದು ಕಾಣುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಎಷ್ಟೋ ಧನವ್ಯಯವಾದರೂ ಜಯದ ಆಶೆಯೂ ದೂರ ದೂರವೇ ಸರಿಯುವದು ವಾಯಿದಿಗಳಲ್ಲಿ ಉನ್ನತಿ. ಮಿತ್ರರು ತಿರಸ್ಕರಿಸುವರು. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ನೆಟ್ಟಗೆ. ಕೃತ್ತಿಕೆಯ ೩ ನೆಯ ರೋಹಿಣಿಯ ೧ ನೆಯ ಮತ್ತು ೩ ನೆಯ ಇದರಂತೆ ಮೃಗಾದ ೨ ನೆಯ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೯, ೧೦ ಇವು ಒಳ್ಳೆಯವು.

ಮಿಥುನ

ಹೆಂಡತಿ ಮಕ್ಕಳ ಆರೋಗ್ಯ ಉತ್ತಮ ಆದರೆ ಸ್ವಂತದ್ದು ಅಷ್ಟಕ್ಕಷ್ಟೇ. ಪ್ರಾಪಂಚಿಕ ತೊಂದರೆಯು ಹೆಚ್ಚುತ್ತ ಸಾಗುವದು. ಆಪ್ತರೂ ನೆರೆಹೊರೆಯವರೂ ಕೊಡಲು ಬಾರದಂತಹ ವಸ್ತುಗಳನ್ನು ಬೇಡುತ್ತಾರೆ. ಕೊಡದಿದ್ದರೆ ಡೊಂಕಾಗಿ ವ್ಯವಹರಿಸುತ್ತಾರೆ. ಉದ್ಯೋಗದಲ್ಲಿ ಒಳ್ಳೆ ಭರದಿಂದ ಪ್ರಗತಿಯಾಗುವದು. ಭಾಗ್ಯಸೂಚಕ ಪ್ರತಿಷ್ಠೆಯೂ ಪರಿಪೂರ್ಣಲಾಭವೂ ಕಂಡು ಬರುವದು. ಅನಿರೀಕ್ಷಿತ ಧನಲಾಭ ಸಂಭವವೂ ಉಂಟು. ದಾಯಾದಿಗಳು ತಿರಸ್ಕಾರದ ಉದ್ಗಾರ ತೆಗೆಯುವರು. ಅಪಥ್ಯ ಪದಾರ್ಥಗಳನ್ನು ತಿನ್ನುವತ್ತ ಮನಸ್ಸು ಹರಿವದು. ಮಿತ್ರ ಸುಖವು ನೆಟ್ಟಗಿದೆ. ಶತ್ರುಗಳು ಹಿಂದಿ ಹಿಪ್ಪೆಯಾಗಿ ಹೋಗುವರು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ನಿಮ್ಮ ತಪ್ಪಿನ ಮೂಲಕವೇ ಇಲ್ಲದ ತೊಡಕುಂಟಾಗುವದು. ಪತ್ರವ್ಯಹಾರಕ್ಕಿಂತ ಪ್ರವಾಸವೂ ಭೆಟ್ಟಿಯೂ ಅನುಕೂಲ. ಆರ್ದ್ರಾ ನಕ್ಷತ್ರಕ್ಕೆ ತೊಂದರೆ ಕಡಮೆ. ತಾ. ೯, ೧೦, ೧೧, ೧೨ ಇವು ಒಳ್ಳೆಯವು.

ಕರ್ಕ

ಹೆಂಡತಿ ಮಕ್ಕಳಿಗಿಂತ ನಿಮ್ಮ ಆರೋಗ್ಯವೇ ನೆಟ್ಟಗೆ. ಪ್ರಾಪಂಚಿಕ ಸ್ಥಿತಿಯಲ್ಲಿಯೂ ಸುಖದಾಯಕ ದುಃಖದಾಯಕ ಹೀಗೆ ಎರಡೂ ಬಗೆಯ ಪ್ರಸಂಗಗಳು ಬರುವವು, ನೌಕರ ಚಾಕರರ ಸುಖವು ಉತ್ತಮವಿದೆ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಲಾಭಗಳು ಎಣಿಸಿದಷ್ಟು ದೊರಕಿದರೂ ಪ್ರತಿಯೊಂದು ಕೆಲಸವನ್ನೂ ಒತ್ತಾಯದಿಂದಲೇ ಮಾಡಿಸಿಕೊಳ್ಳಬೇಕಾದ ಸಂದರ್ಭ ಬರುವವು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಇಬ್ಬರಿಗೂ ಸಮಾನಸ್ಥಿತಿ. ಹಗೆಗಳಲ್ಲಿ ಒಬ್ಬರನ್ನು ಹತ್ತಿಕ್ಕುವಷ್ಟರಲ್ಲಿ ಇನ್ನೊಬ್ಬರು ತಲೆ ಎತ್ತಿ ನಿಲ್ಲುವರು. ಮಿತ್ರರು ಹೊರಹೊರಗೆ ಪ್ರೇಮ ತೋರಿಸಿದರೂ ಒಳಗೊಳಗೆ ಸಂಶಯ ಬರುವಂತಹ ಭಾವನೆಗಳಿರುವವು. ಪ್ರವಾಸ ತೊಂದರೆಯದು. ಭೆಟ್ಟಿಯ ಕೆಲಸವು ಮೊದಲು ಕೆಟ್ಟಂತೆ ಕಂಡರೂ ಕೊನೆಗೆ ಹಾಗೂ ಹೀಗೂ ಕೈಗೂಡುವದು. ಪತ್ರವ್ಯವಹಾರವು ಹಿತಾವಹವಾಗಿದೆ. ಪುಷ್ಯ ನಕ್ಷತ್ರಕ್ಕೆ ತೊಂದರೆ ಕಡಮೆ. ತಾ. ೬, ೧೦, ೧೧, ಇವು ಒಳ್ಳೆಯವು.

ಸಿಂಹ

ಹೆಂಡತಿಯ ಆರೋಗ್ಯಕ್ಕೆ ಕಿರುಕುಳ. ಮಕ್ಕಳು ಅಸಮ ಸಾಹಸದ ಕೆಲಸ ಮಾಡಿ ವಿಜಯಶಾಲಿಗಳಾಗುವರಾದ್ದರಿಂದ ಅವರನ್ನು ಸಾರ್ವಜನಿಕವಾಗಿ ಶ್ಲಾಘಿಸಲಾಗುತ್ತದೆ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಬಹಳ ಉತ್ತಮ. ಅದರಂತೆ ವೆಚ್ಚವು ಹೆಚ್ಚಾಗುವದು. ಅತಿಥಿಗಳು ಮದುವೆಗೆ ಬಂದ ಹಾಗೆ ಬಂದು ನೆರೆಯುತ್ತಾರೆ. ವಾದಕ್ಕೂ ಸ್ಪರ್ಧೆಗೂ ಗುರಿಯಾದ ಕೆಲಸಗಳು ರಾಜಿಯಿಂದ ಬಗೆಹರಿಯುವ ಸಂಭವ. ಪ್ರವಾಸ ಮತ್ತು ಪತ್ರವ್ಯವಹಾರಗಳು ಭೆಟ್ಟಿಗಿಂತ ಹೆಚ್ಚು ನೆಟ್ಟಗೆ. ಪೂರ್ವಾ. ನಕ್ಷತ್ರಕ್ಕೆ ತೊಂದರೆಯಿಂದಲೇ ಯಶ ಲಭಿಸುವದು. ತಾ. ೭, ೮, ೧೨ ಇವು ಒಳ್ಳೆಯ ದಿನಗಳು.

ಕನ್ಯಾ

ಮಕ್ಕಳ ಆರೋಗ್ಯಕ್ಕೆ ತುಸು ತೊಂದರೆ ಆದರೆ ಉಳಿದವರೆಲ್ಲರದೂ ನೆಟ್ಟಗೆ. ಪ್ರಾಪಂಚಿಕ ಸುಖವು ಮನಸ್ಸಿಗೆ ತಕ್ಕಂತೆ ಆದರೆ ಆಪ್ತರ ಮತ್ತು ನೆರೆಹೊರೆಯವರ ಇಲ್ಲದ ಅಧಿಕ ಪ್ರಸಂಗದಿಂದ ಮನಸ್ಸು ಕ್ಷೋಭಗೊಳ್ಳುವದು. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಕುಂಟಿದರೂ ಮನಸ್ಸಿಗೆ ತಕ್ಕಂತೆ ಉಂಟು. ಲಾಭವೂ ಪರಿಪೂರ್ಣ ಲಭಿಸುವದು. ಮಿತ್ರ ಸುಖವು ನೆಟ್ಟಗಿದೆ. ಸ್ಥಾವರದ ದುರಸ್ತಿಗಾಗಿ ಬಹಳ ವೆಚ್ಚವಾಗುವದು. ವಾದದ ವಿಷಯದಲ್ಲಿಯೂ ಸ್ಪರ್ಧೆಯ ವಿಷಯದಲ್ಲಿಯೂ ಬಾಗಿನಡೆದರೇ ಹೆಚ್ಚು ಹಿತವಿದೆ. ಪ್ರವಾಸ ಭೆಟ್ಟಿಗಳಿಗಿಂತ ಪತ್ರವ್ಯವಹಾರವು ಹೆಚ್ಚು ಅನುಕೂಲ. ಉತ್ತರೆಯ ೩ ನೆಯ, ಹಸ್ತೆಯ ೧ ನೆಯ ಮತ್ತು ೩ ನೆಯ ಚಿತ್ರೆಯ ೧ ನೆಯ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೯, ೧೦, ೧೧, ಇವು ಒಳ್ಳೆಯ ದಿನಗಳು.

ತುಲಾ

ಆರೋಗ್ಯ ನೆಟ್ಟಗೆ. ಆದರೆ ಹೆಂಡತಿಯೊಡನೆ ರತಿಸುಖ ಒಂದನ್ನು ಬಿಟ್ಟರೆ ಉಳಿದಾವ ವಿಷಯದಲ್ಲಿಯೂ ಪರಸ್ಪರರಲ್ಲಿ ಒಂದು ಕ್ಷಣ ಸಹ ಕೂಡಿಬರುವದಿಲ್ಲ. ಇನ್ನುಳಿದ ಪ್ರಾಪಂಚಿಕ ಸ್ಥಿತಿಯು ಒಂದು ಗಳಿಗೆ ನಗೆಯದಾಗಿದ್ದರೆ ಇನ್ನೊಂದು ಗಳಿಗೆ ಅಳುವಿನದು. ಪೂಜ್ಯ ವ್ಯಕ್ತಿಗಳ ಸಹವಾಸ ಲಭಿಸುವದು. ಉದ್ಯೋಗದಲ್ಲಿ ಎಲ್ಲ ಬಗೆಯ ಸಮಾಧಾನವೂ ಲಭಿಸುವದು. ಚಾತುರ್ಯಮೂಲಕವಾಗಿ ಅನೇಕ ಕೆಲಸಗಳು ನೆರವೇರುವವು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆಯುಂಟು. ಮಿತ್ರರು ನಿಮ್ಮನ್ನು ಕಠೋರ ಹಾಸ್ಯಕ್ಕೆ ಗುರಿಮಾಡುವರು. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ಹೆಚ್ಚು ಅನುಕೂಲ. ಸ್ವಾತಿ ನಕ್ಷತ್ರಕ್ಕೆ ತೊಂದರೆ ಕಡಮೆ. ತಾ. ೭, ೮, ೧೨ ಇವು ಒಳ್ಳೆಯ ದಿನಗಳಾಗಿವೆ.

ವೃಶ್ಚಿಕ

ನಿಮ್ಮ ಪ್ರಕೃತಿಯು ನೆಟ್ಟಗೆ ಆದರೆ ಹೆಂಡತಿಯ ಆರೋಗ್ಯಕ್ಕೆ ತುಸು ಕಿರುಕುಳ. ಉಳಿದ ಸಂಗತಿಗಳಲ್ಲಿ ಪ್ರಾಪಂಚಿಕ ಸುಖವು ಉತ್ತಮ. ಇಷ್ಟ ಕಾರ್ಯಕ್ಕಾಗಿ ಹತ್ತರಿದ್ದ ದ್ರವ್ಯ ಸಂಗ್ರಹವೆಲ್ಲ ವೆಚ್ಚವಾಗಿ ಹೋಗುವದು ಪ್ರಗತಿ ಪ್ರತಿಷ್ಠೆ ಲಾಭ ಇವೆಲ್ಲವೂ ಮನಸ್ಸಿನಂತೆ ಆಗುವ ಮಧ್ಯಮ ಸ್ಥಿತಿ. ಮಿತ್ರ ಸುಖವು ನೆಟ್ಟಗಿದೆ. ಪತ್ರವ್ಯವಹಾರಕ್ಕಿಂತ ಪ್ರವಾಸವೂ ಭೆಟ್ಟಿಯೂ ನೆಟ್ಟಗೆ. ಅನುರಾಧಾ ನಕ್ಷತ್ರಕ್ಕೆ ತೊಂದರೆ ಕಡಮೆ. ತಾ. ೬, ೧೦, ೧೧ ಇವು ಒಳ್ಳೆಯ ದಿನಗಳು.

ಧನು

ನಿಮ್ಮ ಆರೋಗ್ಯ ನೆಟ್ಟಗೆ ಆದರೆ ಹೆಂಡತಿಯ ಪ್ರಕೃತಿಯ ಬಗ್ಗೆ ತುಸು ಮುಂಜಾಗ್ರತೆ ವಹಿಸಬೇಕು. ಮಕ್ಕಳು ಮನಬಲ್ಲಂತೆ ವರ್ತಿಸುವರು. ಬೇಡವಾದವರ ಸಹವಾಸದಲ್ಲಿರಬೇಕಾದ ಪ್ರಸಂಗ. ಉದ್ಯೋಗದಲ್ಲಿ ಲಾಭವು ಮಧ್ಯಮ. ಆದರೆ ಪ್ರಗತಿಯೂ ಪ್ರತಿಷ್ಠೆಯೂ ಕುಸಿಯುವ ಸ್ಥಿತಿ. ಪರೋಪಕಾರ ಮಾಡಿದರೂ ಅನೇಕರು ಸಂಶಯಾಸ್ಪದ ಆರೋಪ ಹೊರಿಸುವ ಭೀತಿಯಿದೆ. ಮಿತ್ರಸುಖವು ನೆಟ್ಟಗಿದೆ. ಆದರೆ ಶತ್ರುಗಳು ಕುಣಿದಾಡುವರು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅಪಯಶ. ಪ್ರವಾಸಾದಿ ಕಾರ್ಯಗಳು ಆಗದಿದ್ದರೇ ನೆಟ್ಟಗೆ. ಪೂರ್ವಾಷಾಢಕ್ಕೆ ಹೆಚ್ಚು ತ್ರಾಸು. ತಾ. ೬, ೭, ೮ ಇವು ಒಳ್ಳೆಯ ದಿನಗಳು.

ಮಕರ

ನಿಮ್ಮ ಪ್ರಕೃತಿಯಲ್ಲಿ ಕಿರುಕುಳ ಹೆಚ್ಚಿಕೊಂಡರೂ ಹೆಂಡರು ಮಕ್ಕಳ ಆರೋಗ್ಯ ಚೆನ್ನಾಗಿದೆ. ಪ್ರಾಪಂಚಿಕ ಸುಖವು ಸಾಧಾರಣ ನೆಟ್ಟಗೆ. ಸ್ಥಾವರದಲ್ಲಿ ತುಸು ಹಾನಿ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಉತ್ತಮ. ಆದರೆ ಲಾಭ ಮಾತ್ರ ಎಣಿಕೆಗಿಂತ ಕಡಮೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಸಮಾನ ಸ್ಥಿತಿ. ಮಿತ್ರರು ಇಲ್ಲದ ಉಪದ್ರವ ಕೊಡುವರು. ಒಬ್ಬ ಪೂಜ್ಯ ವ್ಯಕ್ತಿಯ ದರ್ಶನ ಮತ್ತು ೧–೨ ದಿನಗಳ ಸಹವಾಸಯೋಗ. ಪ್ರವಾಸಾದಿ ಕಾರ್ಯಗಳು ... ಉತ್ತರಾಷಾಢದ ೩ ನೆಯ, ಶ್ರವಣದ ೧ ನೆಯ ಮತ್ತು ೩ ನೆಯ, ಧನಿಷ್ಠೆಯ ೨ ನೆಯ ಚರಣಗಳಿಗೆ ತ್ರಾಸ ಕಡಮೆ. ತಾ. ೬, ೭, ೮ ಇವು ಒಳ್ಳೆಯ ದಿನಗಳು.

ಕುಂಭ

ಆರೋಗ್ಯ ಉತ್ತಮ. ಪ್ರಾಪಂಚಿಕ ಸುಖವೂ ನೆಟ್ಟಗೆ. ಎಲ್ಲ ಕೆಲಸಗಳಲ್ಲಿಯೂ ಸಾಹಸದಿಂದ ವರ್ತಿಸುವ ಪ್ರವೃತ್ತಿ. ಉದ್ಯೋಗದಲ್ಲಿ ಅಪ್ರತಿಮ ಪ್ರಗತಿ. ದಿನದಿನಕ್ಕೆ ಪ್ರತಿಷ್ಠೆಯು ವರ್ಧಿಸುವದು ಮತ್ತು ದ್ರವ್ಯ ಲಾಭವೂ ಪರಿಪೂರ್ಣವಾಗಿದೆ. ಆದರೆ ಆಶೆಯ ವೈಶಾಲ್ಯವು ಮುಗಿಲುದ್ದ ವ್ಯಾಪಿಸಿ ಮನಸ್ಸಿಗೆ ಅಸಂತುಷ್ಟಿಯೇ ಭಾಸವಾಗುವದು. ಸದೆಸುಗಳಲ್ಲಿ ವಿಶೇಷ ದರ್ಪ ತೋರ್ಪಡಿಸುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ. ಪ್ರವಾಸಾದಿ ಕಾರ್ಯಗಳು ಉತ್ತಮ. ಶತತಾರಕೆಗೆ ಹೆಚ್ಚು ಉತ್ತಮ. ತಾ. ೭, ೮, ೯, ೧೦ ಇವು ಒಳ್ಳೆಯವು.

ಮೀನ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ಉತ್ತಮ. ಆದರೂ ಹಾಗಿಲ್ಲವೆಂದು ಇಲ್ಲದ ತಕರಾರ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಲಾಭ ಇವು ಮಧ್ಯಮ. ಕೆಲವು ವಸ್ತುಗಳ ಅಥವಾ ದ್ರವ್ಯದ ಅನಿರೀಕ್ಷಿತ ಲಾಭ ಯೋಗ. ಆಪ್ತವರ್ಗದ ಒಬ್ಬ ಸ್ತ್ರೀ ವಿಷಯಕವಾಗಿ ಪಾಪ ಬುದ್ಧಿ ಉಂಟೆಂಬ ಸಂಶಯವು ಮನೆಯಲ್ಲಿಯ ಜನದಲ್ಲಿ ಮೂಡುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಜಯ. ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರಾಭಾದ್ರಪದಕ್ಕೆ ಹೆಚ್ಚು ಉತ್ತಮ ತಾ. ೬, ೧೦, ೧೧, ೧೨ ಇವು ಒಳ್ಳೆಯ ದಿನಗಳು.

ಪುಸ್ತಕ ಪರಿಚಯ

[[illegible] -ಸಂ]

ವಿಜಯಯಾತ್ರೆ

ಲೇಖಕರು, ಶ್ರೀ. ವಿ. ಎಂ. ಇನಾಮದಾರ. ಪ್ರಕಾಶಕರು, ಶ್ರೀ ಬೆಳಗಾವಿ ರಾಮಚಂದ್ರ ರಾಯರು, ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ. ಪುಟಗಳು ೧೪೩, ಬೆಲೆ ೨ ರೂಪಾಯಿ.

ಕನ್ನಡ ಕಾದಂಬರಿ ರಂಗದಲ್ಲಿ ನವ ವಿಧಾನ ಪ್ರಾರಂಭಿಸಲು ಪ್ರಯತ್ನಿಸಿದ ಕಾದಂಬರಿಗಳಲ್ಲಿ ಪ್ರಾ. ಇನಾಮದಾರರ 'ವಿಜಯಯಾತ್ರೆ' ಕಾದಂಬರಿಯೊಂದು ಎಂದು ಹೇಳಬಹುದು.

ಕಾದಂಬರಿಯ ಕಥಾಂಶ ಹೀಗಿದೆ.

ವಿಜಯ ಮನೋರಮೆಯರು ಕಾಲೇಜ ವಿದ್ಯಾರ್ಥಿ-ವಿದ್ಯಾರ್ಥಿನಿಯರು. ಕಾಲೇಜ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರ ಸ್ನೇಹ ಪರಿಚಯವು ಪ್ರೇಮಕ್ಕೆ ತಿರುಗುತ್ತದೆ. ಆದರೆ ದೇಶಕ್ಕೆ ಸ್ವಾತಂತ್ರ್ಯ ದೊರೆಯದೇ ವಿವಾಹವಾಗಲಾರೆವೆಂದು ನಿರ್ಧರಿಸಿರುವರು. ಆ ರೀತಿಯಾಗಿ ಪರಸ್ಪರ ವಚನವನ್ನೂ ಕೊಟ್ಟಿರುವರು. ವಿಜಯ ಸ್ವಾತಂತ್ರ್ಯಾಂದೋಲನದಲ್ಲಿ ಮೂರು ಬಾರಿ ಸೆರೆಮನೆ ಕಂಡು ನಿರ್ವಿಣ್ಣನಾಗಿ, ಮನೋರಮೆ ಡಾಕ್ಟರಣಿಯಾಗಿ ಕೆಲಸ ಮಾಡುತ್ತಿರುವ ಆಸ್ಪತ್ರೆಯಲ್ಲಿ ಅವಳ ಸಹಾಯದಿಂದ ಆರೈಕೆಗಾಗಿ ಬಂದು ಸೇರುವನು. ವಿಜಯನ ಸಲಹೆಯಿಂದಲೇ ಮನೋರಮೆ ಡಾಕ್ಟರಣಿಯಾಗಿ ಸಾರ್ವಜನಿಕ ಸೇವೆಗಾಗಿ ದುಡಿಯುತ್ತಿರುವಳು. ೧೯೪೭ ಅಗಸ್ಟ ೧೫ ಸ್ವಾತಂತ್ರ್ಯ ಭಾರತಕ್ಕೆ ಸಿಕ್ಕ ದಿನ. ಅದಕ್ಕಿಂತ ಹಿಂದಿನ ದಿನವೇ ವಿಜಯ, ತಾನು ಬದುಕುವ ಆಸೆಯಿಲ್ಲ. ವಿವಾಹಕ್ಕಾಗಿ ಹಟ ಹಿಡಿಯಬಾರದು ಎಂದು ಮನೋರಮೆಗೆ ಉಸುರುತ್ತಾನೆ. ವಿಜಯನ ದಿನಚರಿಯನ್ನೋದಿದ ನಂತರವೂ ಮನೋರಮೆ ಹಿಂದಿನ ನಿರ್ಧಾರದಿಂದ ಕದಲುವದಿಲ್ಲ. ವಿಜಯ ನಿರ್ವಾಹವಿಲ್ಲದೇ ಒಪ್ಪುತ್ತಾನೆ. ಅಂದೇ ರಾತ್ರಿ ೧೨ ಗಂಟೆಗೆ ಸ್ವಾತಂತ್ರ್ಯೋತ್ಸವದ ಪ್ರಥಮ ದಿನಾಚರಣೆಯೆಂದು ಧ್ವಜಾರೋಹಣವನ್ನು ಆಸ್ಪತ್ರೆಯ ಮುಖ್ಯ ಡಾಕ್ಟರರು ಮೈದಾನದಲ್ಲಿ ನಿರ್ವಹಿಸುವರು. ವಿಜಯ ಅಂದು ಮುಂಜಾನೆ ತನ್ನನ್ನು ಕಾಣಲು ಬಂದ ಗೆಳೆಯನೆದುರು ಸ್ವಾತಂತ್ರ್ಯದ ಬಗ್ಗೆ ನಿರಾಶೆಯ ನುಡಿಗಳನ್ನಾಡಿದರೂ ಸ್ವಾತಂತ್ರ್ಯೋತ್ಸವ ನೋಡಬೇಕೆಂಬ ಹಂಬಲ ಅವನಲ್ಲಿ ಬಲವಾಗಿ ಇತ್ತದೆ. ಆದರೆ ಆಕಸ್ಮಿಕವಾಗಿ ಅವನಿಗೆ ಜ್ವರ ಬಂದುದರಿಂದ ಉತ್ಸವಕ್ಕೆ ಅವನು ಹೋಗುವದು ಸಾಧ್ಯವಿಲ್ಲವೆಂದು ಮನೋರಮೆಯು ತಿಳಿಸುವಳು. ನಿರಾಶೆಯಿಂದ ತಳಮಳಿಸುತ್ತಿದ್ದ ವಿಜಯ ಧ್ವಜವಂದನೆಯು ಮಳೆಯ ಮೂಲಕ ಆಸ್ಪತ್ರೆಯ ಹಾಲಿನಲ್ಲಿ ನಡೆಯುವದೆಂಬುದನ್ನರಿತು ಕಸಿವಿಸಿಗೊಳ್ಳುವನು. ಹಾಲಿನಲ್ಲಿ ಮಧ್ಯರಾತ್ರಿ ನಡೆದ ಸ್ವಾತಂತ್ರ್ಯೋತ್ಸವ ಕಂಡು ತಡೆಯದವನಾಗಿ ಅಂತಹ ವಿಪನ್ನಾವಸ್ಥೆಯಲ್ಲಿಯೇ ಏಳುತ್ತ ಬೀಳುತ್ತ ಹೊಟ್ಟೆ ಹೊಸೆಯುತ್ತ ಮೈದಾನಕ್ಕೆ ಬಂದು ಧ್ವಜದ ಹಗ್ಗವನ್ನು ಜಗ್ಗಿ ಬಲಗುಂದಿದ್ದರಿಂದ ಎಚ್ಚರ ತಪ್ಪಿ ಆ ರೊಜ್ಜಿನಲ್ಲಿಯೇ ಬಿದ್ದು ಬಿಡುವನು. ಮನೋರಮೆ ಅಂದು ತಮ್ಮ ವಿವಾಹವಾಗುವದೆಂದು ಸಂಭ್ರಮದಲ್ಲಿದ್ದವಳು ಈ ದುರ್ಘಟನೆಯಿಂದ ಪರಿತಪಿಸುವಳು. ವಿಜಯ ಆಗ ಬಿದ್ದವನು ತಿರುಗಿ ಚೇತರಿಸುವದಿಲ್ಲ. ಮರುದಿನ ಸಾಯಂಕಾಲ ಅವನ ಅಂತ್ಯಯಾತ್ರೆ ವಿಜಯೋತ್ಸವದ ಮೆರವಣಿಗೆಯ ಸಮ್ಮುಖದಿಂದ ಸಾಗಿ ಹೋಗುವದು.

ಕಾದಂಬರಿಯನ್ನು ಓದಿದ ನಂತರ ಅದರಲ್ಲಿ ಇಷ್ಟು ಕಥೆಯಿದೆಯೆಂದು ಕಂಡು ಬರುವದು.

ಕಾದಂಬರಿಕಾರರಲ್ಲಿ ಕಥೆಯನ್ನು ಹೇಳುವ ಶಕ್ತಿ ಸಾಕಷ್ಟಿದೆಯೆಂದು ಕಂಡು ಬಂದರೂ ಕಾದಂಬರಿಯಲ್ಲಿ ಕಥೆಯ ಓಟವಿಲ್ಲ. ಕಾದಂಬರಿಕಾರರು ದಿನಚರಿ, ಪತ್ರ, ತಮ್ಮ ನಿರೂಪಣೆ ಇವೇ ಮೊದಲಾದವುಗಳಿಂದ ಕಥೆಯನ್ನು ವಾಚಕರೆದುರು ಇಡಲು ಪ್ರಯತ್ನಿಸಿದ್ದಾರೆ. ಆದರೆ ಇದರಿಂದ ಕಥಾನಕದ ಸ್ಪಷ್ಟ ನಿರೂಪಣೆಯಾಗಿಲ್ಲ. ಅಲ್ಲಲ್ಲಿ ಕಥೆಯ ಓಟವು ಕುಂಠಿತವಾಗಿ, ವೈಯಕ್ತಿಕ ವಿಚಾರಗಳಿಗೆ ಪ್ರಧಾನತೆ ದೊರಕಿದೆ. ಹೀಗಾಗಿ ವಾಚಕನು ಗೊಂದಲದಲ್ಲಿ ಬೀಳದಿರನು. ಕಾದಂಬರಿಕಾರರು ಇದರಲ್ಲಿ ಹೊಸ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿರುವದೇನೋ ನಿಜ. ಶ್ರೀರಂಗರ ಪುರುಷಾರ್ಥ ಕಾದಂಬರಿಯಲ್ಲಿಯೂ ಈ ಸ್ವಾತಂತ್ರ್ಯೋತ್ಸವದ ವಿವೇಚನೆಯನ್ನು ಹೊಸ ವಿಧಾನದಲ್ಲಿ ಮಾಡಿದ್ದು ವಾಚಕರಿಗೆ ವಿದಿತವಿದೆ. ಅದೇ ಸ್ವಾತಂತ್ರ್ಯೋತ್ಸವದ ವಿವೇಚನೆಯನ್ನು ಹೆಚ್ಚು ಕಡಿಮೆ ಪುರುಷಾರ್ಥದ ಮಾರ್ಗದಲ್ಲಿಯೇ ಕಾದಂಬರಿಕಾರರು ಮಾಡಲೆತ್ನಿಸಿದ್ದಾರೆ. ಶ್ರೀರಂಗರ ಪುರುಷಾರ್ಥವು ವಿಚಾರ ಪ್ರಧಾನ ಕಾದಂಬರಿಯಾಗಿ ಭಾವನೆಗೆ ಅವಕಾಶವೀಯದೆ ಜನಪ್ರಿಯವಾಗಲಿಲ್ಲ. ಪ್ರಸ್ತುತ ಕಾದಂಬರಿಯಾದರೂ ಭಾವನಾಪ್ರಧಾನವಾಗಿ ವಿಚಾರಕ್ಕೆ ಆಸ್ಪದವೀಯದ್ದರಿಂದ ಜನಪ್ರಿಯವಾಗಲಾರದು ಎಂದು ಅನಿಸುವದು. ಈ ಭಾವನಾಪ್ರಧಾನತೆಯ ವೈಶಿಷ್ಟ್ಯವೆನ್ನುವಂತೆ ಕಾದಂಬರಿಯ ಕೊನೆಯ ಸನ್ನಿವೇಶ ತೀರ ಅಸ್ವಾಭಾವಿಕವಾಗಿ ಹೋಗಿದೆ. ಕರುಳು ಬೇನೆಯಿಂದ ನರಳುತ್ತಿರುವ ವಿಜಯನಿಗೆ ಅಂದು ಜ್ವರ ಬಂದಿದ್ದರೂ ಅವನು ತೀರ ನಿಶ್ಶಕ್ತನಾಗಿದ್ದರೂ ಧ್ವಜಸ್ತಂಭಕ್ಕೆ ಬಂದು ಧ್ವಜಹಾರಿಸಲು ಪ್ರಯತ್ನಿಸುತ್ತಾನೆ. ವಿಜಯನು ಸ್ಪೇಶಲ್ ವಾರ್ಡಿನಲ್ಲಿ ಇರುವವ. ನಾಲ್ಕಾರು ವಾರ್ಡುಗಳನ್ನು ದಾಟಿ ಮೈದಾನಕ್ಕೆ ಹೋಗಬೇಕು.. ಮೇಲೆ ಅತಿಯಾಗಿ ಮಳೆಯಾಗಿದೆ. ಈ ಎಲ್ಲ ಅಡೆತಡೆಗಳಿದ್ದರೂ ವಿಜಯನಿಗೆ ಹಿಂದಿನ ಹುಮ್ಮಸ್ಸಿನ ನೆನಪಾಗುವದು. ಲಾಠಿ ಗುಂಡುಗಳ ಮಳೆಯಲ್ಲಿ ಧ್ವಜಹಾರಿಸಿದವನು ಮಳೆಗೇಕೆ ಅಂಜಬೇಕೆಂಬ ತಾತ್ಸಾರದಿಂದ ಆವೇಶಭರಿತನಾಗಿ ಹೋಗಿರಬೇಕೆಂದು ಇಟ್ಟು ಕೊಳ್ಳುವ. ಆಸ್ಪತ್ರೆಯಲ್ಲಿ ವಾರ್ಡು ವಾರ್ಡುಗಳಲ್ಲಿ ಸಮಯಕ್ಕೆ ಸರಿಯಾಗಿ ಕೆಲಸ ಮಾಡುತ್ತಿದ್ದ ದಾದಿಯರು, ಸೇವಕರು ಅವನನ್ನು ತಡೆಯಲಿಲ್ಲವೇ ಎಂಬುದು ಸಂಶಯಾಸ್ಪದವಾಗಿಯೇ ಉಳಿದಿದೆ. ಒಂದು ವೇಳೆ ಅಂದು ಸ್ವಾತಂತ್ರ್ಯ ಉತ್ಸವದಲ್ಲಿ ಭಾಗವಹಿಸಲು ಎಲ್ಲರೂ ತೆರಳಿದ್ದರಿಂದ ಅಲ್ಲಿ ಯಾರೂ ಉಳಿದಿರಲಿಲ್ಲವೆಂದು ಹೇಳಬಹುದು. ಆದರೆ ಆಸ್ಪತ್ರೆಯ ನಿಯಮಗಳಿಗೆ ಇದು ತೀರ ವಿಸಂಗತವಾದ ವಿಷಯವಾಗಿದೆ. ಅಲ್ಲದೆ ೯ ತಿಂಗಳುಗಳ ವರೆಗೆ ಕರಳು ಬೇನೆಯಿಂದ ನರಳಿ ಅಂದು ಜ್ವರದಿಂದ ಪೀಡಿತನಾಗಿ ತೀರ ನಿಶ್ಶಕ್ತನಾದ ವಿಜಯ ಸುಮಾರು ಒಂದು ಫರ್ಲಾಂಗಿನ ವರೆಗೆ ಹೋದನೆಂದರೆ ನಂಬುವದು ಹೇಗೆ? ಅಂದು ಮುಂಜಾನೆ ಗೆಳೆಯ ರಂಗಣ್ಣನೊಡನೆ ಮಾತನಾಡುವಾಗ ೧೫ ನಿಮಿಷ ಕಾಲ ಕೂತು ಮಾತನಾಡಿ ಒಮ್ಮೆಲೆ ಹಾಸಿಗೆಯಲ್ಲಿ ಉರುಳಿದವನು ಈ ದೀರ್ಘ ಅಂತರವನ್ನು ಕ್ರಮಿಸಲು ಯತ್ನಿಸಿದ್ದು ಹೇಗೆ ಎಂಬುದನ್ನು ಸರಿಯಾಗಿ ಕಾದಂಬರಿಕಾರರು ಪರ್ಯಾಲೋಚಿಸಿದಂತೆ ಕಾಣಲಿಲ್ಲ. ಕಾದಂಬರಿಯಲ್ಲಿ ಮೊದಲಿನಿಂದ ಕೊನೆಯ ವರೆಗೂ ಮನೋರಮೆಯ ಹೆಸರಿನ ಹೊರತಾಗಿ ಅವಳ ಮನೆತನದ ಅಷ್ಟೇ ಸ್ಪರ ಉಲ್ಲೇಖವೇ ಇಲ್ಲ.

ಕಾದಂಬರಿಯ ಕಾಲಪರಿಮಿತಿಯ ದೃಷ್ಟಿಯಿಂದ ಒಂದು ಮಹತ್ವದ ಮಾತನ್ನು ಅನಿವಾರ್ಯವಾಗಿ ಇಲ್ಲಿ ಹೇಳಬೇಕಾಗಿದೆ. ಕಾರಂತರ 'ಬೆಟ್ಟದ ಜೀವ' ಕಾದಂಬರಿ ಹೊರಬಿದ್ದಾಗ ನಾಲ್ಕು ದಿವಸಗಳಲ್ಲಿಯ ಸಂಗತಿಗಳನ್ನು ಹೇಳುವ ಇದೆಂತಹ ಕಾದಂಬರಿಯೆಂದು ಕೆಲವರು ಮೂಗು ಮುರಿದರು. ಅವರು ಪುರುಷಾರ್ಥ ಮತ್ತು ವಿಜಯಯಾತ್ರೆಗಳ ಬಗೆಗೆ ಏನು ಹೇಳುವರು? ಕಾದಂಬರಿಗೆ ಕಾಲ ಪರಿಮಿತಿಯ ಅವಧಿಯಿಂತಿಷ್ಟಿರಬೇಕೆಂಬ ನಿರ್ಧಾರವೇನಿಲ್ಲ. ಆದರೆ ಅಲ್ಪಾವಧಿಯಲ್ಲಿಯೂ ಸಮಗ್ರ ಜೀವನ ಚಿತ್ರ [illegible] ಕಾದಂಬರಿಯನ್ನು [illegible] ಕಾದಂಬರಿಕಾರರು ಸಮಾಧಾನಕರವಾಗಿ ಚಿತ್ರಿಸಿಲ್ಲ. [illegible] ಮುಂಜಾನೆ ಆಕ್ಕೆ ಪ್ರಾರಂಭವಾಗಿ ಮರು ದಿನ ಸಂಜೆಗೆ ಮುಗಿದು ಬಿಡುತ್ತದೆ.

ಕಾದಂಬರಿಯು ದೋಷಪೂರಿತವಾಗಿದೆಯೆಂದು ಕಂಡುಬಂದರೂ ಕಾದಂಬರಿಕಾರರ ಕಥನಶೈಲಿಯಲ್ಲಿ ಓದುಗನಿಗೆ ಅಷ್ಟು ಬೇಸರ ಬೆನಿಸಲಾರದು. ಅಲ್ಲಲ್ಲಿಯ ಭಾವನೆಗಳ ಪರಿಪಕ್ವತೆಯಿಂದ ಶೈಲಿಯ ಸರಳತೆ ಒಡೆದು ಕಾಣುವದು. ಕಾದಂಬರಿಕಾರರಿಗೆ ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಶೇಷತಃ ಸಂತ್ರಸ್ತರ ಬಗ್ಗೆ ಕಟು ಅನುಭವ ಬಂದಿರಬೇಕೆಂಬುದು ವಿಜಯನ ನಿರಾಶಾವಾದದ ವರ್ಣನೆ, ರಂಗಣ್ಣನ ಸಮಂಜಸ ಬುದ್ಧಿಯ ಪ್ರಭಾವಗಳಿಂದ ಕಂಡುಬರುವದು. ಕಾದಂಬರಿಕಾರರು ಇನ್ನು ಬರೆಯಬಹುದಾದ ಕಾದಂಬರಿಗಳಲ್ಲಿ ಇಂತಹ ದೋಷಗಳಾಗದಂತೆ ನೋಡಿಕೊಳ್ಳುವರೆಂದು ನಂಬಿಗೆಯನ್ನು ವ್ಯಕ್ತಪಡಿಸೋಣವೆ?

ಪಡುವಣ

ಇದೊಂದು ತರುಣ ಲೇಖಕರ ಪ್ರಾದೇಶಿಕ ನೀತಿ ರೀತಿಗಳ ಪರಿಚಯಾತ್ಮಕ ಬರೆಹ. ಉತ್ತರ ಕನ್ನಡದ ಜೀವನ ಪರಿಚಯವನ್ನು ಹನ್ನೆರಡು ಚಿಕ್ಕ ಚಿಕ್ಕ ಕತೆಗಳ ಮುಖಾಂತರ ಮಾಡಿಕೊಡಲು ಲೇಖಕರು ಪ್ರಯತ್ನಿಸಿದ್ದಾರೆ. ಬೆಚ್ಚು, ಸುಗ್ಗಿ ಹುಣ್ಣಿಮೆ, ಸಪ್ಪರತಿ ಕಲ್ಲು, ಬಂಗೀಮುಕ್ಕ, ಬಾಗಲ ಜಟ್ಟಿ, ಮುಂಡಾಸ, ಹೊಸತು, ಕ್ರಾಂತಿಕಥೆ, ಸುಬ್ಬಿ, ರಾತ್ರಿಶಾಲೆ ಗ್ರಹಣಕರಿ ಮತ್ತು ಕಡಲಿನಲ್ಲಿ ಈ ಹನ್ನೆರಡು ಕತೆಗಳನ್ನು 'ಪಡುವಣ' ಒಳಗೊಂಡಿದೆ. ಲೇಖಕರು ತರುಣರಾದರೂ ವಿಷಯ ವಿವೇಚನೆಯ ರೀತಿ ಶ್ಲಾಘನೀಯವಾಗಿದೆ. ಸಾಕಷ್ಟು ಅನುಭವವಿಲ್ಲದ್ದರಿಂದಲೋ ಏನೋ ಅಲ್ಲಲ್ಲಿ ಪರಿಚಯ ಸಪ್ಪೆಯಾಗುತ್ತದೆ, ಓದುಗರ ಮೇಲೆ ಆಗಬೇಕಾದಷ್ಟು ಪರಿಣಾಮವಾಗುವದಿಲ್ಲ ಆದರೂ ಈ ಪುಸ್ತಕವನ್ನೋದಿದ ಉತ್ತರ ಕನ್ನಡಿಗರಲ್ಲದ ಇತರ ಕನ್ನಡಿಗರಿಗೆ ಆ ಭಾಗದ ಜೀವನದ ಬಗ್ಗೆ, ರೀತಿ ನೀತಿಗಳ ಬಗ್ಗೆ ಪರಿಚಯವುಂಟಾಗದಿರದು. ಲೇಖಕರ ಶೈಲಿ ಸರಳವಾಗಿದೆ. ಪ್ರಾದೇಶಿಕ ಶಬ್ದಗಳನ್ನು ವಿಶೇಷವಾಗಿ ಬಳಸಿದ್ದರಿಂದ ಕೆಲವೆಡೆ ಓದುಗರಿಗೆ ಸರಿಯಾಗಿ ಅರ್ಥವಾಗದೆ ಹೋಗುವ ಸಂಭವವಿದೆ ಅಂತಹ ಶಬ್ದಗಳಿಗೆ ವಿವರಣೆ ಕೊಟ್ಟಿದ್ದರೆ ಚೆನ್ನಾಗಿತ್ತು. ತರುಣ ಲೇಖಕರಾದ ಶ್ರೀ ಪು. ಸು. ಭಟ್ಟರು ಇನ್ನಷ್ಟು ಅರಿತವರಾಗಿ ನುರಿತವರೂ ಆಗಿ ಕನ್ನಡಕ್ಕೆ ಹೆಚ್ಚಿನ ಸಾಹಿತ್ಯ ಸೇವೆಯನ್ನು ಸಲ್ಲಿಸಲಿ.

ಸಾದರ ಸ್ವೀಕಾರ

ಶ್ರೀಕೃಷ್ಣ ಪಂಚಾಂಗ ಉಡುಪಿ

(ವಿರೋಧಿ ಸಂವತ್ಸರ ಶಕೆ ೧೮೭೨) ಪಂಚಾಂಗಕರ್ತರು, ಶ್ರೀಲಕ್ಷ್ಮೀನಾರಾಯಣ ಅಡಿಗ. ಪ್ರಕಾಶಕರು, ಮೆಜಿಸ್ಟಿಕ್ ಪ್ರೆಸ್ ಉಡುಪಿ. ಪುಟಗಳು ೭೪ ಬೆಲೆ ೮ ಆಣೆ

ಶ್ರೀ ಮಾರುತಿ ಪಂಚಾಂಗ ಉಡುಪಿ

(ವಿರೋಧಿ ಸಂವತ್ಸರ ಶಕೆ ೧೮೭೨) ಗೋಪಾಡಿ ನಾರಾಯಣ ಉಪಾಧ್ಯಾಯರ ಪುತ್ರ ಕೃಷ್ಣ ಉಪಾಧ್ಯಾಯ ಪ್ರಣೀತ. ಪ್ರಕಾಶಕರು, ಮೆಜಿಸ್ಟಿಕ್ ಪ್ರೆಸ್ ಉಡುಪಿ. ಪುಟಗಳು ೬೬ ಬೆಲೆ ೮ ಆಣೆ.

ಮುಂದಿನ ವರ್ಷದ ಪಂಚಾಂಗಗಳು ಈಗಾಗಲೇ ಬಂದಿದ್ದು, ಇವುಗಳಿಗೆ ಸ್ವಾಗತ ಬಯಸುತ್ತೇವೆ. ಆರ್ಯಭಟ ವಾಕ್ಯಕರಣ ರೀತ್ಯಾ ನಿತ್ಯ ಪಂಚಾಂಗ, ನವೀನ ದೃಕ್ಸಿದ್ಧಾಂತ ರೀತ್ಯಾ ಗ್ರಹಣ ಗ್ರಹಸ್ಫುಟಾದಿಗಳು ಸಿದ್ಧವಾಗಿವೆ.

ಕಿರಣ (ವಾರಪತ್ರಿಕೆ)

ಸಂಪಾದಕರು, ಶ್ರೀ ಅಘನಾಶಿನಿ ಶಂಕರ, ಶಿರಸಿ (ಉ. ಕ) ವಾರ್ಷಿಕ ಚಂದಾ ೫ ರೂ ಬಿಡಿ ಸಂಚಿಕೆ ೨ ಆಣೆ. ಹೊಸದಾಗಿ ಜನ್ಮವೆತ್ತಿದ ಕಿರಣವು ತೇಜಸ್ವಿಯಾಗಿ ನಾಡಿನಲ್ಲೆಲ್ಲ ಬೆಳಗಲೆಂದು ಹಾರೈಸುತ್ತೇವೆ.

ಮಹಾತ್ಮಾ ಗಾಂಧಿ

ಲೇಖಕರು, ಶ್ರೀ ಕೆ. ಅನಂತ ಸುಬ್ಬರಾವ. ಪ್ರಕಾಶಕರು, ಶ್ರೀ ಎಸ್. ಎನ್. ಗುಪ್ತ, ಕಟಕ, ೫೦, ಅರಳೇಪೇಟೆ, ಬೆಂಗಳೂರು ನಗರ.. ಚಿಕ್ಕಚಿಕ್ಕ ಪುಟಗಳು ೫೨, ಬೆಲೆ ೪ ಆಣೆ.

ಇದು ಗಾಂಧೀಜಿಯ ಸಂಕ್ಷಿಪ್ತ ಚರಿತ್ರೆ. ಮಕ್ಕಳಿಗೆ ಓದಲು ಅನುಕೂಲವಾಗಿದೆ.

ಈ ವಾರದ ಕತೆ

[೨ನೆಯ ಪುಟದಿಂದ]

ಗಳಂತೆ ಉದ್ದವಾಗಿವೆಯೆ? ಎಂದು ತಮ್ಮ ಕಿವಿಗಳನ್ನು ಮುಟ್ಟಿ ನೋಡಿದರು. ಗಿಳಿಯ ಕೊಕ್ಕಿನಂತಾಗಿದೆಯೋ ಎಂದು ಬಾಯನ್ನು ಪರೀಕ್ಷಿಸಿಕೊಂಡರು. ಆದರೆ ಹಾಗೇನೂ ಆಗಿರಲಿಲ್ಲ.

"ನನ್ನನ್ನು ಕ್ಷಮಿಸು . . . . . ನನ್ನನ್ನು ಉಳಿಸು . . . ." ಸಾಹೇಬರು ಗದ್ಗದರಾಗಿ ನುಡಿದರು. "ರೂಪಾಯಿ ಕೊಡುವುದಿಲ್ಲವೆ?" ಸಂಯುಕ್ತೆ ಸೆಟೆದು ನಿಂತು ಪ್ರಶ್ನಿಸಿದಳು.

"ಕೊಡುವೆ; ಕೊಡುವೆ; ಆದರೆ ಇನ್ನೆಂದಿಗೂ ನನಗೆ ಕಾಣಿಸಿಕೊಳ್ಳುವುದಿಲ್ಲವೆಂದು ಮಾತು ಕೊಡು"

"ನನ್ನ ಕೆಲಸ ಮುಗಿದ ಬಳಿಕ ನಾನೇಕೆ ತಮಗೆ ಕಷ್ಟಕೊಡಲಿ!"

ಖಾನ್ ಸಾಹೇಬರು ಮರು ಮಾತಾಡದೆ ಹೋಗಿ ಒಂದು ಸಾವಿರ ರೂಪಾಯಿ ತಂದು ಅವಳಿಗೊಪ್ಪಿಸಿದರು.

"ನನಗೆ ಇನ್ನೂ ಒಂದು ಸಾವಿರ ರೂಪಾಯಿ ಬೇಕು." "ಈಗಿಲ್ಲ"

"ಉಳಿದುದಕ್ಕಾಗಿ ತಿರುಗಿ ಬರಬೇಕೆ?"

"ಬೇಡ, ಬೇಡ," ಎನ್ನುತ್ತಾ ಸಾಹೇಬರು ಮತ್ತೂ ೧೦೦೦ ರೂಪಾಯಿ ತಂದು ಕೊಟ್ಟರು. ನೋಟುಗಳನ್ನು ಚೆನ್ನಾಗಿ ಪರೀಕ್ಷಿಸಿ, ಲೆಕ್ಕ ಮಾಡಿ, ಸಂಯುಕ್ತೆಯು ಮುಗುಳು ನಕ್ಕು, ಸಾಹೇಬರಿಗೆ ನಮಸ್ಕಾರ ಮಾಡುತ್ತಾ ಹೊರಟು ಹೋದಳು.

ಹೀಗೆ ೨೦೦೦ ರೂಪಾಯಿ ಕಳೆದುಕೊಂಡ ಬಳಿಕ ಮೂರನೇ ದಿನ ಟೈಪು ಮಾಡಲ್ಪಟ್ಟ ಪತ್ರವೊಂದು ಅಂಚೆಯ ಮೂಲಕ ಖಾನ ಸಾಹೇಬರಿಗೆ ತಲಪಿತು. ಆದರಲ್ಲಿ ಹೀಗಿತ್ತು.—

"ರೂಪಾಯಿಗಳಿಗಾಗಿ ಅನಂತ ಧನ್ಯವಾದಗಳು.

ಬಂಗಾಲೀ ಹುಡುಗಿಯರ *ವಿವಾಹಗಳಲ್ಲಿ ಹಣವೆಷ್ಟು ವೆಚ್ಚವಾಗುವುದೆಂಬುದು ತಮಗರಿತ ವಿಷಯವೇ. ಆದ್ದರಿಂದ ತಮ್ಮ ಹಣವು ಒಂದು ಸತ್ಕಾರ್ಯದಲ್ಲಿ ಖರ್ಚಾಗುವುದರಿಂದ ತಾವು ಬೇಸರಿಸುವ ಅಗತ್ಯವಿಲ್ಲ. ಇದರಲ್ಲಿ ತಮಗೂ ಸತ್ಫಲ ದೊರೆಯುವುದು. ನಿಮ್ಮ ಜಾತ್ಯತೀತ ಔದಾರ್ಯಕ್ಕೆ ನಾವು ಉಪಕೃತರಾಗಿದ್ದೇವೆ. ತಂದೆಯವರ ಸಾಂಪತ್ತಿಕ ಸ್ಥಿತಿ ತುಂಬ ಕೆಟ್ಟಿದೆ. ಹೀಗಿರಲು ಅವರು ನಮ್ಮಿಬ್ಬರ ಮದುವೆಯನ್ನೆಂತು ಮಾಡಿಯಾರು? ನಾವಿಬ್ಬರೂ ಒಂದೇ ಬಣ್ಣದ, ಒಂದೇ ರೂಪದ ಒಂದೇ ವಯಸ್ಸಿನ ಅವಳಿ ಮಕ್ಕಳು. ಇಬ್ಬರಿಗೂ ಮದುವೆಯಾಗಬೇಕು. ಹಣವಿಲ್ಲದೆ ಇದು ಹೇಗೆ ಸಾಧ್ಯ? ಗೊತ್ತಾದ ನಮ್ಮೀರ್ವರ ಮದುವೆ ಧನವಿಲ್ಲದೆ ನಿಂತು ಹೋಗಿತ್ತು. ಇನ್ನು ಒಂದು ವಾರದಲ್ಲಿ ನಮ್ಮ ಮದುವೆ. ನೀವು ಧನ ಒದಗಿಸಿ ಸಹಾಯ ನೀಡಿದಿರಿ. ಈ ಸಹಾಯಕ್ಕಾಗಿ ಪುನಃ ಅಭಿನಂದನೆಗಳು. ಅನುಕೂಲವಾದರೆ ವಧೂವರರು ನಿಮ್ಮನ್ನು ಕಾಣುತ್ತೇವೆ.

ತಮ್ಮ
ಸಂಯುಕ್ತಾ ಸಹೋದರಿಯರು.

ಪತ್ರವನ್ನೋದಿ ಖಾನ್ ಸಾಹೇಬರು ಬೆಕ್ಕಸಬೆರಗಾದರು. ಅವರಿಗೆ ತಮ್ಮ ೨೦೦೦ ರೂಪಾಯಿ ಕಳೆದು ಹೋದುದಕ್ಕಾಗಿ ವಿಷಾದವೆನಿಸಲಿಲ್ಲ. ಆದರೆ ಸುಳ್ಳು ಹೆದರಿಕೆಯಲ್ಲಿ ಬಿದ್ದು ವ್ಯರ್ಥವಾಗಿ ಒಂದು ಸುಸಂಧಿಯನ್ನು ಕಳೆದುಕೊಂಡೆನಲ್ಲಾ' ಎಂದು ಅವರಿಗೆ ದುಃಖವಾಯಿತು.

ಅದೇ ದಿನ ಅಡಿಗೆಯವನಿಗೆ ಕೋಣೆಯ ಕಸದೊಟ್ಟಿಗೆ ಒಂದು ಕಪ್ಪು ದಾರ, ಮುರಿದ ಯಂತ್ರ, ಮತ್ತು ಅಂತಹದೇ ಮೂರು ಬೇರೆ ವಸ್ತುಗಳೂ ದೊರೆತವು.

*ಬಂಗಾಲಿಯಿಂದ

ಜವಳಿ ಕೂಲಿಕಾರರ ಸಂಪೆ?

ನಾಗಪುರ ಜವಳಿ ಕೆಲಸಗಾರರ ಸಂಘವು ಆರ್. ಎಸ್. ರೂಯಿಕರರ ಅಧ್ಯಕ್ಷತೆಯಲ್ಲಿ ಕೂಡಿ ಜವಳಿ ಕೂಲಿಕಾರರು ಡಿಸೆಂಬರ ೧೫ ರಿಂದ ಸಂಪು ಹೂಡುವ ಉದ್ದೇಶವನ್ನು ತಿಳಿಸುವ ನೋಟೀಸನ್ನು ಗಿರಣಿಯ ಒಡೆಯರಿಗೆ ಕೊಡಬೇಕೆಂದು ನಿರ್ಧರಿಸಿತು ಕೂಲಿಕಾರರಿಗೆ ೩ ತಿಂಗಳ ಬೋನಸ್ಸನ್ನೂ ಜವಳಿ ಉದ್ಯೋಗದಲ್ಲಿ ಬಂದ ಲಾಭದ ಅರ್ಧಪಾಲನ್ನೂ ಸಂಘವು ಬೇಡಿದೆ. ನಾಗಪುರದಲ್ಲಿಯ ಎರಡು ಜವಳಿ ಗಿರಣಿಗಳಿದ್ದು ಅವೆರಡರಲ್ಲಿಯೂ ಕೂಡಿ ಸುಮಾರು ೩ ಸಾವಿರ ಕೂಲಿಕಾರರು ಇದ್ದಾರೆ.

ಈ ಪತ್ರಿಕೆಯನ್ನು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು